## ಶನಿವಾರ, ೬ನೇ ನವೆಂಬರ್, ೧೯೪೮

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦.೦೦ ಗಂಟೆಗೆ ಮಾನ್ಯ ಉಪಾಧ್ಯಕ್ಷರು ಡಾ. ಎಚ್.ಸಿ. ಮುಖರ್ಜಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### **ಪ್ರಸ್ತಾವ ಕರಡು ಸಂವಿಧಾನ ಕುರಿತು** (ಮುಂದುವರಿದುದು)

**ಶ್ರೀ ಅರುಣ್ ಚಂದ್ರ ಗುಹ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಸ್ವತಂತ್ರ ಭಾರತದ ಮೊದಲ ಸಂವಿಧಾನಕ್ಕೆ ಅಂತಿಮ ಸ್ಪರ್ಶ ಕೊಡಲು ನಾವು ಇಲ್ಲಿ ಸೇರಿದ್ದೇವೆ. ನಮ್ಮ ಜೀವನದ ತುಂಬ ಗಮನಾರ್ಹವಾದ ಕ್ಷಣ ಇದಾಗಿದೆ ಮತ್ತು ಈ ಸಮಯದಲ್ಲಿ ಈಗಾಗಲೇ ನಾವು ಕಂಡಿರುವ ತೊಂದರೆ ಮತ್ತು ಹೋರಾಟದ ವರ್ಷಗಳನ್ನು ನೆನಪು ಮಾಡಿಕೊಳ್ಳದಿರಲು ನನ್ನಿಂದ ಆಗುತ್ತಿಲ್ಲ. ನಾವು ಹಲವು ಒಡನಾಡಿಗಳನ್ನು ಕಳೆದುಕೊಂಡಿದ್ದೇವೆ; ಇಡೀ ರಾಷ್ಟ್ರ ಹಲವಾರು ತೊಂದರೆಗಳು ಮತ್ತು ಬಲಿದಾನಗಳನ್ನು ಅನುಭವಿಸಿದೆ. ನಮ್ಮ ಭವಿಷ್ಯದ ಹಣೆಬರಹ ಮತ್ತು ನಮ್ಮ ಭವಿಷ್ಯದ ಸಂವಿಧಾನಕ್ಕೆ ರೂಪಕೊಡಲು ಇಲ್ಲಿ ಸೇರಿರುವಾಗ, ನಾವು ಕಳೆದಿರುವ ಹೋರಾಟದ ಸುದೀರ್ಘ ಕಾಲದಲ್ಲಿ ನಮ್ಮನ್ನು ಅಗಲಿದ ಸುರೇಂದ್ರನಾಥ ಬ್ಯಾನರ್ಜಿ, ಲಜಪತ್‌ರಾಯ್, ಮೋತಿಲಾಲ್ ನೆಹರು, ದೇಶಬಂಧು ಚಿತ್ತರಂಜನ್ ಮತ್ತು ಇತರ ಹಲವರು ಯಾರೆಲ್ಲ ನಮ್ಮನ್ನು ಹೋರಾಟದಲ್ಲಿ ಮುನ್ನಡೆಸಿದರೋ ಮತ್ತು ಕಡೆಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು, ಇವರೆಲ್ಲರ ಸ್ಮರಣೆಗೆ ನಾನು ತಲೆಬಾಗಲೇಬೇಕು ಹಾಗೂ ನಮ್ಮ ಆತ್ಮೀಯ ವಲಯದಲ್ಲಿ, ವಿಶೇಷವಾಗಿ ಬಂಗಾಳದಲ್ಲಿ ಹೋರಾಟದ ಎಲ್ಲ ಕಾಲದಲ್ಲಿ ನಮ್ಮನ್ನು ಮುನ್ನಡೆಸಿದ ನಮ್ಮ ಇತರ ಗೆಳೆಯರು ಸಾರ್ವಜನಿಕರಿಗೆ ಕಡಮೆ ತಿಳಿದಿರುವವರಾದರೂ, ದೇಶದ ಹಿತ ಕಾಯುವಲ್ಲಿ ಅವರೇನೂ ಕಡಿಮೆ ಪ್ರಾಮಾಣಿಕತೆ ಮತ್ತು ವಿಧೇಯತೆ ತೋರಿಲ್ಲ. ನಾನು ಯಾವ ಕಾರ್ಮಿಕರ ವಲಯದಿಂದ ಕೆಲಸಮಾಡುತ್ತಿರುವೆನೋ ಅಲ್ಲಿ ನೋಡಿದರೆ ಕಾರ್ಮಿಕರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಹೋರಾಟದಲ್ಲಿ ಭಾಗಿಗಳಾಗಿರುವರು. ಮಾನ್ಯರೆ, ನಾನು ಕಡೇಪಕ್ಷ ಅಂತಹ ಕೆಲವರ ಹೆಸರನ್ನಾದರೂ ಎಂದರೆ ಜತೀಂದ್ರನಾಥ ಮುಖರ್ಜಿ, ಸ್ವಾಮಿ ಪ್ರಜ್ಞಾನಂದ ಸರಸ್ವತಿ, ಸೂರ್ಯಸೇನ್, ಭಗತ್‌ಸಿಂಗ್ ಮತ್ತು ಇತರರನ್ನು ನೆನಪು ಮಾಡಿಕೊಳ್ಳದೆ ಇರಲಾರೆ. ಅವರು ವ್ಯಾಪಕವಾಗಿ ಪ್ರಸಿದ್ಧರಲ್ಲವಾದರೂ ಈ ಕಾರಣಕ್ಕಾಗಿ ಸೇವೆ ಸಲ್ಲಿಸಿ ಕೊಡುಗೆ ನೀಡಿದ್ದಾರೆ ಕೂಡ.

ಈಗ ಕರಡು ಸಂವಿಧಾನಕ್ಕೆ ಬರುತ್ತೇನೆ. ಕರಡು ರಚನಾಸಮಿತಿ ನಿಯಮ ನಿಬಂಧನೆಗಳನ್ನು ಮೀರಿಹೋಗಿದೆ ಎಂದು ನನಗೆ ಆತಂಕವಾಗಿದೆ. ಇಡೀ ಸಂವಿಧಾನವನ್ನು ನಮ್ಮ ಮುಂದೆ ಇರಿಸಲಾಗಿದೆ. ಸಂವಿಧಾನ ರಚನಾಸಭೆಯು ಹಾಕಿಕೊಟ್ಟ ಹಲವು ಸಿದ್ಧಾಂತಗಳನ್ನು ದಾಟಿ ಹೋಗಿದೆ ಎಂದು ನನಗೆ ಶಂಕೆ. ಇಡೀ ಕರಡು ಸಂವಿಧಾನದಲ್ಲಿ ನಾವು ಕಾಂಗ್ರೆಸ್ ದೃಷ್ಟಿಕೋನವಿರುವ, ಗಾಂಧೀಜಿಯವರ ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಕೋನವಿರುವ ಯಾವ ಅಂಶವನ್ನೂ ಕಾಣುತ್ತಿಲ್ಲ. ಚೆನ್ನಾಗಿ ತಿಳಿದಿರುವ ಡಾ.ಅಂಬೇಡ್ಕರ್ ತಮ್ಮ ಸುದೀರ್ಘ ಮತ್ತು ವಿದ್ವತ್ಪೂರ್ಣ ಭಾಷಣದಲ್ಲಿ ಗಾಂಧೀಜಿ ಅಥವಾ ಕಾಂಗ್ರೆಸ್ ಅನ್ನು ಉಲ್ಲೇಖಿಸಲು ಯಾವ ಸಂದರ್ಭವನ್ನೂ ಕಂಡುಕೊಂಡಿಲ್ಲ. ಇಡೀ ಸಂವಿಧಾನ ಕಾಂಗ್ರೆಸ್ ಆದರ್ಶ ಮತ್ತು ವಿಶೇಷವಾಗಿ

ಕಾಂಗ್ರೆಸ್ ಸಿದ್ಧಾಂತವನ್ನು ಬಿಂಬಿಸುವಲ್ಲಿ ಲೋಪವಾಗಿದೆ ಎಂದು ಭಾವಿಸಿರುವುದರಿಂದ ಅದು ಅಚ್ಚರಿ ಉಂಟುಮಾಡುತ್ತಿಲ್ಲ. ನಾವು ಒಂದು ಸಂವಿಧಾನವನ್ನು ರೂಪಿಸ ಹೊರಟಾಗ, ಅದು ಕೇವಲ ರಾಜಕೀಯೇತರ ಸಂರಚನೆಯಷ್ಟೆ ಅಲ್ಲ; ಅದು ನಾವು ಸಜ್ಜುಗೊಳಿಸಲು ಹೊರಟ ಕೇವಲ ಆಡಳಿತಾತ್ಮಕ ಮಂತ್ರವಷ್ಟೆ ಅಲ್ಲ; ಅದು ರಾಷ್ಟ್ರದ ಸಾಮಾಜಿಕ ಮತ್ತು ಆರ್ಥಿಕ ಭವಿಷ್ಯಕ್ಕೆ ಒಂದು ಸಾಧನ.

ಆರ್ಥಿಕ ವ್ಯವಸ್ಥೆಯ ಕಡೆಗೆ, ಕರಡು ಸಂವಿಧಾನ ಬಹುತೇಕ ಮೌನವಿದೆ. ಅದು ಹೆಚ್ಚಾಗಿ ಆಸ್ತಿಯ ಮಾನ್ಯತೆಯನ್ನು ರಕ್ಷಿಸುವಲ್ಲಿ ಕುತೂಹಲ ತೋರಿದೆ. ಅದು ಹೆಚ್ಚಾಗಿ ಯಾರು ಉಳ್ಳವರೋ, ಅವರ ಹಕ್ಕುಗಳನ್ನು ರಕ್ಷಿಸುವಲ್ಲಿ ಆಸಕ್ತಿ ತೋರಿದೆ. ಮತ್ತು ಅದು ಯಾರು ಏನನ್ನೂ ಪಡೆದಿಲ್ಲವೋ ಅಂಥವರ ಬಗ್ಗೆ ಮೌನ ತಾಳಿದೆ. ಆಸ್ತಿಯ ಮಾನ್ಯತೆ ಮತ್ತು ಆಸ್ತಿಯ ಅನುಲ್ಲಂಘನೆ ಕುರಿತು ಸಾಕಷ್ಟಿರುವಲ್ಲಿ, ಕೆಲಸಮಾಡಲು ಹಕ್ಕು ಜೀವನೋಪಾಯದ ಮಾರ್ಗದ ಹಕ್ಕು ಮತ್ತು ವಿಶ್ರಾಂತಿಯ ಹಕ್ಕು ಮೊದಲಾದ ವಿಷಯಗಳನ್ನು ಕೈ ಬಿಡಲಾಗಿದೆ ಮತ್ತು ಈ ವಿಷಯಗಳನ್ನು ಸಂವಿಧಾನದಲ್ಲಿ ಪರಿಣಾಮಕಾರಿಯಾಗಿ ಸೇರಿಸಬೇಕಿತ್ತು.

ಮೂಲಭೂತ ಹಕ್ಕುಗಳ ವಿಷಯಕ್ಕೆ ಬಂದರೆ, ಡಾ.ಅಂಬೇಡ್ಕರ್ ಚೆನ್ನಾಗಿ ತಿಳಿದ ಪ್ರಾಧ್ಯಾಪಕರು ಮತ್ತು ನಾನು ಅವರ ಪಾಂಡಿತ್ಯ ಮತ್ತು ಅವರ ಸಾಮರ್ಥ್ಯವನ್ನು ಗುರುತಿಸುತ್ತೇನೆ ಮತ್ತು ಈ ಕರಡು ಸಂವಿಧಾನ ಮುಖ್ಯವಾಗಿ ಅವರ ಕರಕೌಶಲ ಎಂದು ನಾನು ತಿಳಿದಿದ್ದೇನೆ.

ತಮ್ಮ ಪ್ರಸ್ತಾವನಾಭಾಷಣದಲ್ಲಿ, ಅವರು ಒಂದು ಬಗೆಯ ಸೈದ್ಧಾಂತಿಕ ಚರ್ಚೆಯಲ್ಲಿ ತೊಡಗಿದರು. ಅವರು ಒಂದು ಹೊಸ ಶಬ್ದವನ್ನು ಪರಿಚಯಿಸಿದ್ದಾರೆ; ಮಾನ್ಯರೆ, ಜಗತ್ತಿನಲ್ಲಿ ಸಂಪೂರ್ಣ ಎನಿಸುವ ಯಾವ ಹಕ್ಕೂ ಇಲ್ಲ ಎಂದು ಭಾವಿಸುತ್ತೇನೆ. ಪ್ರತಿಯೊಂದು ಹಕ್ಕು ತನ್ನೊಂದಿಗೆ ಯಾವುದೋ ಹೊಣೆ ಹೊತ್ತಿರುತ್ತದೆ; ಜವಾಬ್ದಾರಿ ಇಲ್ಲದೆ ಯಾವುದೇ ಹಕ್ಕು ಇರಲು ಸಾಧ್ಯವಿಲ್ಲ. ಆದುದರಿಂದ, ಮೂಲಭೂತ ಹಕ್ಕುಗಳು ಸಂಪೂರ್ಣವಲ್ಲ ಎಂಬ ಅಂಶದ ಆಧಾರದ ಮೇಲೆ ವಾದಿಸಿ ಯಾವ ಉಪಯೋಗವೂ ಇಲ್ಲ. ಇವು ಸಾಪೇಕ್ಷ ಇರಬೇಕು ಎಂದು ನಾನು ಬಲ್ಲೆ; ಆದರೆ ಹಾಗೆಂದ ಮಾತ್ರಕ್ಕೆ ಮೂಲಭೂತ ಹಕ್ಕುಗಳಿಗೆ ಯಾವುದೋ ನಿಬಂಧನೆಗಳನ್ನು ಹಾಕಿ ನಿಷೇಧಿಸಬೇಕು ಎಂದು ಅರ್ಥವಲ್ಲ. ಮೂಲಭೂತ ಹಕ್ಕುಗಳ ಭಾಗದಲ್ಲಿ ನಮೂದಾಗಿರುವ ಎಲ್ಲ ಹಕ್ಕುಗಳನ್ನು ಕೆಲವು ನಿಬಂಧನೆಗಳನ್ನು ಮತ್ತು ಕೆಲವು ಉಪಖಂಡಗಳನ್ನು ಹಾಕುವುದರ ಮೂಲಕ ಕೂಡಲೇ ನಿಷೇಧಿಸಲಾಗಿದೆ. ಕರಡು ರಚನಾಸಮಿತಿ ಸಂವಿಧಾನದೊಳಗೇ ಈ ಉಪಬಂಧಗಳನ್ನು ಹಾಕದೇ ಇದ್ದಿದ್ದರೆ ಅತ್ಯುತ್ತಮವಾಗಿರುತ್ತಿತ್ತು. ಆಗ ಭವಿಷ್ಯದ ಸರ್ಕಾರಕ್ಕೆ ಮೂಲಭೂತ ಹಕ್ಕುಗಳನ್ನು ರೂಪಿಸುವಲ್ಲಿ ಮುಕ್ತವಾಗಿ ವರ್ತಿಸಲು ಸಾಮರ್ಥ್ಯವಿರುತ್ತಿತ್ತು. ಆದರೆ ಈಗ ಇವನ್ನು ಸಂವಿಧಾನದೊಳಗೇ ಸೇರಿಸಿರುವುದರಿಂದ ಸಂವಿಧಾನವನ್ನು ಅದು ವಿಸ್ತೃತ ತಳಹದಿ ಹೊಂದಿರುವಂತೆ ಮಾಡಲು ತಿದ್ದುಪಡಿಮಾಡುವುದು ಒಂದು ಪ್ರಶ್ನೆ. ಆದುದರಿಂದ ನಾನು ಸದನವನ್ನು ಮೂಲಭೂತ ಹಕ್ಕುಗಳನ್ನು ಹೆಚ್ಚಾಗಿ ಮುಚ್ಚುಮರೆಯಿಲ್ಲದೆ ಹಾಕುವುದೋ ಅಥವಾ ಸಂವಿಧಾನದಿಂದ ಇಡೀ ಅಧ್ಯಾಯವನ್ನೇ ತೆಗೆದು ಹಾಕುವುದೋ ಮಾಡಬೇಕೆಂದು ಕೋರುತ್ತೇನೆ. ಹಾಗಾಗಿ ಭವಿಷ್ಯದ ಸರ್ಕಾರ ಕಾಲದ ಅಗತ್ಯಗಳಿಗೆ ಅನುಗುಣವಾಗಿ ಮೂಲಭೂತ ಹಕ್ಕುಗಳನ್ನು ರೂಪಿಸಬಹುದು ಮತ್ತು ಕೆಲವು ತೊಡಕುಗಳನ್ನು ಉಂಟುಮಾಡಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವ ತೊಂದರೆಯಿಂದ ತಪ್ಪಿಸಬಹುದು.

ಬಳಿಕ ಮಾನ್ಯರೆ, ಡಾ.ಅಂಬೇಡ್ಕರ್ ಅವರು ಗ್ರಾಮಘಟಕಗಳನ್ನು ಕುರಿತು ಕೆಲವು ಟೀಕೆಗಳನ್ನು ಅಂಗೀಕರಿಸಿರುತ್ತಾರೆ. ನಾವು ಹಲವು ವರ್ಷಗಳಿಂದ ಕಾಂಗ್ರೆಸ್ಸಿನಲ್ಲಿದ್ದೇವೆ. ನಮಗೆ ಗ್ರಾಮಪಂಚಾಯಿತಿಗಳು ಆಡಳಿತಾತ್ಮಕ ಭವಿಷ್ಯದ ಆಧಾರ ಎಂದು ಬೋಧಿಸಲಾಗಿದೆ. ಗಾಂಧಿಯವರ ಮತ್ತು ಕಾಂಗ್ರೆಸ್ಸಿನ ದೃಷ್ಟಿಕೋನದಂತೆ ಭಾರತದ ಸಂವಿಧಾನವು ಪಿರಮಿಡ್ ಅಂದರೆ ಗೋಪುರಾಕೃತಿಯಲ್ಲಿ ರಚಿಸಲ್ಪಟ್ಟಿರುತ್ತೆ ಮತ್ತು ಅದರ ಆಧಾರ ಗ್ರಾಮಪಂಚಾಯಿತಿಗಳು ಎಂದು ಇದ್ದಿತು. ಡಾ.ಅಂಬೇಡ್ಕರ್ ಪ್ರಕಾರ ಗ್ರಾಮಗಳು ಭಾರತವನ್ನು ನಾಶಮಾಡುತ್ತವೆ

ಎಂಬುದಾಗಿದೆ. ಗ್ರಾಮಗಳು ಅಜ್ಞಾನದ ಗವಿ ಆಗಿವೆ. ಅದು ಹಾಗಿರುವುದಾದರೆ, ಕಾರಣ ಅದು ಪಟ್ಟಣಗಳಲ್ಲಿ ವಾಸಿಸುತ್ತಿರುವ ನಮ್ಮಿಂದಾಗಿಯೇ ಆಗಿದೆ. ಎಂದರೆ ಯಾರು ವಿದೇಶಿ ಅಧಿಕಾರಶಾಹಿ ಮತ್ತು ವಿದೇಶಿ ಆಡಳಿತದಡಿ ಮೆರೆಯುತ್ತಿರುವೆವೋ ಅವರಿಂದ ಆಗಿದೆ. ನಮ್ಮ ಹಳ್ಳಿಗಳು ಹಸಿವಿನಿಂದ ಕಂಗಾಲಾಗಿವೆ; ನಮ್ಮ ಹಳ್ಳಿಗಳು ವಿದೇಶಿ ಸರ್ಕಾರದಿಂದಾಗಿ ಉದ್ದೇಶಪೂರ್ವಕವಾಗಿಯೇ ತುಳಿತಕ್ಕೊಳಗಾಗಿವೆ; ಮತ್ತು ಪಟ್ಟಣಗಳ ಜನ ಈ ಹೀನ ಕೆಲಸದಲ್ಲಿ ಒಂದು ಇಚ್ಛಾಸಾಧನವಾಗಿ ಪಾತ್ರವಹಿಸಿದ್ದಾರೆ. ಭಾವಿಸ್ವತಂತ್ರ ಭಾರತದ ಮೊದಲ ಕೆಲಸ ಹಳ್ಳಿಗಳನ್ನು ಪುನರುಜ್ಜೀವಿಸುವುದೇ ಆಗಿದೆ ಎಂದು ನಾನು ತಿಳಿದಿದ್ದೇನೆ. ಮಾನ್ಯರೆ, ನಾನು ನಿಮಗೆ ಈಗಾಗಲೆ ತಿಳಿಸಿದಂತೆ, ನಮಗೆ ಗಾಂಧೀಜಿಯವರ ದೃಷ್ಟಿಕೋನ ಮತ್ತು ಕಾಂಗ್ರೆಸ್ ದೃಷ್ಟಿಕೋನಕ್ಕನುಗುಣವಾಗಿ ಭಾರತದ ಭವಿಷ್ಯದ ಸಂವಿಧಾನ ಗ್ರಾಮಪಂಚಾಯಿತಿಗಳನ್ನಾಧರಿಸಿದ ಒಂದು ಪಿರಮಿಡ್ ರಚನೆ ಆಗಿರಬೇಕು ಎಂದು ಕಲ್ಪಿಸಲಾಗಿದೆ.

ನಮಗೆ ಒಂದು ಬಲಿಷ್ಠ ಕೇಂದ್ರ ಬೇಕು ಎಂಬುದನ್ನು ನಾನು ಒಪ್ಪುತ್ತೇನೆ; ಆದರೆ ಹಾಗೆಂದ ಮಾತ್ರಕ್ಕೆ ಅದರ ಅಂಗಗಳು ದುರ್ಬಲವಾಗಿರಬೇಕೆಂದಲ್ಲ. ಬಲಿಷ್ಠ ಅಂಗಗಳಿಲ್ಲದೆ ನಾವು ಒಂದು ಬಲಿಷ್ಠ ಕೇಂದ್ರ ಹೊಂದಲಾಗದು. ಜನರ ಇಚ್ಛಾಪೂರ್ಣ ಸಹಕಾರದೊಂದಿಗೆ ನಾವು ಗ್ರಾಮಪಂಚಾಯಿತಿಗಳ ಮೇಲೆ ಇಡೀ ಕಟ್ಟಡ ಕಟ್ಟಬಲ್ಲೆವಾದರೆ, ಕೇಂದ್ರ ಸ್ವಯಂ ಬಲಿಷ್ಠಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಆದರೂ ನಾನು ಸದನವನ್ನು ದೇಶದ ಭಾವಿ ಆಡಳಿತದಲ್ಲಿ ಕೆಲವು ಪರಿಣಾಮಕಾರಿ ಪಾತ್ರವಹಿಸಲು ಗ್ರಾಮಪಂಚಾಯಿತಿಗಳಿಗೆ ಅವಕಾಶಮಾಡುವಂಥ ಕೆಲವು ಖಂಡಗಳನ್ನು ಸೇರಿಸುವಂತೆ ಅರಿಕೆ ಮಾಡಿಕೊಳ್ಳುತ್ತೇನೆ.

ಡಾ. ಅಂಬೇಡ್ಕರ್, ಸಂವಿಧಾನವನ್ನು ಪ್ರಾಂತ್ಯಗಳ ಆಧಾರದ ಮೇಲೆ, ಕೆಲವು ರಾಜಕೀಯ ಘಟಕಗಳ ಆಧಾರದ ಮೇಲೆ, ಮೂಲಘಟಕವಾಗಿ ವ್ಯಕ್ತಿಗಳ ಆಧಾರದ ಮೇಲೆ ಹಾಕಲು ಪ್ರಯತ್ನಿಸಿದ್ದೇವೆ ಎಂದು ನಮ್ಮ ಮುಂದೆ ಒಂದು ಪ್ರಶ್ನೆಯನ್ನು ಮಂಡಿಸಿದ್ದಾರೆ. ಹಳ್ಳಿಯು ಆಡಳಿತ ವ್ಯವಸ್ಥೆಯ ಆಧಾರವಿರಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಇಡೀ ಸಂವಿಧಾನದ ಆತ್ಮ; ಆದರೆ ಹಳ್ಳಿಯನ್ನು ಅದರ ಆಡಳಿತದ ಯಂತ್ರದ ಆಧಾರವನ್ನಾಗಿ ಮಾಡಬೇಕು.

ಬಳಿಕ, ಮಾನ್ಯರೆ, ನಾನು ಭಾಷೆ ಕುರಿತು ಒಂದಿಷ್ಟು ಹೇಳಲು ಇಷ್ಟಪಡುತ್ತೇನೆ. ಕರಡು ಸಂವಿಧಾನದಲ್ಲಿ ಈ ಸದನದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಅನ್ನು ಮುಕ್ತವಾಗಿ ಉಪಯೋಗಿಸಬೇಕೆಂದೂ, ಇವೆರಡೂ ಭಾಷೆಗಳಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಲು ಬಾರದವರು ಮಾತ್ರ ಇತರ ಭಾಷೆಗಳನ್ನು ಬಳಸಬಹುದು ಎಂದೂ ಹೇಳಲಾಗಿದೆ. ಮಾನ್ಯರೆ, ಸೋವಿಯತ್ ಸಂವಿಧಾನದಲ್ಲಿರುವಂತೆ, ನಾವು ಈ ಸದನದಲ್ಲಿ ಭಾರತದ ಎಂಟು ಅಥವಾ ಒಂಬತ್ತು ಭಾಷೆಗಳನ್ನು ಮುಕ್ತವಾಗಿ ಉಪಯೋಗಿಸಲು ಅವಕಾಶ ಮಾಡಬೇಕೆಂದು ನಾನು ಭಾವಿಸುತ್ತೇನೆ. ಸೋವಿಯತ್ ಸಂವಿಧಾನದಲ್ಲಿರುವಂತೆ, ಕೇವಲ ಸಂಖ್ಯಾಬಲದಿಂದ ರಷ್ಯನ್ ಭಾಷೆ ಎಲ್ಲ ಪ್ರಾಬಲ್ಯವನ್ನೂ ಹೊಂದಿದೆ. ಇಲ್ಲಿ ಸಹ, ಸಂಖ್ಯಾಬಲದಿಂದ ಹಿಂದಿ ಎಲ್ಲ ಪ್ರಾಬಲ್ಯವನ್ನು ಹೊಂದಬಲ್ಲದ್ದಾಗಿದೆ. ನಮ್ಮಲ್ಲಿ ಯಾರೊಬ್ಬರ ಮನಸಿನಲ್ಲೂ, ಹಿಂದಿ ಭಾರತದಲ್ಲಿ ರಾಷ್ಟ್ರಭಾಷೆಯಾಗಿ, ದೇಶಭಾಷೆಯೂ ಆಗಿ ಸ್ಥಾನ ಪಡೆಯುವ ಬಗ್ಗೆ ಅನುಮಾನವಿಲ್ಲ. ಆದರೂ ಪ್ರಬಲ ಸಾಹಿತ್ಯ ಹೊಂದಿರುವ, ಅವುಗಳ ಹಿಂದೆ ಪ್ರಬಲವಾದ ಸಂಪ್ರದಾಯಗಳನ್ನು ಹೊಂದಿರುವ ಇತರ ಭಾಷೆಗಳ, (ಸಭಾಪತಿ ಹಿಂದಿ ಅಥವಾ ಇಂಗ್ಲಿಷ್‌ಗಳಲ್ಲಿ ತಾವೇ ವ್ಯಕ್ತಪಡಿಸಲು ಆಗುವುದಿಲ್ಲ ಎಂದು ಘೋಷಿಸಲಾದ ಹೊರತು) ಮಾತನಾಡಲು ಸದನದಲ್ಲಿ ಅವಕಾಶ ಕೊಡಬಾರದು ಎಂದು ಅರ್ಥವಲ್ಲ. ಈ ಸದನದಲ್ಲಿ ಇತರ ಭಾಷೆಗಳನ್ನು ಮುಕ್ತವಾಗಿ ಉಪಯೋಗಿಸಲು ಅವಕಾಶ ಕೊಡಬೇಕು ಎಂದು ನಾನು ಕೋರುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು** (ಡಾ. ಎಚ್.ಸಿ. ಮುಖರ್ಜಿ) ಸದನವನ್ನುದ್ದೇಶಿಸಿ ಮಾತನಾಡಲು ನಾನು ಮುಂದಿನ ಸದಸ್ಯರನ್ನು ಕರೆಯುವ ಮೊದಲು, ಮಾತನಾಡಲು ಇಚ್ಛಿಸುವ ಸದಸ್ಯರ ಚೀಟಿಗಳು ನನ್ನಲ್ಲಿವೆ.

ವಿಷಯ ತುಂಬ ತುರ್ತಾಗಿ, ಮುಖ್ಯವಾಗಿ ಚರ್ಚಿಸಲ್ಪಡಬೇಕಿದೆ. ಕರಡು ಸಂವಿಧಾನ ಕುರಿತಂತೆ ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಒಂದು ಅವಕಾಶ ಕೊಡಲು ನಾನು ಇಚ್ಛಿಸುತ್ತೇವೆ. ಆದುದರಿಂದ, ನಾನು ಹತ್ತು ನಿಮಿಷವೆಂದು ಗೊತ್ತುಪಡಿಸಿರುವ ಕಾಲಮಿತಿಯನ್ನು ಮೀರಬಾರದೆಂದು ಭಾಷಣಕಾರರಲ್ಲಿ ಮನವಿ ಮಾಡಬಹುದೆ?

**ಶ್ರೀ ಟಿ. ಪ್ರಕಾಶಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಪ್ರಭಾರದಲ್ಲಿರುವ ಗೌರವಾನ್ವಿತ ಸದಸ್ಯ ಡಾ. ಅಂಬೇಡ್ಕರ್ ಪರಿಚಯಿಸಿರುವ ಕರಡು ಸಂವಿಧಾನ ಒಂದು ಬಹು ದೊಡ್ಡ ದಾಖಲೆ. ಅವರು ಮತ್ತು ಅವರೊಂದಿಗೆ ಇದ್ದವರು ತೆಗೆದುಕೊಂಡ ಪರಿಶ್ರಮ ವಾಸ್ತವದಲ್ಲಿ ತುಂಬ ಅಸಾಧಾರಣವಾದುದೇ. ನನ್ನ ಗೌರವಾನ್ವಿತ ಮಿತ್ರ ಟಿ.ಟಿ. ಕೃಷ್ಣಮಾಚಾರಿ ಅವರು ಮಾತನಾಡುವಾಗ ಗೌರವಾನ್ವಿತ ಡಾ.ಅಂಬೇಡ್ಕರ್ ಸಮಿತಿಯ ಐದೋ ಆರೋ ಸದಸ್ಯರು ನಿರ್ಗಮಿಸಿದ್ದು ಹಾಗೂ ಆ ಜಾಗಗಳಿಗೆ ಯಾರನ್ನೂ ತುಂಬದ ಕಾರಣಕ್ಕಾಗಿ ಆ ತೊಂದರೆಗಳಡಿ ಶ್ರಮವಹಿಸಿದುದನ್ನು ವಿವರಿಸಿದರು. ಈ ಅಧಿವೇಶನದಲ್ಲಿ ಹೊರ ಬರುವ ಸಂವಿಧಾನ, ಮೂವತ್ತು ವರ್ಷಗಳ ಕಾಲ ಸ್ವಾತಂತ್ರ್ಯ ಹೋರಾಟಮಾಡಿದವರ ಹಾಗೂ ಅಗಲಿದ ಮಹಾತ್ಮ ಗಾಂಧೀಜಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಗಳಿಸಲು ಯಾರು ಯಶಸ್ವಿಯಾದರೋ ಅವರ ಇಚ್ಛೆ ಪೂರೈಸುವುದೆಂಬ ಭರವಸೆ ಮತ್ತು ನಿರೀಕ್ಷೆಯೊಂದಿಗೆ ತಪ್ಪದೆ ಭಾಗವಹಿಸುತ್ತಿದ್ದೇನೆ. ಮಾನ್ಯರೆ, ಪೀಠಿಕೆಯನ್ನು ನೋಡಿದ ನಾನು, ಪ್ರತಿಯೊಂದೂ ಪ್ರಮಾಣಬದ್ಧವಾಗಿದೆ ಮತ್ತು ನಮ್ಮ ಲಕ್ಷಾಂತರ ಜನರಿಗೆ ಆಹಾರ ಮತ್ತು ಬಟ್ಟೆಯನ್ನು ಕೊಡುವ ಹಾಗೂ ನಾಡಿನ ಎಲ್ಲ ಜನರಿಗೆ ಶಿಕ್ಷಣ ಮತ್ತು ರಕ್ಷಣೆ ಕೂಡ ಕೊಡುವ ಒಂದು ಸಂವಿಧಾನವನ್ನು ಹೊರ ತರುತ್ತದೆ ಎಂದು ಆಶಿಸುತ್ತಿದ್ದೆ. ಆದರೆ ಅದು ನನ್ನ ಹಾಗೂ ನನ್ನೊಂದಿಗೆ ಆಲೋಚಿಸುವಂಥವರ ಸಂಪೂರ್ಣ ನಿರಾಶೆಗೆ ಎಡೆಮಾಡಿದೆ. ಈ ಕರಡು ಸಂವಿಧಾನ ವಿಷಯದಿಂದ ವಿಷಯಕ್ಕೆ ಅನಿಶ್ಚಿತವಾಗಿ ಸಾಗಿ ಕಡೆಗೆ ನಾವೆಲ್ಲ ಎಲ್ಲಿದ್ದೇವೆ, ದೇಶ ಎಲ್ಲಿದೆ, ಜನ ಎಲ್ಲಿದ್ದಾರೆ, ಅವರು ಈ ಸಂವಿಧಾನವನ್ನು ಕಾಯಿದೆಗಳ ಗ್ರಂಥದಲ್ಲಿ ಹಾಕಿದಾಗ, ಅವರು ಪಡೆಯುವ ಲಾಭವೇನು? ಮಾನ್ಯರೆ, ಈಗ ಒಂದು ಸಂವಿಧಾನವನ್ನು ರಚಿಸುವಾಗ, ಸಾಮಾನ್ಯವಾಗಿ ಸಂವಿಧಾನ ರಚಿಸುವುದರ ಹೊಣೆ ಹೊತ್ತವರಿಂದ ದೇಶದ ಸ್ಥಿತಿಗಳನ್ನು, ದೇಶದ ಸನ್ನಿವೇಶವನ್ನು, ದೇಶದ ತೊಂದರೆಗಳಿಂದ ಪಾರಾಗಲು ಆವಶ್ಯಕವಾದುದನ್ನು ನಿರೀಕ್ಷಿಸಲಾಗುತ್ತದೆ. ಆ ಉದ್ದೇಶದೊಂದಿಗೆ, ನಾನು ಈ ಸಂವಿಧಾನಕ್ಕೆ ಸಂಬಂಧಿಸಿದಂತೆ ವಾಸ್ತವ ಸ್ಥಿತಿ ವಿವರಿಸುವುದರಲ್ಲಿ ತಮ್ಮ ಸಮಯವನ್ನು ವಿನಿಯೋಗಿಸುತ್ತಿರುವ ಎಲ್ಲ ಸದಸ್ಯರಿಂದ ತಿಳಿಯಲು ಕಾಯುತ್ತಿದ್ದೇನೆ. ಕೆಲವು ಸದಸ್ಯರು ಈ ಪ್ರದೇಶದಲ್ಲಿ ಯಾವ ರೀತಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೇವೆಂಬುದನ್ನು ಮರೆತಿಲ್ಲ ಹಾಗೂ ಹೇಗೆ ಸ್ವಾತಂತ್ರ್ಯವನ್ನು ಪಡೆದೆವೆಂಬುದನ್ನು ಮರೆತಿಲ್ಲ. ಅವರಿಗೆ ಕೃತಜ್ಞನಾಗಿರಬೇಕೆಂದು ನಾನು ಭಾವಿಸುತ್ತೇನೆ. ಈ ಸಂವಿಧಾನದ ಕರಡು ರೂಪಿಸುವುದಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಡಾ. ಅಂಬೇಡ್ಕರ್ ಅವರಿಗೆ ಎಲ್ಲ ಗೌರವಗಳೊಂದಿಗೆ, ಮೂವತ್ತು ಸುದೀರ್ಘ ವರ್ಷಗಳು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದವರೊಡನೆ ತಮ್ಮನ್ನು ಗುರುತಿಸಿಕೊಳ್ಳಲು ಅವರು ಸಮರ್ಥರಾಗಿಲ್ಲ ಎಂದು ನಾನು ಹೇಳಲೇಬೇಕು. ಒಂದೇ ಏಟಿಗೆ ಅವರು ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ಖಂಡಿಸಿದರು. ಅವರು ಬ್ರಿಟಿಷರ ಆ ಹಳೆಯ ದಿನಗಳ ಒಬ್ಬ ಮಹತ್ತ್ವಪೂರ್ಣ ವ್ಯಕ್ತಿ ಶ್ರೀ ಮೆಟ್‌ಕಾಫ್ ಅವರ ಟೀಕೆಗಳ ಕುರಿತು ಮಾತನಾಡುತ್ತ, ಗ್ರಾಮಪಂಚಾಯಿತಿಗಳು ಇದ್ದವು ಮತ್ತು ಮುಂದುವರಿದವು; ಮೇಲಿನ ಸರ್ಕಾರಕ್ಕೆ ಏನೇ ಆಗಲಿ ಅದರ ಬಗ್ಗೆ ಅವರಿಗೆ ನಿರಾಸಕ್ತಿ ಎಂದು ಅವರು ನೀಡಿದ ವಿವರ ಕುರಿತು ಹೇಳಿದರು. ಅದು ಈ ರೀತಿಯಲ್ಲಿ ಡಾ.ಅಂಬೇಡ್ಕರ್ ಅವರು ವ್ಯವಹರಿಸುವಂಥ ವಿಷಯವಾಗಿರಲಿಲ್ಲ. ಈ ದೇಶಕ್ಕೆ ಬಂದ ಹಲವರ ದಮನದ ಕಾರಣ ಗ್ರಾಮಪಂಚಾಯಿತಿಗಳು ಬರಿದಾಗಿ ನಾವು ಅವನತಿ ಹಾದಿ ತುಳಿದೆವು. ಅವುಗಳ ದಮನಕ್ಕೆ ಇಷ್ಟೆಲ್ಲ ಮಾಡಿದ್ದರೂ ಅವು ಉಳಿದು, ಅದನ್ನೇ ಮೆಟ್‌ಕಾಫ್ ಅವರು ಜಗತ್ತಿಗೂ ಮತ್ತು ಅದನ್ನು ಉಪೇಕ್ಷಿಸಿದ ನಮಗೂ ವಿವರಿಸಬಯಸಿದ್ದರು. ಆದುದರಿಂದ

ಆ ಆಧಾರದ ಮೇರೆಗೆ ಗ್ರಾಮಪಂಚಾಯಿತಿಯನ್ನು ಖಂಡಿಸಬಾರದು. ಆ ಸನ್ನಿವೇಶಗಳಲ್ಲಿ ಮೆಟ್‌ಕಾಫ್ ಅವರಿಂದ ವಿವರಿಸಲಾದ ಗ್ರಾಮಪಂಚಾಯಿತಿ ಇರಬೇಕು ಎಂದು ಇಂದು ಒಂದು ಕ್ಷಣ ನಾನು ವಾದಿಸುವುದಿಲ್ಲ. ಗ್ರಾಮಪಂಚಾಯಿತಿಯು ಆಳುವ ನೈಜ ಅಧಿಕಾರ ಹೊಂದಿದ್ದು ಆದರೆ ಸಮರ್ಥ ಗ್ರಾಮೀಣರ ಕೈಗಳಲ್ಲಿ ಹಣವಿದ್ದು ಖರ್ಚುಮಾಡುವಂತೆ ತಹಲ್‌ವರೆಗಿನ ಪರಿಸ್ಥಿತಿಗೆ ಹೊಂದಿಕೊಂಡಿರಬೇಕು. ಈ ಕರಡು ಸಂವಿಧಾನದಡಿ ಯಾವ ಸರ್ಕಾರವನ್ನು ರಚಿಸಲಾಗುತ್ತಿದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಇದು ಯಾರ ಲಾಭಕ್ಕಾಗಿ ಉದ್ದೇಶಿಸಲಾಗಿದೆ? ಇದು ಕೆಲವು ಜನರ ಲಾಭಕ್ಕಾಗಿಯೇ ಅಥವಾ ಯಾರು ತೆರಿಗೆಗಳನ್ನು ಕೊಡುತ್ತಾರೆಯೋ ಆ ಲಕ್ಷಾಂತರ ಜನ ಲಾಭಕ್ಕಾಗಿಯೇ? ಅವರಿಗೆ ಅಧಿಕಾರವಿರಲಿ, ಇಲ್ಲದಿರಲಿ ಅವರು ಈ ದೇಶದಲ್ಲಿ ಸ್ಥಾಪನೆಗೊಂಡಿರುವ ವಿಷಪೂರಿತ ವ್ಯವಸ್ಥೆಯಡಿ ತೆರಿಗೆಗಳನ್ನು ಪಾವತಿಸುತ್ತಾರೆ; ಅಂದರೆ ನಾವು ನೂರಾ ಐವತ್ತು ವರ್ಷಗಳು ನರಳುತ್ತಿದ್ದೆವು ಹಾಗೂ ನಾವು ಆ ವ್ಯವಸ್ಥೆಯನ್ನು ನಿರ್ಮೂಲನಮಾಡಲು ನಮ್ಮಿಂದಾದಷ್ಟು ಪ್ರಯತ್ನಿಸಿದೆವು. ಬ್ರಿಟಿಷರು ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಯಾವ ರೀತಿಯಲ್ಲಿ ಒಂದು ವ್ಯವಸ್ಥೆ ನಿರ್ಮಿಸಿದರೆಂದರೆ ನೆಲವನ್ನು ಉಳುವಾತ ಮತ್ತು ಕಾರ್ಮಿಕರು ಒಂದಲ್ಲೊಂದು ತೆರಿಗೆ ತೆತ್ತು, ಆಡಳಿತವನ್ನು ಸರ್ಕಾರ ಸೇಂಟ್ ಫೋರ್ಟ್ ಜಾರ್ಜ್‌ನಿಂದಲೋ ಇನ್ನೊಂದು ಫೋರ್ಟ್‌ನಿಂದಲೋ, ಅಥವಾ ಮತ್ತು ಈ ದೆಹಲಿ ಕೇಂದ್ರದಿಂದಲೋ ಅಥವಾ ಇನ್ನಾವ ಕೇಂದ್ರದಿಂದಲೋ ನಡೆಸಲು ಅನುವು ಮಾಡಿಕೊಡುವುದಷ್ಟೆ. ತೆರಿಗೆ ತೆರುವ ಆ ಲಕ್ಷಾಂತರ ಜನರ ಪಾಡೇನು? ಇಲ್ಲಿ ನೆಲೆಯೂರಿದ ಆ ಜನರಿಂದ ಹಂತ ಹಂತವಾಗಿ ಹಣವಸೂಲಿಸಿ, ಇಲ್ಲಿ ತಂದು ಖರ್ಚುಮಾಡಲಾಗುತ್ತಿದೆ. ಈ ಹಣವನ್ನು ಹೇಗೆ ಖರ್ಚು ಮಾಡಲಾಯಿತೆಂಬುದು ತೆರಿಗೆದಾರನಿಗೆ ತಿಳಿಯದು. ಆತನನ್ನು ನಡು ನೀರಿನಲ್ಲಿ ಬಿಡಲಾಗಿದೆ. ಇಲ್ಲಿ ಯಾರೊಬ್ಬನಾದರೂ ಆಳುವ ಪ್ರಭುವುಂಟೆ ಎಂಬುದು ಆತನಿಗೆ ತಿಳಿಯದು. ಈ ಅತಂತ್ರ ಸ್ಥಿತಿಯನ್ನು ಇಂದಿಗೂ ನಾವು ಮುಂದುವರಿಸುತ್ತಿದ್ದೇವೆ. ಜಾರ್ಜ್ ದೊರೆಯ ಹೆಸರಿನಲ್ಲಿ ಆಡಳಿತವನ್ನು ನಡೆಸುವವರಿದ್ದಾರೆ. ಗವರ್ನರ್ ಜನರಲ್ಲರ ನೇಮಕಾತಿ ಬ್ರಿಟಿಷರಿಂದ ನಮ್ಮ ನೋಟುಗಳ ಮೇಲೆ ಜಾರ್ಜ್ ದೊರೆಯ ತಲೆ ಸ್ವಾತಂತ್ರ್ಯ ದೊರೆತ ಎರಡು ವರುಷಗಳ ಅನಂತರವೂ ಇದೇ ಸ್ಥಿತಿ ಇದೆ. ಆ ಜನರ ಆಶೋತ್ತರ ಪೂರೈಸುವಲ್ಲಿ ಅವರಿಂದ ಆರಿಸಲ್ಪಟ್ಟ ಈ ಸಂವಿಧಾನ ರಚನಾಸಭೆ ಡಾ. ಅಂಬೇಡ್ಕರ್ ನೇತೃತ್ವ ಕರಡುಸಮಿತಿಯ ಮೂಲಕ ಕ್ರಮಕೈಗೊಳ್ಳಲೆನ್ನುವುದು ಉಚಿತ. ನಮ್ಮವನೊಬ್ಬ ಗೆಣೆಕಾರನಿದ್ದ ನಮ್ಮ ಕಾಯಕವನ್ನು ನಾವೇ ಮುಂದುವರಿಸಿಕೊಂಡು ಹೋಗಲೆಂದು ನಡುದಾರಿಯಲ್ಲಿ ಬಿಟ್ಟುಹೊದ. ಆತ ನಮ್ಮ ಲಕ್ಷಾಂತರ ಜನರಿಗೆ ಬಿಡುಗಡೆ ದೊರಕಿಸಲು ಹೋರಾಡಿದ. ಆತ ಜೀವಂತ ಇದ್ದಾಗ, ಆತನ ವ್ಯವಸ್ಥೆ ಹಾಗೂ ಯೋಜನೆಗಳಿಗೆ ನಾವು ಬೆಂಬಲ ನೀಡಲಿಲ್ಲ. ಅಥವಾ ರಾಷ್ಟ್ರದ ಲಕ್ಷೋಪಲಕ್ಷ ಮಂದಿ ಸ್ಪಂದಿಸಲಿಲ್ಲ. ಸ್ಪಂದಿಸಿದ್ದರೆ ಹನ್ನೆರಡೇ ತಿಂಗಳಿನಲ್ಲಿ ನಾವು ಸ್ವಾತಂತ್ರ್ಯ ಗಳಿಸುತ್ತಿದ್ದೆವು. ಆ ದೂರದೃಷ್ಟಿಯಿದ್ದ ಮಾನವ ನಮ್ಮೊಂದಿಗಿದ್ದರು ಮತ್ತು ನಮ್ಮಿಂದಾದ ವಿಶ್ವಾಸಘಾತುಕತನದೊಂದಿಗೂ, ಆತ ನಮ್ಮನ್ನು ಸುಶಿಕ್ಷಿತರನ್ನಾಗಿಸಲು ಮತ್ತು ಶಾಂತವಾಗಿಡಲು ನಿಭಾಯಿಸಿ ತಾವು ಯಶಸ್ವಿಯಾಗುವವರೆಗೂ ಎಲ್ಲ ಹೋರಾಟಗಳನ್ನೂ ಮಾಡಿದರು ಮತ್ತು ಭವಿಷ್ಯದ ಸರ್ಕಾರ ರಚಿಸಲು ನಮಗೆ ಒಂದು ಯೋಜನೆ ಕೊಟ್ಟರು. ಅವರು ಇಲ್ಲಿಗೆ ಬಂದಾಗ ಅಜ್ಞಾನದಲ್ಲಿ ಮುಳುಗಿದ್ದ ಲಕ್ಷಾಂತರ ಜನರನ್ನು ಬಡಿದೆಬ್ಬಿಸಿ ಅವರನ್ನು ಮೇಲೆತ್ತಿ ತಮ್ಮಂತೆಯೇ ಆತ್ಮಬಲ ಹೊಂದಬೇಕೆಂದು ತಿಳಿಯುವಂತೆ ಮಾಡಿದರು. "ನೀವು ನೀವಾಗಿಯೇ ಶಿಕ್ಷಿತರಾಗಿ ನನ್ನ ಈ ದೇಶದ ಕಾರ್ಯಕ್ರಮವನ್ನು ನಿರ್ವಹಿಸಿದ್ದೇ ಆದಲ್ಲಿ, ನೀವು ಪ್ರತಿಯೊಂದನ್ನು ನಿರ್ವಹಿಸಿ ಸ್ವಾತಂತ್ರ್ಯವನ್ನು ಸ್ಥಾಪಿಸುವಿರಿ" ಎಂದು ಹೇಳಿದರು. ಮಾನ್ಯರೆ, ನಾನೇ ಇಂಗ್ಲೆಂಡಿನಲ್ಲಿ ನಲವತ್ತೈದು ವರ್ಷಗಳ ಹಿಂದೆ ಹಿರಿಯ ಲಾಲಾ ಲಜಪತ್‌ರಾಯ್ ಅವರೊಂದಿಗೆ ಮಾತನಾಡಿದ್ದೆ. ಸ್ವಾತಂತ್ರ್ಯಕ್ಕಾಗಿ ಬಹಳ ಪರಿಶ್ರಮಿಸಿದವರಲ್ಲಿ ಅವರು ಮೊದಲಿಗರು. ಅವರು ಹೇಳಿದರು. "ಜನರು ಇಲ್ಲಿ ವ್ಯವಸ್ಥಿತವಾಗಿ ಶಿಸ್ತಿನಿಂದ ಹೇಗೆ ಕೆಲಸಮಾಡುತ್ತಾರೆಂದು ನೋಡಿ. ನಾವು ಈ ಬ್ರಿಟಿಷ್ ಜನತೆಯನ್ನು ನಮ್ಮ ದೇಶದಿಂದ ಓಡಿಸಿ

ಸ್ವಾತಂತ್ರ್ಯ ಸ್ಥಾಪಿಸುತ್ತೇವೆ ಎಂದು ಯಾವಾಗಲಾದರೂ ಆಶಿಸಬಹುದೇ?" ಆ ನಾಡಿನಲ್ಲಿದ್ದಾಗ ಅದು ನನ್ನ ಭಾವನೆಯಾಗಿತ್ತು. ಆ ಸಂದರ್ಭದಲ್ಲಿ ಗಾಂಧೀಜಿ ಒಬ್ಬ ಸಂತನಾಗಿ ಬಂದು ನಮ್ಮನ್ನು ಮೇಲೆತ್ತಿದರು ಮತ್ತು ನಾನು ಮತ್ತು ಅನೇಕ ಸ್ನೇಹಿತರು ಅವರ ಚಳವಳಿಯಲ್ಲಿ ಪ್ರವೇಶಿಸಿದೆವು ಹಾಗೂ ಈ ಎಲ್ಲ ಮೂವತ್ತು ವರ್ಷಗಳ ಕಾಲ ಹೋರಾಡಿದೆವು. ನಿಜಸಂಗತಿ ಸ್ಥಾಪಿತಗೊಂಡಿಲ್ಲ. ಬ್ರಿಟಿಷ್ ವ್ಯವಸ್ಥೆ ನಮ್ಮನ್ನು ಮುಳುಗಿಸಿತು ಮತ್ತು ದೇಶವನ್ನು ತುಳಿಯಿತು ಹಾಗೂ ಜನರನ್ನು ಬಹುವಾಗಿ ಅಸಹಾಯಕರನ್ನಾಗಿ ಮಾಡಿತು. ಬಂಡವಾಳಶಾಹಿಯನ್ನು ನಿರ್ಮೂಲನ ಮಾಡಲು ಅವರು ರಚನಾತ್ಮಕ ಕಾರ್ಯಕ್ರಮವನ್ನು ಪರಿಚಯಿಸಿದರು. ಅದನ್ನು ಅನುಸರಿಸಿ ಪ್ರತಿಯೊಬ್ಬ ಗಂಡಸು ಮತ್ತು ಹೆಂಗಸಿಗೂ ತನ್ನ ಕರ್ತವ್ಯ ಪೂರೈಸಿ, ತ್ಯಾಗಮಾಡಿ ಬ್ರಿಟಿಷರನ್ನು ಹೊಡೆದೋಡಿಸಲು ಅರ್ಹರನ್ನಾಗಿ ಮಾಡುವಂತೆ ರೂಪುಗೊಳಿಸಲಾಗಿತ್ತು. ಅವರು ಯಶಸ್ವಿಯಾದರು ಮತ್ತು ಜನ ಯಶಸ್ವಿಯಾದರು. ಜನರು ತಾವಾಗಿಯೇ ಬೆಂಕಿಗೆ ಬೀಳಲು ಅಥವಾ ನೀರಿನಲ್ಲಿ ಮುಳುಗಲು ಸಿದ್ಧರಿದ್ದುದಕ್ಕೆ ಅವರಿಗೆ ಋಣಿಗಳಾಗಿರಬೇಕು. ಗಾಂಧೀಜಿಯವರು ಮೂವತ್ತು ವರ್ಷಗಳ ಕಾಲ ಪ್ರತಿಪಾದಿಸಿವ ರೀತಿಯಲ್ಲಿ ಹೊಂದುವ ಇಡೀ ದೇಶವನ್ನು ಭಾಷಾವಾರು ಪ್ರದೇಶಗಳಾಗಿ ವಿಭಜಿಸಿ ಕಾಂಗ್ರೆಸ್ಸಿಗಾಗಿ ಸಂವಿಧಾನ ರೂಪಿಸಿದರು ಮತ್ತು ಆ ಕಾರಣಕ್ಕಾಗಿ ನಾವು ಸ್ವಾತಂತ್ರ್ಯ ಗಳಿಸಿದೆವು. ಆ ಸಮಾಜವಾದಿ ಆಧಾರವೆಲ್ಲ ಗಾಳಿಗೆ ತೂರಿ ಬಂಡವಾಳಶಾಹಿಯನ್ನು ಪರಿಚಯಿಸಲಾಗುತ್ತಿದೆ. ಅದು ಈ ಸಂವಿಧಾನಕ್ಕೆ ಫಲಿತಾಂಶವಾಗಿದೆ. ಇಂದು ನಾವು ಆಹಾರ ಮತ್ತು ಬಟ್ಟೆಯಿಲ್ಲದೆ ಕ್ಷಾಮದ ಯಾತನೆಯಲ್ಲಿದ್ದೇವೆ. ನಾನು ಈ ಸಂವಿಧಾನವೇನಾದರೂ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವುದೇ ಎಂದು ಡಾ.ಅಂಬೇಡ್ಕರರನ್ನು ಕೇಳುತ್ತೇನೆ. ಎಲ್ಲಿಯವರೆಗೆ ಬಂಡವಾಳಶಾಹಿ ವ್ಯವಸ್ಥೆಯ ಪ್ರಪಂಚ ಇರುತ್ತದೆಯೋ ಅಲ್ಲಿಯವರೆಗೆ ಇದು ಸಾಧ್ಯವಿಲ್ಲ ಎಂದು ನನ್ನ ಮನಸ್ಸಿಗನಿಸುತ್ತದೆ. ನೀವು ಬೇಕಾದಷ್ಟು ನಿರ್ಣಯಗಳನ್ನು ಅಂಗೀಕರಿಸಬಹುದು ಮತ್ತು ಹಣದುಬ್ಬರದ ಸಮಸ್ಯೆಯನ್ನು ಬಗೆಹರಿಸಲು ಹಲವು ಸಮಿತಿಗಳನ್ನು ನೇಮಕಮಾಡಬಹುದು; ಆದರೆ ಆ ಹಂತ ತಲಪಲು ಸಮರ್ಥರಾಗಿಲ್ಲ. ಆದುದರಿಂದ ಈ ಸಂವಿಧಾನಕ್ಕೆ ಬಂಡವಾಳಶಾಹಿ ಹಣಕಾಸಿನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದಂತೆ ತಿದ್ದುಪಡಿಯನ್ನು ತರುವುದು ಆವಶ್ಯಕ. ನಮ್ಮ ದೇಶದಲ್ಲಿ ಸಮಾಜವಾದಿ ವ್ಯವಸ್ಥೆ ಇರತಕ್ಕದ್ದು. ಹಾಗೆಂದರೆ ರಷ್ಯನ್ ಮಾದರಿಯದೆಂದು ನಾನು ಹೇಳುತ್ತಿಲ್ಲ. ನಾವು ನಮ್ಮದೇ ಸ್ವಂತ ವ್ಯವಸ್ಥೆ ಇಟ್ಟುಕೊಂಡಿದ್ದೆವು ಅದನ್ನು ಮಹಾತ್ಮ ಗಾಂಧಿಯವರು ಜಾರಿಗೆ ತಂದು ಮೂವತ್ತು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಈ ವಿಧದ ಕರಡು ಸಂವಿಧಾನ ನನ್ನ ಗ್ರಹಣಶಕ್ತಿಯನ್ನು ಮೀರಿದೆ. ನಾನು ಡಾ. ಅಂಬೇಡ್ಕರ್ ಅವರಿಗೆ ಮನಃಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ–ನಾನು ಅವರನ್ನು ಮಾತ್ರ ದೂಷಿಸುತ್ತಿಲ್ಲ. ಡಾ. ಅಂಬೇಡ್ಕರ್ ಹೋರಾಟದ ಕಣದಲ್ಲಿ ಮೂವತ್ತು ವರ್ಷಗಳು ಇರಲಿಲ್ಲ. ಅವರು ಯಾವುದೇ ರೀತಿಯಲ್ಲಿ ಇದರ ಪ್ರಾಮುಖ್ಯವನ್ನು ಅರ್ಥಮಾಡಿಕೊಂಡಿಲ್ಲ. ಅವರು ತಮ್ಮ ಜೀವನ ಪೂರ ಗಾಂಧಿ ಮತ್ತು ಕಾಂಗ್ರೆಸ್ಸಿನ ಇಡೀ ವ್ಯವಸ್ಥೆ ಮತ್ತು ಕಾರ್ಯಕ್ರಮದ ಮೇಲೆ ಆಕ್ರಮಣ ಮಾಡುತ್ತಿರುವರು.

**ಮಾನ್ಯ ಉಪಸಭಾಧ್ಯಕ್ಷರು :** ಸದ್ದು.... ಸದ್ದು

**ಶ್ರೀ ಟಿ. ಪ್ರಕಾಶಮ್ :** ನಾನು ಅಷ್ಟು ಹೇಳಬಾರದು ಎಂದರೆ– ನನಗೆ ತಿಳಿಯದು– ನಾನು ತಮ್ಮ ಆದೇಶ ಪಾಲಿಸುತ್ತೇನೆ. ಕರಡು ಸಂವಿಧಾನ ತಪ್ಪು ದಿಕ್ಕಿನಲ್ಲಿ ಹೋಗಿದೆ ಮತ್ತು ತಿದ್ದುಪಡಿ ತೀರ ಅಗತ್ಯವಾಗಿದೆ. ಮಾನ್ಯರೆ, ನಾನು ಈ ಸದನದ ಗೌರವಾನ್ವಿತ ಸದಸ್ಯರಿಗೂ ಮತ್ತು ತಮಗೂ, ಹೇಳುತ್ತಿದ್ದೇನೆ. ಇದನ್ನು ಹೀಗೆ ಹೋಗಲು ಬಿಟ್ಟರೆ, ಅದೇ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಇಲ್ಲಿಯೂ ಅಳವಡಿಸಿದ್ದೇ ಆದರೆ ನಾವು ಇತರ ದೇಶಗಳಿಗೆ ಏನಾಯಿತು ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಜಗತ್ತಿನ ಬಂಡವಾಳಶಾಹಿ ದೇಶಗಳು ಅಳವಡಿಸಿದ ಆರ್ಥಿಕ ವ್ಯವಸ್ಥೆಯು ಒಮ್ಮೆಯಲ್ಲ. ಎರಡು ಬಾರಿ ವಿಫಲವಾಗಿರುವುದು ಸಾಬೀತಾಗಿದೆ. ಪ್ರಥಮ ಮಹಾಯುದ್ಧದ ಅನಂತರ ವಿಶ್ವದ ಪ್ರಥಮ ಆರ್ಥಿಕ ಗಂಡಾಂತರ ಎಂದು ಏನು ಕರೆದೆವೋ

ಅದರ ಪರಿಣಾಮವನ್ನು ನೀವೆಲ್ಲ ನೋಡಿರುವಿರಿ. ಜರ್ಮನಿ ದಿವಾಳಿಯಾಯಿತು. ಇಂಗ್ಲೆಂಡ್ ಬಹುತೇಕ ದಿವಾಳಿಯಾಯಿತು. ಅದರ ಪೌಂಡು ವಿದೇಶಿ ಮಾರುಕಟ್ಟೆಯಲ್ಲಿ ಕೇವಲ ಏಳು ಶಿಲಿಂಗ್‌ಗಳಿಗೆ ಇಳಿಯಿತು. ಆದರೆ ಇಲ್ಲಿ ನಮ್ಮವರೇ ವ್ಯಾಪಾರಿ ನಾಯಕರು, ಅಂದರೆ ಬಂಡವಾಳಶಾಹಿಗಳ ಉದಾರಿ ಸ್ನೇಹಿತರು ಚಿನ್ನವನ್ನು ಇಲ್ಲಿಂದ ರಫ್ತು ಮಾಡದಿದ್ದರೆ ಇಂಗ್ಲೆಂಡ್ ಕೂಡಾ ಪೂರ ದಿವಾಳಿಯಾಗಿರುತ್ತಿತ್ತು. ಅದು ಮೊದಲನೆಯ ವಿಷಯ. ಬಳಿಕ ಎರಡನೆಯ ಆರ್ಥಿಕ ವಿಪ್ಲವ ಜಗತ್ತಿನ ಮೇಲೆ ಉಂಟಾಯಿತು. ಬ್ರಿಟಿಷ್ ಸರ್ಕಾರದ ಬೊಕ್ಕಸದ ಚಾನ್ಸಲರ್ ಡಾಲ್ಟನ್ ಏನು ಹೇಳಿದರೆಂಬುದು ನಿಮಗೆ ನೆನಪಿರಬಹುದು. "ಬದಲಾದ ಸ್ಥಿತಿಗಳಲ್ಲಿ ಡಾಲರ್ ವಿನಿಮಯ ವ್ಯವಹಾರದ ಕಾರಣ ಬ್ರಿಟನ್ ಅನುಭವಿಸಿದ ನಷ್ಟ ದಿನವೊಂದಕ್ಕೆ ೧೩ ದಶಲಕ್ಷ ಡಾಲರ್‌ಗಳು ಇದ್ದಿತು" ಎಂದು ಅವರು ಹೇಳಿದರು. ಈ ನೆರವು ವ್ಯವಸ್ಥೆ ಅದನ್ನು ತಡೆಯದಿದ್ದಿದ್ದರೆ ಅವರು ಹದಗೆಟ್ಟ ಸ್ಥಿತಿಯಲ್ಲಿ ಇರುತ್ತಿದ್ದರು. ಇಂದು ಇಂಗ್ಲೆಂಡ್ ಆ ರೀತಿ ನರಳುತ್ತಿದೆ. ಆದುದರಿಂದ ಈ ಸದನದ ಗೌರವಾನ್ವಿತ ಸದಸ್ಯರನ್ನು ತಿದ್ದುಪಡಿ ಹಂತ ಬಂದಾಗ ಕರಡು ಸಂವಿಧಾನದಲ್ಲಿ ಆವಶ್ಯಕ ಬದಲಾವಣೆಗಳನ್ನು ಮಾಡದೆ ಅಳವಡಿಸಿ ಈ ದೇಶವನ್ನು ಅಂತಹ ಒಂದು ಆರ್ಥಿಕ ಸ್ಥಿತಿಗೆ ತಳ್ಳಬಾರದೆಂದು ನಾನು ಎಚ್ಚರಿಸುತ್ತಿದ್ದೇನೆ. ಈ ವಿಷಯಗಳನ್ನು ಕುರಿತಂತೆ ಏನಾದರೂ ಬೆಳಕು ಸೂಸುವ, ಯಾವುದೇ ಒಂದು ದಿನ ಬರುವುದೇ ಎಂದು ನೋಡಲು ಕಾಯುತ್ತಿದ್ದೇನೆ. ಕೆಲವೊಮ್ಮೆ ನಾನೇ ಇಲ್ಲಿ ಕಾಣದಿರುವ ಅರ್ಥಸಚಿವರೊಂದಿಗೆ ಸಂವಹನದಲ್ಲಿ ಅಳವಡಿಸಬೇಕಾದ ಆರ್ಥಿಕ ವ್ಯವಸ್ಥೆ ಕುರಿತು ಪ್ರಸ್ತಾವಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ಉಪಸಭಾಧ್ಯಕ್ಷರು ಪುನಃ ಗಂಟೆ ಬಾರಿಸಿದರು) ಒಳ್ಳೆಯದು. ಮಾನ್ಯರೆ, ನಾನು ನಿಲ್ಲಿಸುತ್ತೇನೆ.

**ಶ್ರೀ ವಿಶ್ವಂಭರ ದಯಾಳ್ ತ್ರಿಪಾಠಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) ಮಾನ್ಯರೆ, ನಾನು ಒಂದು ಬಹುಮುಖ್ಯ ವಿಷಯದತ್ತ ನಿಮ್ಮ ಗಮನ ಸೆಳೆಯಬಯಸುತ್ತೇವೆ. ನಾವು ಒಂದು ಬಹುಮುಖ್ಯ ವಿಷಯ ಕುರಿತು ಚರ್ಚಿಸುತ್ತಿದ್ದೇವೆ ಮತ್ತು ನಮ್ಮ ಭಾವನೆಗಳನ್ನು ಹತ್ತು ನಿಮಿಷಗಳಲ್ಲಿ ವಿವರಿಸಲು ನಮ್ಮಲ್ಲಿ ಯಾರಿಗೇ ಒಬ್ಬರಿಗೂ ತುಂಬ ಕಷ್ಟ. ಆದುದರಿಂದ ನಾನು ತಮಲ್ಲಿ ತಮ್ಮ ನಿಯಮವನ್ನು ಸಡಿಲಗೊಳಿಸಬೇಕೆಂದೂ ಮತ್ತು ನಮ್ಮ ಭಾವನೆಗಳನ್ನು ಮುಕ್ತವಾಗಿ ಮತ್ತು ಸಂಪೂರ್ಣ ವ್ಯಕ್ತಪಡಿಸಲು ನಮಗೆ ನೆರವಾಗಬೇಕೆಂದು ಕೋರುತ್ತೇನೆ. ಹಿಂದೊಮ್ಮೆ ನಾವು ಗೌರವಾನ್ವಿತ ಸಭಾಧ್ಯಕ್ಷರಿಗೆ ಈ ಕೋರಿಕೆ ಮುಂದಿಟ್ಟಾಗ ಚರ್ಚೆಗೆ ಸಾಕಷ್ಟು ಸಮಯವಿರುತ್ತದೆ ಎಂಬ ಭರವಸೆ ನೀಡಲಾಗಿತ್ತು. ನಮ್ಮ ಕೋರಿಕೆಯನ್ನು ನೀವು ದಯಮಾಡಿ ಅಂಗೀಕರಿಸುವಿರೆಂದು ನಾನು ಆಶಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಹಾಗೆ ನೋಡಿದರೆ ನಿನ್ನೆ ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರೂ ಹತ್ತು ನಿಮಿಷಗಳ ಮಿತಿಯನ್ನು ಮೀರಿದರು. ನಾನು ಸದನದ ವಶದಲ್ಲಿದ್ದೇನೆ. ನೀವು ಬಯಸಿದ ಯಾವುದೇ ಸಮಯವನ್ನು ಕೊಡಬಲ್ಲೆ. ಆದರೆ ಯಾವುದಕ್ಕೂ ನಿರ್ದಿಷ್ಟ ನಿಯಮವಿರಬೇಕು.

**ಪ್ರೊ. ಎನ್.ಜಿ. ರಂಗಾ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಿನ್ನೆ ಪ್ರತಿಯೊಬ್ಬ ಸದಸ್ಯರೂ ಹತ್ತು ನಿಮಿಷಗಳ ಮಿತಿಮೀರಿದರೆಂದು ನೀವು ಹೇಳಿದ್ದೀರಿ. ಒಬ್ಬ ಅನುಭವಿ ಭಾಷಣಕಾರನಾಗಿ, ನಾನು ಹೇಳಬಯಸುವುದೇನೆಂದರೆ, ಒಬ್ಬ ಭಾಷಣಕಾರನಿಗೆ ಆತನ ಸಮಯ ಮೀರಿತೆಂದು ನೀವು ಗಂಟೆ ಬಾರಿಸುವ ಮೂಲಕ ನೆನಪು ಮಾಡುವುದು ಎಷ್ಟು ಕಿರಿಕಿರಿ ಉಂಟುಮಾಡುತ್ತದೆ. ಹತ್ತು ನಿಮಿಷಗಳೊಳಗೆ ಯಾವುದೇ ವಿಷಯವನ್ನು ತೃಪ್ತಿಕರವಾಗಿ ಬೆಳೆಸಲು ಯಾರಿಗೇ ಆಗಲಿ ಅಸಾಧ್ಯ ಎಂದು ನನ್ನ ಗೌರವಾನ್ವಿತ ಮಿತ್ರರು ಹೇಳಿರುವುದರಲ್ಲಿ ಗಣನೀಯ ಸತ್ತ್ವ ಇದೆ. ಅವಧಿಯನ್ನು ಕಡೇಪಕ್ಷ ಇಪ್ಪತ್ತು ನಿಮಿಷಗಳಿಗೆ ವಿಸ್ತರಿಸುವ ಆವಶ್ಯಕತೆ ಇದೆ. ಅಗತ್ಯವಾದರೆ, ಸಾಮಾನ್ಯ ಚರ್ಚೆಗೆ ಒಂದು ದಿನ ಹೆಚ್ಚಿಗೆ ನೀಡಬೇಕು.

**ಮಾನ್ಯ ಉಪಸಭಾಧ್ಯಕ್ಷರು** : ಸಾಮಾನ್ಯ ಚರ್ಚೆಗೆ ಒಂದು ದಿನ ಹೆಚ್ಚಿಗೆ ಕೊಡಲು ತಾವು ತಯಾರಿರುವಿರಾ?

**ಹಲವು ಗೌರವಾನ್ವಿತ ಸದಸ್ಯರು** : ಹೌದು.

**ಒಬ್ಬ ಗೌರವಾನ್ವಿತ ಸದಸ್ಯರು** : ಈಗಾಗಲೆ ಕೇವಲ ಹತ್ತು ನಿಮಿಷಗಳು ಮಾತ್ರ ತೆಗೆದುಕೊಂಡು ಮಾತನಾಡಿರುವವರ ಪಾಡೇನು?

**ಡಾ. ಜೋಸೆಫ್ ಅಲ್ಬನ್ ಡಿ'ಸೋಜಾ** (ಬಾಂಬೆ : ಸಾಮಾನ್ಯ): ಮಾನ್ಯ ಉಪಸಭಾಧ್ಯಕ್ಷರೆ, ಈ ದೊಡ್ಡ ರಾಷ್ಟ್ರದ ಸಹಸ್ರಾರು ವರುಷಗಳ ಇತಿಹಾಸದಲ್ಲಿ ಹಿಂದೆಂದೂ ಕಾಣಲಾಗದ ಅತ್ಯಂತ ಮುಖ್ಯವಾದ ಮತ್ತು ಮಹತ್ತ್ವಪೂರ್ಣವಾದ ಸಮಯದಲ್ಲಿ ಈ ಗೌರವಾನ್ವಿತ ಸದನವು ಖಂಡದಿಂದ ಖಂಡಕ್ಕೆ ಅನುಚ್ಛೇದದಿಂದ ಅನುಚ್ಛೇದಕ್ಕೆ ಒಂದು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ ಭಾರೀ ಗಣರಾಜ್ಯಕ್ಕೆ ಕರಡು ಸಂವಿಧಾನವನ್ನು ನೀಡುತ್ತಿದ್ದೇವೆ. ಯಾರಿಗೆ ಉಚಿತವಾಗಿ ಏನು ಸಲ್ಲಬೇಕಿದೆಯೋ ಅದನ್ನು ಆತ್ಮಸಾಕ್ಷಿಯೊಡನೆ ಕೊಡುವ ಉದ್ದೇಶಕ್ಕಾಗಿ ನಮ್ಮ ವೈಯಕ್ತಿಕ ನಿರ್ಲಿಪ್ತವಾಗಿ ಪ್ರಾಮಾಣಿಕ ಆತ್ಮವಿಮರ್ಶೆ ಮಾಡುವ ಅಗತ್ಯವಿದೆ; ಸೌಭ್ರಾತೃತ್ವದ ಶಾಂತಿ, ಸಾಮರಸ್ಯ ಮತ್ತು ಸದ್ಭಾವನೆಯಿಂದ ಇರುವ ಅಗತ್ಯವಿದೆ; ಈ ಸಂವಿಧಾನ ಸಂಬಂಧವಾಗಿ ನಾವು ಎದುರಿಸಿದ ಜಟಿಲ ಹಾಗೂ ಕಷ್ಟತಮ ಸಮಸ್ಯೆಗಳನ್ನು ಇಡೀ ದೇಶದ ಸಮೃದ್ಧಿ ಮತ್ತು ಪ್ರಗತಿಯ ವಿಶಾಲದೃಷ್ಟಿಯಿಂದ ಕಾಣುವ ಅಗತ್ಯವಿದೆ ಮತ್ತು ಕಡೆಯದಾಗಿ, ರಾಷ್ಟ್ರವನ್ನು ಬಾಧಿಸುವ ಪ್ರಾದೇಶಿಕ ನೀತಿಯ ಪ್ರಭಾವ ಬೀರಲು ಅನಗತ್ಯ ಎಂಬುದಕ್ಕೆ "ನೀನು ನಿನ್ನ ಪ್ರೀತಿಸುವಂತೆ ನಿನ್ನ ನೆರೆಯವನನ್ನೂ ಪ್ರೀತಿಸು" ಎಂದು ಸುಪ್ರಸಿದ್ಧ ಸೂತ್ರದ ಸೂಕ್ತವಾದ ಉದಾರ ಮತ್ತು ಪರಹಿತಚಿಂತನೆಯ ಪ್ರದರ್ಶನದ ಅಗತ್ಯವಿದೆ.

ವಿಶೇಷವಾಗಿ ನನಗೂ ಮೊದಲೆ ಮಾತನಾಡಿದ ಪ್ರತಿಯೊಬ್ಬ ಸದಸ್ಯರೂ ಸೇರಿದಂತೆ ಹಲವು ಸದಸ್ಯರು ಕರಡು ಸಂವಿಧಾನ ಒಂದು ಅತ್ಯುತ್ತಮವಾದ ಕೆಲಸ ಎಂದು ಸಮ್ಮತಿಸಿದ್ದಾರೆ. ಗೌರವಾನ್ವಿತ ಡಾ.ಅಂಬೇಡ್ಕರ್ ಮತ್ತು ಅವರ ಕರಡು ರಚನಾಸಮಿತಿಯಿಂದ ಹಲವು ತಿಂಗಳುಗಳ ಪರಿಶ್ರಮದ ಕೆಲಸದ ಅನಂತರ ಮುಂದಿಡಲಾದ ಚಿರಸ್ಮರಣೀಯವಾದ ರಚನೆ ಅದಾಗಿದೆ ಎಂದು ನಾನು ಹೇಳಬಹುದೇ? ಇದು ಮೊದಲಿನಿಂದ ಕೊನೆಯವರೆಗೂ ತಜ್ಞರ ಅತ್ಯುತ್ತಮ ಹಾಗೂ ದಕ್ಷ ಸಾಧನೆ.

ವಿಶ್ವದ ಎಲ್ಲ ಸಂವಿಧಾನಗಳ ಪೈಕಿ ಅತ್ಯಂತ ದೊಡ್ಡ ಗಾತ್ರದ್ದಾಗಿದ್ದು, ೩೧೫ ಅನುಚ್ಛೇದಗಳನ್ನೂ ಹೊಂದಿರುವ ಮತ್ತು ಎಂಟು ಅನುಸೂಚಿಗಳನ್ನೂ ಈ ಸಂವಿಧಾನವನ್ನು ಈ ಗೌರವಾನ್ವಿತ ಸದನದ ಮುಂದೆ ಗೌರವಾನ್ವಿತ ಪ್ರಸ್ತಾವಕರು ತಮ್ಮ ಭಾಷಣದಲ್ಲಿ ನಿರೂಪಿಸಿದ್ದಾರೆ. ಅದರ ಪರಿಶೀಲನೆ ಕುರಿತಂತೆ ಸಾಮಾನ್ಯ ಟೀಕೆಗಳ ಅನಂತರ, ನಾನು ಸಂವಿಧಾನಸಭೆಯಲ್ಲಿ ಕೆಲವು ಅಂಶಗಳನ್ನು ಪ್ರಸ್ತಾವಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. ಅಲ್ಪಸಂಖ್ಯಾತ ಹಕ್ಕುಗಳ ಸಲಹಾಸಮಿತಿಯ ಒಬ್ಬ ಸದಸ್ಯನಾಗಿ ನಾನು ಮತ್ತು ವಿಶೇಷವಾಗಿ ನ್ಯಾಯಾಲಯಕ್ಕೆ ಮೇಲ್ಮನವಿ ಹೋಗಬಹುದಾದ ಮೂಲಭೂತ ಹಕ್ಕುಗಳಲ್ಲಿ ಆಸಕ್ತಿ ಹೊಂದಿದ್ದೇನೆ. ಬಹುಸಂಖ್ಯಾತ ಪಕ್ಷದಿಂದ ಆರಿಸಿ ಬಂದ ಅಲ್ಪಸಂಖ್ಯಾತನಾಗಿ ಅತ್ಯಂತ ತೃಪ್ತಿಕರ ಮತ್ತು ನೀತಿಯುತ ರೀತಿಯಲ್ಲಿ ಈ ಹಕ್ಕುಗಳನ್ನು ನೀಡಿರುವ ಸಲಹಾಸಮಿತಿಯ ಅಧ್ಯಕ್ಷ ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಕೃತಜ್ಞತೆ ವ್ಯಕ್ತಪಡಿಸುವುದು ನನ್ನ ಕರ್ತವ್ಯ. ಇದು ಅಲ್ಪಸಂಖ್ಯಾತರಿಗೆ ಬಹುಸಂಖ್ಯಾತರ ಬಗ್ಗೆ ಬಲವಾದ ನಂಬಿಕೆಯನ್ನು ಹುಟ್ಟಿಸುತ್ತದೆ. ಮಾನ್ಯರೆ, ಕರಡು ಸಂವಿಧಾನದಲ್ಲಿ ಕೊಟ್ಟಿರುವಂತೆ ಈ ಹಕ್ಕುಗಳು ಈ ಸದನದ ಮೂಲಕ ರವಾನೆಯಾಗುವಾಗ ಯಾವುದೇ ಅಡ್ಡಿ ಅಡಚಣೆಯಾಗಲು ಅನುಮತಿಸುವುದಿಲ್ಲ ಎಂದು ನಾನು ಮನಃಪೂರ್ವಕವಾಗಿ ಆಶಿಸುತ್ತೇನೆ.

ನಾನು ಅಲ್ಪಸಂಖ್ಯಾತರ ಹಕ್ಕುಗಳ ವಿಷಯ ಪ್ರಸ್ತಾವಿಸುತ್ತಿರುವಾಗ, ನನ್ನದೊಂದು ನಿವೇದನೆ, ಅನುಚ್ಛೇದ ೨೯೯ರ ಬಗ್ಗೆ ಹೇಳುವುದಾದರೆ,

"ಕೇಂದ್ರದಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಅಧಿಕಾರಿ ಇರತಕ್ಕದ್ದು ಮತ್ತು ಪ್ರತಿ ರಾಜ್ಯಕ್ಕೂ ಅಲ್ಪಸಂಖ್ಯಾತರಿಗೆಂದು ಆಯಾ ರಾಜ್ಯಪಾಲರು ನೇಮಕಮಾಡುವ ವಿಶೇಷ ಅಧಿಕಾರ ಇರತಕ್ಕದ್ದು."

ಎಂದು ಅದರಲ್ಲಿ ಸ್ಪಷ್ಟಪಡಿಸಲಾಗಿದೆ.

ಮಾನ್ಯರೆ, ಆವಶ್ಯಕವಾಗಿ, ಕೇಂದ್ರದ ವಿಶೇಷ ಅಧಿಕಾರಿ, ಕೇಂದ್ರೀಯ ಶಾಸನಸಭೆಯಡಿ ಇರುತ್ತಾರೆ.
ಆದರೆ ಗೌರವಾನ್ವಿತ ಸದನಕ್ಕೆ ನಿವೇದಿಸಿಕೊಳ್ಳುತ್ತಿರುವುದೇನೆಂದರೆ, ಕೇಂದ್ರದಲ್ಲಿ ವಿಶೇಷ ಅಧಿಕಾರಿಯ ನೇಮಕ
ರಾಷ್ಟ್ರಪತಿಗಳಿಂದ ಆಗುವಂತೆ ಒಂಬತ್ತು ರಾಜ್ಯಗಳಲ್ಲಿ ಕೂಡ ರಾಷ್ಟ್ರಪತಿಗಳಿಂದಲೇ ಆಗಬೇಕು. ಯಾವುದಾದರೂ
ರೀತಿಯಲ್ಲಿ ರಾಜ್ಯದಲ್ಲಿನ ಈ ಅಧಿಕಾರಿಗಳು ಕೇಂದ್ರಕ್ಕೆ ಜವಾಬ್ದಾರರಾಗಿರುವಂತೆ ಮಾಡಬೇಕು. ಹಾಗೆ
ಮಾಡಿದರೆ, ಈ ಅಧಿಕಾರಿಗಳಿಂದ ರಾಜ್ಯಗಳಲ್ಲಿನ ಕೆಲಸವನ್ನು ಯಾವುದೇ ಭಯ ಪಕ್ಷಪಾತವಿಲ್ಲದೆ ಮಾಡಬಹುದು
ಎಂದು ಧೈರ್ಯವಾಗಿ ಹೇಳುತ್ತೇನೆ. ಇದು ನಾನು ಮಾಡುತ್ತಿರುವ ನಿವೇದನೆ. ಸಾಧ್ಯವಿದ್ದರೆ ರಾಜ್ಯದಲ್ಲಿ
ವಿಶೇಷ ಅಧಿಕಾರಿಯನ್ನು ಕೇಂದ್ರಕ್ಕೆ ಜವಾಬ್ದಾರರನ್ನಾಗಿ ಮಾಡುವ ಉದ್ದೇಶದೊಂದಿಗೆ ಒಂದು ಮಾರ್ಪಾಡು
ಮಾಡಬೇಕು ಎಂದು ನಾನು ಆಶಿಸುತ್ತೇನೆ. ಇನ್ನೊಂದು ನಿವೇದನೆ ಕೂಡ ಅಲ್ಪಸಂಖ್ಯಾತ ಹಕ್ಕುಗಳ ಕುರಿತಂತೆ
ಇದೆ ಮತ್ತು ಅದು ಅನುಚ್ಛೇದ–೨೫ರಲ್ಲಿನ ಸಾಂವಿಧಾನಿಕ ಪರಿಹಾರಗಳ ಹಕ್ಕಿಗೆ ಸಂಬಂಧಿಸಿದ್ದು ಸಾಧಾರಣವಾಗಿ,
ಕರಡು ಸಂವಿಧಾನದ ವಿಷಯಗಳೊಂದಿಗೆ ಸರ್ವೋನ್ನತ ನ್ಯಾಯಾಲಯ ಮಾತ್ರ ವ್ಯವಹರಿಸುತ್ತದೆ. ಬಹಳಷ್ಟು
ಸಂದರ್ಭಗಳು ಬಡವರ್ಗಗಳಿಗೆ ಸಂಬಂಧಿಸಿರುತ್ತವೆ. ಉಪಖಂಡ (೩)ರಲ್ಲಿ ಒಂದು ನಿಬಂಧನೆ ಮಾಡಲಾಗಿದೆ.
ಅದೆಂದರೆ ಅಂತಹ ಸಂದರ್ಭಗಳೊಂದಿಗೆ ವ್ಯವಹರಿಸಲು ಸಂಸತ್ತು ಸರ್ವೋನ್ನತ ನ್ಯಾಯಾಲಯಕ್ಕಿಂತ
ಇತರ ನ್ಯಾಯಾಲಯಗಳಿಗೆ ಕಾನೂನು ರೀತಿ ಅಧಿಕಾರ ಕೊಡಬಹುದು. ಸಂಸತ್ತು ಬರುವ ತನಕ ಕಾದು
ಅದು ಇತರ ನ್ಯಾಯಾಲಯಗಳಿಗೆ ಅಧಿಕಾರ ಕೊಡಲು ಶಾಸನ ರೂಪಿಸುವ ಬದಲಿಗೆ ಇಲ್ಲೇ ಅದನ್ನು
ಮಾಡಬೇಕು. ನೇರವಾಗಿ ಯಾವುದಾದರೂ ಮಾರ್ಪಾಟನ್ನು ಮಾಡಿದಲ್ಲಿ ಬಡವರ್ಗದ ವಿಶೇಷವಾಗಿ
ಶ್ರೀಸಾಮಾನ್ಯರ ಪರಿಸ್ಥಿತಿಯನ್ನು ಸರಳಗೊಳಿಸುತ್ತದೆ. ಅನಂತರ ಕಾಯಿದೆ ಜಾರಿಮಾಡಬಹುದು.

ಮಾನ್ಯರೆ, ನಾನು ಮಾಡಬೇಕೆಂದು ಬಯಸಿರುವ ಕೊನೆಯ ನಿವೇದನೆಯೆಂದರೆ ಅಲ್ಪಸಂಖ್ಯಾತರ
ಹಕ್ಕುಗಳಿಗೆ ವಿಶೇಷ ಅಧಿಕಾರಿ ಕುರಿತಂತೆ ನಾನೀಗಾಗಲೇ ಮಾಡಿರುವ ಸಲಹೆಗಳಿಂದ ಸ್ವಾಭಾವಿಕವಾಗಿ
ಉದ್ಭವಿಸಿದ್ದೇ ಆಗಿದೆ. ಅಂದರೆ ಕೇಂದ್ರಕ್ಕೆ ಜವಾಬ್ದಾರನಾಗುವಂತೆ ಮಾಡಬೇಕು ಎಂಬ ವಿಷಯ. ಈಗಾಗಲೇ
ಗೌರವಾನ್ವಿತ ಸದನ ಅದನ್ನು ಅಂಗೀಕರಿಸಿದೆ ಎಂದು ನನಗೆ ಖಚಿತವಾಗಿದೆ. ನಾನು ತುಂಬ ಪ್ರಬಲವಾದ
ಕೇಂದ್ರದ ಪರ ಇದ್ದೇನೆ. ಕೇಂದ್ರ ಪ್ರಬಲವಿದ್ದಷ್ಟೂ ರಾಜ್ಯಸೇವೆಗಳ ಮತ್ತು ರಾಜ್ಯದ ಕೆಲಸಗಳ ಒಗ್ಗೂಡಿಕೆ
ಮಹತ್ತ್ವದ್ದಿರುತ್ತದೆ. ಕೇಂದ್ರದಲ್ಲಿನ ಬಲದ ಕೊರತೆಯಿಂದ ಸಾಮ್ರಾಜ್ಯಗಳು ಕೊಚ್ಚಿಹೋಗಿವೆ ಮತ್ತು ಸಂತತಿಗಳು
ಮಾಯವಾಗಿವೆ ಎಂದು ಭಾರತದ ಇತಿಹಾಸ, ತೋರಿಸಿದೆ. ಪ್ರಬಲವಾದ ಕೇಂದ್ರದ ಪ್ರಶ್ನೆಯನ್ನು ಒಂದು
ಸರ್ವೋತ್ತಮ ಪ್ರಶ್ನೆ ಎಂದು ಪರಿಗಣಿಸಬಹುದಾಗಿದೆ ಮತ್ತು ಶತಶತಮಾನಗಳ ವಿದೇಶಿ ಪ್ರಾಬಲ್ಯದ ಅನಂತರ
ಸಾಧಿಸಿದ ಸ್ವಾತಂತ್ರ್ಯವನ್ನು ನಾವು ಕಾಯ್ದುಕೊಳ್ಳಬೇಕೆಂದಿದ್ದರೆ ಅದು ಹೀಗೆಯೇ ಪ್ರಬಲವಾದ ಕೇಂದ್ರ ಇಡೀ
ಒಕ್ಕೂಟವನ್ನು ಒಗ್ಗೂಡಿಸುವಲ್ಲಿ ಸಂಪೂರ್ಣವಾಗಿ ಆವಶ್ಯಕ. ನನ್ನ ಮೂರು ಸಲಹೆಗಳು ಸಂವಿಧಾನದಲ್ಲಿ
ಸಾಕಾರಗೊಳ್ಳುತ್ತವೆ ಎಂದು ಆಶಿಸುತ್ತೇನೆ; ಒಕ್ಕೂಟ ಹಾಗೂ ಪ್ರಾಂತೀಯ ವಿಷಯಗಳು ಮತ್ತು ಸಂವಿಧಾನದಲ್ಲಿ
ಸೂಚಿಸಿದಂತೆ ಕೇಂದ್ರಕ್ಕೆ ಕೊಡಲಾದ ಉಳಿಕೆಯ ಅಧಿಕಾರಗಳೊಂದಿಗೆ ಸಮವರ್ತಿಯಾಗುತ್ತವೆ.

ಮಾನ್ಯರೆ, ಈ ಕರಡು ಸಂವಿಧಾನ ಕುರಿತಂತೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನನಗೆ
ಅವಕಾಶ ಕೊಟ್ಟುದಕ್ಕಾಗಿ ನಿಮಗೆ ನನ್ನ ವಂದನೆಗಳು.

**ಗೌರವಾನ್ವಿತ ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ನಾವು ನಮ್ಮ
ಕೆಲಸದ ಕೊನೆಯ ಮತ್ತು ಅತ್ಯಂತ ಕಷ್ಟದ ಹಂತಕ್ಕೆ ಬಂದಿದ್ದೇವೆ. ಆದಷ್ಟು ಶೀಘ್ರ ಈ ಕೆಲಸವನ್ನು ನಾವು
ಮುಗಿಸಬೇಕೆಂಬ ಕಾತರ ನನಗೆ. ಹೀಗಿರುತ್ತ, ನಾವು ಭಾರತದ ಸಂವಿಧಾನವನ್ನು ರೂಪಿಸುತ್ತಿದ್ದೇವೆ ಎಂಬುದನ್ನು
ಮರೆಯಬಾರದು. ಬರಿಯ ವೇಗಕ್ಕಾಗಿ, ನಾವು ಈ ದೇಶದ ಕ್ಷೇಮ ಮತ್ತು ಭವಿಷ್ಯವನ್ನು ಬಾಧಿಸಬಹುದಾದ
ಉಪಬಂಧಗಳ ಸೂಕ್ತ ಮತ್ತು ಜಾಗರೂಕತೆಯ ಪರಿಗಣನೆಯೊಂದನ್ನು ಬಲಿ ಕೊಡಬಾರದು.

ಕರಡು ರಚನಾಸಮಿತಿ ಒಂದು ಉತ್ತಮ ಕೆಲಸವನ್ನು ಮಾಡಿದೆ. ಆದರೆ ಅದೇ ಸಮಯಕ್ಕೆ ಅವರು ಎರಡು ಅರ್ಹ ಟೀಕೆಗಳಿಂದ ಪಾರಾಗಲಾರರು ಎಂದು ನನಗೆ ಆತಂಕ. ಸಮಿತಿಯು ನ್ಯಾಯ ವಿರುದ್ಧವಾಗಿ ತಾವಾಗಿಯೇ ಒಂದು ಸಂವಿಧಾನ ಸಮಿತಿಯಾಗಿ ಪರಿವರ್ತನೆಗೊಂಡು ಈ ಸಭೆಯಿಂದ ಮುಕ್ತ ಸದನದಲ್ಲಿ ಅಳವಡಿಸಿದ ಕೆಲವು ಉಪಬಂಧಗಳನ್ನು ಬದಲಾಯಿಸುವ ಜವಾಬ್ದಾರಿಯನ್ನು ತಮ್ಮ ಮೇಲೆ ಎಳೆದುಕೊಂಡಿದೆ. ಅವರು ಸದನವು ನೇಮಕಮಾಡಿದ ಸಮಿತಿಗಳ ವರದಿಯನ್ನು ತಿರಸ್ಕರಿಸಲೂ ಶಕ್ತರೆಂದು ತಾವೇ ಭಾವಿಸಿದ್ದಾರೆ. (ಕೇಳಿ, ಕೇಳಿ) ನಾನು ಸಮಿತಿಯ ಒಬ್ಬ ಸದಸ್ಯನಿದ್ದೇನೆ. ಅದು ದೆಹಲಿ ಮತ್ತು ಕೇಂದ್ರದಿಂದ ಆಡಳಿತಕ್ಕೊಳಪಟ್ಟ ಪ್ರಾಂತ್ಯಗಳ ಭವಿಷ್ಯದ ಸಂವಿಧಾನ ಕುರಿತು ವರದಿ ಮಾಡಿದೆ. ಸಮಿತಿಯ ವರದಿಯನ್ನು ಈ ಸದನದಲ್ಲಿ ಚರ್ಚೆ ಮಾಡಲಾಗಿಲ್ಲ ಎಂಬುದು ನಿಜ ಮತ್ತು ಯಾವ ನಿರ್ಣಯಗಳನ್ನೂ ತೆಗೆದುಕೊಂಡಿಲ್ಲ. ಆದರೆ ಕರಡುಸಮಿತಿಯ ಅಭಿಪ್ರಾಯಗಳಿಗಿಂತ ಸಮಿತಿಯ ಶಿಫಾರಸುಗಳು ಈ ಸಂವಿಧಾನದಲ್ಲಿ ಒಳಗೊಳ್ಳಲು ಹೆಚ್ಚು ಅರ್ಹವಾಗಿದ್ದುವು ಎಂದು ನಾನು ಭಾವಿಸುತ್ತೇನೆ. (ಕೇಳಿ, ಕೇಳಿ) ಮಾನ್ಯರೆ, ನಾನು ವಿಷಯವನ್ನು ಕೆದಕಲು ಹೋಗುವುದಿಲ್ಲ. ನಾನು ಅದನ್ನು ಸದನಕ್ಕೆ ಬಿಟ್ಟುಬಿಡುತ್ತೇನೆ. ಖಂಡಗಳು ಪ್ರಸ್ತಾವಕ್ಕೆ ಬಂದಾಗ ಸದನ ಅಂಗೀಕರಿಸಲು ತೀರ್ಮಾನ ತೆಗೆದುಕೊಳ್ಳಲಿ. ಆದರೆ ಈ ನಿರ್ಣಯದ ಪ್ರಸ್ತಾವಕರು ಚರ್ಚಿಸಿದ ಕೆಲವು ಮೂಲಭೂತ ಸಿದ್ಧಾಂತಗಳಿಗೆ ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ.

ಡಾ. ಅಂಬೇಡ್ಕರ್ ದೃಢತೆ ಮತ್ತು ನಮ್ಯತೆಗಳು ಕೊಡತಕ್ಕ ನಮ್ಮ ಸಂವಿಧಾನದ ರೂಪಗಳನ್ನು ಸರಿಯಾಗಿಯೇ ಒತ್ತಿ ಹೇಳಿದ್ದಾರೆ ಮತ್ತು ಅವರು ಈಗ ರಚಿಸಿರುವ ಭಾರತದ ಸಂವಿಧಾನವು ಅಮೆರಿಕದ ಸಂವಿಧಾನ ಅಥವಾ ಇತರ ಒಕ್ಕೂಟ ಸಂವಿಧಾನಗಳಿಗಿಂತ ಹೆಚ್ಚು ನಮ್ಯವಾಗಿದೆ ಎಂದು ಹೇಳಿರುವರು. ಆದರೆ ನಮ್ಯತೆ ಯಾವಾಗಲೂ ಒಂದು ಅನುಕೂಲವಲ್ಲ ಎಂದು ಸಲಹೆ ಮಾಡಲು ಇಚ್ಛಿಸುತ್ತೇನೆ. ದೇಶದ ಸಂವಿಧಾನವು ಒಂದು ಮಾನವ ಹಂದರವಿದ್ದಂತೆ. ಅದರ ಕೆಲವು ಭಾಗಗಳು, ಸಂವಿಧಾನವು ಬಹುಕಾಲ ಉಳಿಯಲು ದೃಢವಾಗಿರಬೇಕು; ನಮ್ಯವಾಗಿರಬೇಕಾದ ಇತರ ಭಾಗಗಳು ಇರಬೇಕು. ಆದುದರಿಂದ ದೃಢವಾಗಿರಬೇಕಾದ ಆ ಭಾಗಗಳತ್ತ ತಾವು ಗಮನಹರಿಸಬೇಕೆಂದು ನಾನು ಇಷ್ಟಪಡುತ್ತೇನೆ. ಮೂಲಭೂತ ಸಿದ್ಧಾಂತಗಳೊಂದಿಗೆ ರಾಜಿಯಾಗುವುದು ಅಪಾಯಕಾರಿ ಎಂದು ನಾನು ತಿಳಿಯುತ್ತೇನೆ. ಈ ಕ್ಷಣದ ಆವಶ್ಯಕತೆಗಳಿಗೆ ಅವುಗಳೊಂದಿಗೆ ರಾಜಿಯಾಗುವುದು ಸಮಯೋಚಿತ ಎಂದು ನಾವು ತಿಳಿಯಬಹುದು. ಆದರೆ ಒಮ್ಮೆ ನಾವು ಮೂಲಭೂತ ಸಿದ್ಧಾಂತಗಳನ್ನು ಕುರಿತು ರಾಜಿಯಾದೆವೋ ಅದುವೆ ಸಂವಿಧಾನದಲ್ಲಿ ಕೆಡುಕು ತಂದು ವಿನಾಶಕಾರಿಯಾಗಬಹುದು.

ಮಾನ್ಯರೆ, ಈ ಸಂವಿಧಾನವು ಒಳಗೊಂಡಿರಬೇಕೆಂದು ಬಯಸಿದ್ದ ಮೂಲಭೂತ ಸಿದ್ಧಾಂತಗಳು ಯಾವುವು? ಮೊದಲನೆಯದಾಗಿ, ಒಂದೇ, ಸಮಾನ ಮತ್ತು ಜಾತ್ಯತೀತ ಪೌರತ್ವ ಇರಬೇಕು. ಎರಡನೆಯದಾಗಿ, ವಯಸ್ಕರ ಮತದಾನ ಪದ್ಧತಿ ಇರಬೇಕು. ಮೂರನೆಯದಾಗಿ ಒಕ್ಕೂಟ ವ್ಯವಸ್ಥೆ ಇರಬೇಕು. ನಾಲ್ಕನೆಯದಾಗಿ, ಕಾರ್ಯಾಂಗದ ಜವಾಬ್ದಾರಿ ಇರಬೇಕು. ನಾನು ಈ ಸಿದ್ಧಾಂತಗಳ ಪ್ರತಿಯೊಂದೂ ಸಂವಿಧಾನದಲ್ಲಿ ಪೂರ್ಣಪ್ರಮಾಣದಲ್ಲಿ ಒಳಗೊಂಡಿದೆಯೇ ಎಂಬುದನ್ನು ನಾವು ಸಂವಿಧಾನದ ಉಪಬಂಧಗಳಲ್ಲಿ ಪರೀಕ್ಷಿಸಬೇಕೆಂದು ಸಲಹೆ ಮಾಡುತ್ತೇನೆ.

ಉದಾಹರಣೆಗೆ: ಸಮಾನ ಮತ್ತು ಜಾತ್ಯತೀತ ಪೌರತ್ವ ಸಿದ್ಧಾಂತ ತೆಗೆದುಕೊಳ್ಳಿ. ಇದನ್ನು ಮೂಲಭೂತ ಹಕ್ಕುಗಳಿಂದ, ರಕ್ಷಿಸಬೇಕು ಎಂದು ಹೇಳಲಾಗಿದೆ. ಆದರೆ ಡಾ. ಅಂಬೇಡ್ಕರ್ ಪ್ರತಿ ಮೂಲಭೂತ ಹಕ್ಕೂ ಭಾರಿ ಅಪವಾದಕ್ಕೆ ಒಳಪಟ್ಟಿದೆ ಎಂದು ಒಪ್ಪಿದ್ದಾರೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೂಡ, ಸರ್ವೋಚ್ಚನ್ಯಾಯಾಲಯ ಈ ಮೂಲಭೂತ ಹಕ್ಕುಗಳಲ್ಲಿ ಮಾರ್ಪಾಟು ಮಾಡಬೇಕಾಯಿತು, ಇದು ವಾಸ್ತವ. ಆದರೆ ನಮ್ಮ ಸರ್ವೋಚ್ಚನ್ಯಾಯಾಲಯ ಕೂಡ ಈ ಮೂಲಭೂತ ಹಕ್ಕುಗಳನ್ನು ವ್ಯವಹರಿಸಬೇಕು. ಅಮೆರಿಕ

ಸಂಯುಕ್ತ ಸಂಸ್ಥಾನಗಳ ಸರ್ವೋಚ್ಚನ್ಯಾಯಾಲಯದ ಕೆಲಸ ಮೂಲಭೂತ ಹಕ್ಕುಗಳ ವ್ಯಾಪ್ತಿಯನ್ನು ಮಿತಿಗೊಳಪಡಿಸುವುದು ಆಗಿರುವಾಗ, ದೇಶದ ಆವಶ್ಯಕತೆಗಳನ್ನು ಪರಿಗಣಿಸಿ ಭಾರತದ ಒಕ್ಕೂಟ ನ್ಯಾಯಾಲಯ ಅಥವಾ ಸರ್ವೋಚ್ಚನ್ಯಾಯಾಲಯದ ಕೆಲಸ ಇತಿಮಿತಿಗಳ ವ್ಯಾಪ್ತಿಯನ್ನು ನಿಯಂತ್ರಣಕ್ಕೊಳಪಡಿಸುವುದೇ ಆಗಿರುತ್ತದೆ. ಇತಿಮಿತಿಗಳನ್ನು ವಿಸ್ತಾರವಾಗಿ ವ್ಯಾಖ್ಯಾನಿಸಬೇಕಾದಲ್ಲಿ, ಆಗ ನಾವು ಮೂಲಭೂತ ಹಕ್ಕುಗಳನ್ನು ಕುರಿತ ಅಧ್ಯಾಯವನ್ನು ಒಟ್ಟಾರೆ ಕೈ ಬಿಡುವುದೇ ಲೇಸು.

ಮಾನ್ಯರೆ, ನಾವು ಈ ಬದಲಾವಣೆಗಳನ್ನು ಪರಿಶೀಲಿಸಬೇಕು. ಹೇರಲಾದ ಇತಿಮಿತಿಗಳನ್ನು ಸಾಧ್ಯವಾದಷ್ಟೂ ಸೂಕ್ಷ್ಮವಾಗಿ ಮತ್ತು ಕಟ್ಟುನಿಟ್ಟಾಗಿ ವ್ಯಾಖ್ಯಾನಿಸಲಾಗಿದೆಯೇ ಎಂಬುದನ್ನು ನೋಡಬೇಕು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಈ ತುರ್ತಿನ ದಿನಗಳಲ್ಲಿ ಕಡೇಪಕ್ಷ ಪೌರಸ್ವಾತಂತ್ರ್ಯವನ್ನು ಸಂವಿಧಾನದಿಂದ ಕಾಯ್ದಿಡುವುದು ಆವಶ್ಯಕ. ಅದನ್ನು ಒಟ್ಟಾರೆ ಆಚೆ ಒಯ್ಯಲು ಸ್ಥಳೀಯ ಶಾಸಕಾಂಗಗಳು ಮತ್ತು ಕೇಂದ್ರ ಶಾಸಕಾಂಗಳಿಗೂ ಕೂಡ ಸುಲಭವಾಗಬಾರದು.

ಮಾನ್ಯರೆ, ಮುಂದಿನ ಪ್ರಶ್ನೆ ವಯಸ್ಕರ ಮತದಾನ, ಹಕ್ಕು ಕುರಿತದ್ದು. ನಾವು ಅದನ್ನು ಒಂದು ಸೂತ್ರವಾಗಿ ಅಳವಡಿಸಬಹುದು. ಕೇಂದ್ರ ಸರ್ಕಾರ ಇಡೀ ದೇಶದಲ್ಲಿ ವಯಸ್ಕರ ಮತದಾನ ದಾಖಲೆ ಪುಸ್ತಕಗಳು ಅಥವಾ ಪಟ್ಟಿಗಳನ್ನು ಸಂಪಾದಿಸಿ ಕಾಯ್ದುಕೊಂಡು ಬರುವ ಕೆಲಸಮಾಡಬೇಕು. ಏಕೆಂದರೆ ಈ ಪಟ್ಟಿಗಳನ್ನು ಭಾಷಾವಾರು ಮತ್ತು ಇತರ ಜಾತ್ಯತೀತ ಗಣನೆಗಳ ಮೇಲೆ ಮಾರ್ಪಡಿಸುವ ಪ್ರಾಂತೀಯ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಈ ದಾಖಲೆ ಅವುಗಳನ್ನು ಜಾಗರೂಕತೆಯಿಂದ ತಯಾರು ಮಾಡುವಲ್ಲಿ ತುಸು ಅಲಕ್ಷ್ಯವಹಿಸುವುದು ಕಾಣಬರದೇ ಇರದು. (ಕೇಳಿ, ಕೇಳಿ) ದೋಷಗಳಿರಬಹುದು. ಉದಾಹರಣೆಗೆ ಮತದಾನದ ಒಂದು ದಾಖಲೆ ಪುಸ್ತಕವನ್ನು ಸಂಪಾದಿಸಲು ಮದ್ರಾಸಿನಲ್ಲಿ ಒಂದು ಪ್ರಯತ್ನ ನಡೆದಿತ್ತು. ಎಲ್ಲವನ್ನು ಒಂದು ದಿನ ಅಥವಾ ಎರಡು ದಿನಗಳಲ್ಲಿ ಮಾಡಲಾಯಿತು ಮತ್ತು ನಗರದ ಮತದಾರರ ಶೇಕಡಾ ೫೦ರಷ್ಟು ಬಿಟ್ಟುಬಿಡಲಾಗಿದೆ ಎಂಬ ದೂರುಗಳಿದ್ದವು. ಈ ನಿರ್ದಿಷ್ಟ ಪ್ರಸಂಗದಲ್ಲಿ ಯಾವುದೇ ಉದ್ದೇಶವಿರಲಿಲ್ಲ. ಆದರೆ ಈ ದಾಖಲಾತಿ ಪುಸ್ತಕಗಳ ಸಂಪಾದನೆ ಮಾಡುವುದರಲ್ಲಿ ಆಡಳಿತಾತ್ಮಕ ದಕ್ಷತೆ ಮತ್ತು ಕೂಲಂಕಷ ಪರಿಶೀಲನೆಯ ಕೊರತೆ ಇತ್ತು. ಮಾನ್ಯರೆ, ಈ ವಿಷಯದಲ್ಲಿ ನಾವು ತುಂಬ ಜಾಗರೂಕರಿರಲು ಅಥವಾ ತುಂಬ ಗಮನಹರಿಸುವುದು ಆಗುವುದಿಲ್ಲ ಎಂದು ಭಾವಿಸುತ್ತೇವೆ. ಭಾರತದ ಪ್ರತಿಯೊಬ್ಬ ಪೌರ ರಿಜಿಸ್ಟರಿನಲ್ಲಿ ಸ್ವತಃ ದಾಖಲಾಗಬೇಕು. ಮತ್ತು ಆತನ ಹಕ್ಕು, ರಕ್ಷಿತ ಪಟ್ಟಿಗಳಲ್ಲಿ ಇರತಕ್ಕದ್ದು. ಇದು ಸಂವಿಧಾನದಲ್ಲಿ ಸಾಧ್ಯವಾಗಬೇಕು ಎಂದು ನಾವು ಬಯಸುತ್ತೇವೆ. ಆದುದರಿಂದ, ಈ ಸದನಕ್ಕೆ ಈ ದಾಖಲೆ ಪುಸ್ತಕದ ಸಿದ್ಧತೆ ಮತ್ತು ಕಾಯ್ದುಕೊಳ್ಳುವ ಜವಾಬ್ದಾರಿಯೂ ಕೇಂದ್ರ ಸರ್ಕಾರದ ಮೇಲೆ ಇರುವುದು ಅಪೇಕ್ಷಣೀಯವೆ ಎಂಬುದನ್ನು ಪರಿಗಣಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಪ್ರಸ್ತುತ, ಕೇಂದ್ರ ಸರ್ಕಾರ ಹತ್ತು ವರ್ಷಗಳ ಅಂತರದಲ್ಲಿ ಭಾರತದ ಜನಗಣತಿ ಮಾಡುವ ಜವಾಬ್ದಾರಿ ಹೊಂದಿದೆ. ಹತ್ತು ವರ್ಷಗಳಿಗೊಮ್ಮೆ ಜನಗಣತಿ ತೆಗೆದುಕೊಳ್ಳುವುದಕ್ಕೆ ಅಲ್ಲವೆ ಇಡೀ ದೇಶದಲ್ಲಿನ ವಯಸ್ಕರ ಮತದಾನ ದಾಖಲಾತಿ ಪುಸ್ತಕಗಳನ್ನು ಕೂಡ ಕಾಯ್ದಿಡುವ ಕೆಲಸವನ್ನು ಮಾಡುವ ಒಂದು ಶಾಶ್ವತ ಆಳಿತ ವ್ಯವಸ್ಥೆಯನ್ನು ನಾವು ಸೃಷ್ಟಿಸಬಹುದಾಗಿದೆ. ಈ ದಾಖಲಾತಿ ಪುಸ್ತಕಗಳು ಕುರಿತಂತೆ ಯಾವ ದೂರು ಇರುವುದಿಲ್ಲ ಹಾಗೂ ಬದಲಿಸುವ ಕೈಚಳಕಕ್ಕೆ ಆಸ್ಪದವಿರದು ಎಂದು ನಾನು ಭಾವಿಸುತ್ತೇನೆ.

ಮಾನ್ಯರೆ, ಡಾ.ಅಂಬೇಡ್ಕರ್ ಅವರು ದ್ವಂದ್ವ ರಾಜಕಾರಣ ಕುರಿತು ಮಾತನಾಡಿದರು. ಈಗ ನಾವು ಮೂರುಪಟ್ಟಿಗಳನ್ನು ಹೊಂದಿದ್ದೇವೆ. ಸಂಯುಕ್ತ ಪಟ್ಟಿ, ಪ್ರಾಂತೀಯ ಪಟ್ಟಿ ಮತ್ತು ಸಮವರ್ತಿ ಪಟ್ಟಿ. ಕರಡು ರಚನಾಸಮಿತಿ ಸಮವರ್ತಿ ಪಟ್ಟಿಯ ವ್ಯಾಪ್ತಿಯನ್ನು ವಿಸ್ತರಿಸಿದೆ. ನಾವು ಸಮವರ್ತಿ ಪಟ್ಟಿಯ ಅನುಭವ ಹೊಂದಿದ್ದೇವೆ. ಅದು ಕೇಂದ್ರ ಮತ್ತು ಪ್ರಾಂತ್ಯಗಳ ನಡುವಿನ ಭೇದವನ್ನು ಅಳಿಸಲು ನೋಡುತ್ತದೆ. ಕಾಲಾವಧಿಯಲ್ಲಿ

ಎಲ್ಲ ಸಂಯುಕ್ತ ಸಂವಿಧಾನಗಳ ಅನಿವಾರ್ಯ ರಾಜಕೀಯ ಪ್ರವೃತ್ತಿ ಅದಾಗಿದೆ. ಅಂದರೆ ಸಂಯುಕ್ತ ಪಟ್ಟಿ ವೃದ್ಧಿಸುತ್ತದೆ ಮತ್ತು ಸಮವರ್ತಿ ಪಟ್ಟಿ ಕ್ರಮವಾಗಿ ಮರೆಯಾಗುತ್ತದೆ. ಏಕೆಂದರೆ ಯಾವಾಗ ಒಮ್ಮೆ ಕೇಂದ್ರ ಶಾಸನಸಭೆ ಒಂದು ಶಾಸನದ ನಿರ್ದಿಷ್ಟ ಕ್ಷೇತ್ರಕ್ಕೆ ವ್ಯಾಪಿಸುತ್ತದೆಯೋ ಆಗ ಪ್ರಾಂತೀಯ ಶಾಸನಸಭೆಯ ಆಡಳಿತವ್ಯಾಪ್ತಿ ಹೊರಟುಹೋಗುತ್ತದೆ. ಆದುದರಿಂದ ಹತ್ತು ವರ್ಷಗಳಲ್ಲಿ ಅಥವಾ ಹದಿನೈದು ವರ್ಷಗಳಲ್ಲಿ ಇಡೀ ಸಮವರ್ತಿ ಪಟ್ಟಿ ಸಂಯುಕ್ತಪಟ್ಟಿಗೆ ತಾನೇ ತಾನಾಗಿ ವರ್ಗಾವಣೆಯಾಗುತ್ತದೆಂದು ನಾವು ತಿಳಿಯಬಹುದು. ನಾವು ಇದು ನಮಗೆ ಬೇಕಾದದ್ದೇ, ಮತ್ತು ಇದು ಅಪೇಕ್ಷಣೀಯವೇ ಎಂಬುದನ್ನು ಬಿಂಬಿಸಬೇಕು. ನಮಗೆ ಅದು ಬೇಕಿಲ್ಲದಿದ್ದರೆ ನಾವು ಸಮವರ್ತಿ ಪಟ್ಟಿಯನ್ನು ಕನಿಷ್ಠಕ್ಕೆ ನಿರ್ಬಂಧಿಸಬೇಕು ಇಲ್ಲವೇ ಆ ಪಟ್ಟಿಯಲ್ಲಿ ನಮೂದಿಸಿದ ವಿಷಯಗಳು ಕುರಿತಾಗಿ ಕೇಂದ್ರ ಮತ್ತು ಪ್ರಾಂತೀಯ ಆಡಳಿತ ವ್ಯಾಪ್ತಿಯನ್ನು ವಿವರಿಸಬೇಕು.

ಬಳಿಕ ನಾನು ಕಾರ್ಯಾಂಗದ ಜವಾಬ್ದಾರಿ ಮಾದರಿಗೆ ಅಥವಾ ಸಂಪುಟದ ಮಾದರಿಯ ಪ್ರಶ್ನೆಗೆ ಬರುತ್ತೇನೆ. ಪ್ರತಿಯೊಂದು ಜವಾಬ್ದಾರಿ ಸರ್ಕಾರದಲ್ಲಿಯೂ ಜವಾಬ್ದಾರಿಯ ಎಲ್ಲೆಗಳು ಸ್ಪಷ್ಟವೂ ಮತ್ತು ನಿರ್ದಿಷ್ಟವೂ ಆಗಿರಬೇಕಾದುದು ತುಂಬ ಪ್ರಾಮುಖ್ಯವಾದುದಾಗಿದೆ. ಅದನ್ನು ಕುರಿತಾಗಿ ಯಾವುದೇ ಅಸ್ಪಷ್ಟತೆ ಇರಬಾರದು. ಒಮ್ಮೆ ಜವಾಬ್ದಾರಿ ಮಸುಕಾಯಿತೆಂದರೆ, ಸಂಪುಟ ವಿಧದ ಸರ್ಕಾರ ತಾನೇ ತಾನಾಗಿ ಅನೂರ್ಜಿತಗೊಳ್ಳುತ್ತದೆ ಮತ್ತು ನಾವು ಬಹುತೇಕ ಅಧ್ಯಕ್ಷೀಯ ಆಡಳಿತದ ಸರ್ಕಾರ ಹೊಂದುತ್ತೇವೆ. ಅಧ್ಯಕ್ಷೀಯ ಸರ್ಕಾರದ ಬಗ್ಗೆ ನಮ್ಮ ತಕರಾರಿಲ್ಲ. ಅದು ರಾಷ್ಟ್ರಕ್ಕೆ ಸೂಕ್ತವಾಗಬಹುದು. ಅವಶ್ಯವಾದರೆ, ಎಲ್ಲ ತೊಡಕುಗಳು ಮತ್ತು ಪರಿಣಾಮಗಳನ್ನು ತಿಳಿದು ಒಂದು ಅಧ್ಯಕ್ಷೀಯ ಆಡಳಿತವನ್ನು ಕೇಂದ್ರ ಮತ್ತು ಪ್ರಾಂತ್ಯಗಳು ಅಳವಡಿಸಿಕೊಳ್ಳಬಹುದು. ಹಲವು ಸಂದರ್ಭಗಳಲ್ಲಿ ಅಧ್ಯಕ್ಷೀಯ ಆಡಳಿತ ಶ್ರೇಷ್ಠ ಮತ್ತು ಭಾರತಕ್ಕೆ ಬಹಳಷ್ಟೆ ಸೂಕ್ತ ಎಂದು ನಾನು ತಿಳಿದಿದ್ದೇನೆ. ಅದು ಸ್ಥಿರತೆಯ ಖಾತರಿ ನೀಡುತ್ತದೆ. ಮತ್ತು ಭಾರತಕ್ಕೆ ಈಗಿನ ಅಗತ್ಯವೆಂದರೆ ನಮ್ಯತೆಗಿಂತ ಸ್ಥಿರತೆ ಎಂದು ನಾವು ತಿಳಿಯುತ್ತೇವೆ. ಆದರೆ ನಾವು ಸಂಪುಟ ರೀತಿಯ ಆಡಳಿತವನ್ನು ಅಳವಡಿಸಿಕೊಳ್ಳುವುದು ಬೇಡ ಮತ್ತು ರೀತಿಯಿಂದ ಅದನ್ನು ಅಪ್ರಸ್ತುತಗೊಳಿಸಲು ಪ್ರಯತ್ನಿಸೋಣ.

ಉದಾಹರಣೆಗೆ: ರಾಷ್ಟ್ರಪತಿಗೆ ಮತ್ತು ರಾಜ್ಯಪಾಲರಿಗೆ ಸೂಚನೆಗಳ ಲೇಖ ತೆಗೆದುಕೊಳ್ಳಿ. ಮೂಲತಃ ರಾಜ್ಯಪಾಲರಿಗೆ ಸೂಚನೆಗಳ ಲೇಖ ಮಾತ್ರ ಇತ್ತು. ಈಗ ಕರಡು ರಚನಾಸಮಿತಿ ಸೂಚನೆಗಳ ಲೇಖ ಕುರಿತ ಒಂದು ಅಧ್ಯಾಯವನ್ನು ರಾಷ್ಟ್ರಪತಿಗೂ ಅನ್ವಯಿಸುವಂತೆ ಅಳವಡಿಸಿದೆ. ಒಂದು ವೇಳೆ ಭಾರತದ ಪ್ರಧಾನಿ ಈ ಸೂಚನೆಗಳನ್ನು ಉಪೇಕ್ಷಿಸಿದರೆ ಏನಾಗುತ್ತದೆ? ಗವರ್ನರ್ ಜನರಲ್, ಅವರಿಗೆ, "ಈಗ ಸಂವಿಧಾನಕ್ಕನುಗುಣವಾಗಿ ಸೂಚನೆ ಕುರಿತು ಒತ್ತಾಯಿಸುವುದು ನನ್ನ ಹಕ್ಕು" ಎಂದು ಹೇಳುವರೇ? ಭಾರತದ ರಾಷ್ಟ್ರಪತಿ ಮತ್ತು ಪ್ರಧಾನಿ ಮತ್ತು ಸಂಪುಟ ನಡುವೆ ತಾಕಲಾಟದ ಸಾಧ್ಯತೆ ಇರುತ್ತದೆ. ಹಾಗೆಯೇ ಪ್ರಾಂತ್ಯಗಳಲ್ಲಿ ಕೂಡ ಈ ಸೂಚನೆಗಳ ಲೇಖಗಳು ಪ್ರಾಂತೀಯ ಸಚಿವಾಲಯಗಳು ಮತ್ತು ರಾಜ್ಯಪಾಲರ ನಡುವೆ ಘರ್ಷಣೆ ತರಬಹುದು. ನಾವು ಜವಾಬ್ದಾರಿ ಸರ್ಕಾರಕ್ಕೆ ಹೋಗುವಲ್ಲಿದ್ದರೆ, ಇಡಿಯಾಗಿ ಹೋಗಬೇಕು. ನಾವು ಮೂಲಭೂತ ಸೂತ್ರಗಳು ಕುರಿತು ರಾಜಿಯಾಗುವುದು ಬೇಡ. ಏಕೆಂದರೆ ಮೂಲಭೂತ ಸೂತ್ರಗಳನ್ನು ಕುರಿತಂತೆ ರಾಜಿಯು ನಮ್ಮನ್ನು ಎಲ್ಲ ವಿಧಗಳ ಇಕ್ಕಟ್ಟುಗಳು ಮತ್ತು ಅಸಮಂಜಸತೆಗಳಿಗೆ ಒಯ್ಯುತ್ತದೆ. ಪ್ರತಿ ಬಿಕಟ್ಟನ್ನು ವ್ಯವಹರಿಸಲು ಸಂವಿಧಾನದಲ್ಲಿ ವಿಭಿನ್ನವಿಧಾನಗಳನ್ನು ಸೇರ್ಪಡೆ ಮಾಡುವುದು ಸರಿಯಲ್ಲ.

ನನಗಿರುವ ಸಮಯದಲ್ಲಿ ನಾನು ಮುಖ್ಯವಾದ ಕೆಲವು ವಿಷಯಗಳ ಬಗ್ಗೆ ಆಲೋಚಿಸಲು ಪ್ರಯತ್ನಿಸಿದ್ದೇನೆಯಷ್ಟೆ. ಅವನ್ನು ಕರಡು ಸಂವಿಧಾನದ ಅನುಚ್ಛೇದಗಳನ್ನು ಕುರಿತು ಪ್ರಸ್ತಾವಿಸುವಾಗ ನಾವು ಕೂಲಂಕಷವಾಗಿ ಚರ್ಚಿಸಬೇಕಾಗುತ್ತದೆ. ಮಾನ್ಯರೆ, ವಿಶಿಷ್ಟವಾಗಿ ಪರಿಗಣಿಸಬೇಕಾದ ಒಂದೆರಡು ವಿಷಯಗಳು ಇದ್ದೇ ಇವೆ. ಉದಾಹರಣೆಗೆ: ಸಂವಿಧಾನವನ್ನು ಬದಲಾಯಿಸುವ ಉಪಬಂಧಗಳನ್ನು ತೆಗೆದುಕೊಳ್ಳಿ. ಬದಲಾವಣೆಯನ್ನು ಎರಡೂ ಸದನಗಳಲ್ಲಿ ಒಂದು ನಿಶ್ಚಿತ ಬಹುಮತದಿಂದ ಜಾರಿಗೆ ತರಬಹುದು. ಸಂವಿಧಾನ

ವಿಷಯದಲ್ಲಿ ಬದಲಾವಣೆಗಳನ್ನು ಸುಲಭವಾಗಿ ಮಾಡಬಾರದು ಎಂದು ನನಗನಿಸುತ್ತದೆ. ಏಕೆಂದರೆ, ರಾಷ್ಟ್ರೀಯತಾ ಭಾವನೆಯಲ್ಲಿ ತತ್‌ಕ್ಷಣದ ಬದಲಾವಣೆಗಳ ಕಾರಣ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರಬಹುದು. ಸಂವಿಧಾನವನ್ನು ಬೆನ್ನುಹುರಿ ಎಂದು ಪರಿಗಣಿಸಬೇಕು. ಅದು ಆವಶ್ಯಕತೆಗಿಂತ ಹೆಚ್ಚು ನಮ್ಯವಾದರೆ ಮತ್ತು ಆಗಿಂದಾಗ್ಗೆ ಅದನ್ನು ಬದಲಾಯಿಸುತ್ತಿದ್ದರೆ ಅದೂ ಒಂದು ಪಕ್ಷ ಶಾಸನಸಭೆಯಲ್ಲಿ ಬಹುಮತ ಹೊಂದಿತ್ತು ಎಂಬ ಕಾರಣಕ್ಕಾಗಿ ಬದಲಾಯಿಸಿದರೆ ಪ್ರಜಾಪ್ರಭುತ್ವದ ಇದೇ ಆಧಾರ ಚೂರುಚೂರಾಗಿ ಹೋಗುತ್ತದೆ. ಆದುದರಿಂದ ಸಂವಿಧಾನದಲ್ಲಿ ತರಬೇಕಾದ ಬದಲಾವಣೆಗಳ ಕುರಿತಂತೆ ಉಪಬಂಧಗಳನ್ನು ಜಾಗರೂಕತೆಯಿಂದ ಆಲೋಚಿಸಬೇಕು ಎನ್ನುತ್ತೇನೆ. ಸಂವಿಧಾನ ಬದಲಾವಣೆಯನ್ನು ಸರಳೀಕರಿಸಬಾರದು. ಕಡೆಯಪಕ್ಷ ಅತ್ಯಂತ ಮುಖ್ಯ ವಿಷಯಗಳ ಬಗ್ಗೆ ಬದಲಾವಣೆಗಳನ್ನು ಸಂಸತ್ತಿಗೆ ವಹಿಸಿಕೊಟ್ಟಿದ್ದಲ್ಲಿ, ಬಹುದೊಡ್ಡ ಬಹುಮತದಿಂದ ಅದನ್ನು ಆರು ತಿಂಗಳು ಅಥವಾ ಒಂದು ವರ್ಷದ ಅಂತರದಲ್ಲಿ ಕನಿಷ್ಠ ಎರಡು ಬಾರಿ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಹಾಗಾಗಿ ಪರಿಣಾಮಗಳನ್ನು ಪೂರಾ ಗ್ರಹಿಸಿ ಸಂವಿಧಾನದಲ್ಲಿ ಬದಲಾವಣೆಗಳನ್ನು ತರಲಾಗಿದೆ ಎಂಬ ಭರವಸೆಯನ್ನು ನಾವು ಹೊಂದಬಹುದು. ನಾವು ಆತುರಾತುರವಾಗಿ ನಮ್ಮ ಸಂವಿಧಾನವನ್ನು ಬದಲಾಯಿಸಬಾರದು, ಕೆನಡಾ ದೇಶ ಸಂವಿಧಾನ ಜಾರಿಗೆ ಬಂದ ದಿನದಿಂದಲೂ ಸಂವಿಧಾನವನ್ನು ಬದಲಾಯಿಸಿಲ್ಲ. ಆ ದೇಶವೇನಾದರೂ ತೊಂದರೆಗೊಳಗಾಗಿದೆಯೇ? ಅಮೆರಿಕ ಸಂಯುಕ್ತ ಸಂಸ್ಥಾನಗಳು ತನ್ನ ಸಂವಿಧಾನವನ್ನು ತುಂಬ ಅಪರೂಪಕ್ಕೆ ಮಾತ್ರ ಬದಲಾಯಿಸುತ್ತವೆ. ನಮ್ಯತೆಗಿಂತ ಮತ್ತು ಸಂವಿಧಾನ ಬದಲಾಯಿಸುವ ಸೌಲಭ್ಯಕ್ಕಿಂತ ಸ್ಥಿರತೆಗೆ, ಒಂದು ದೃಢ ಸಂವಿಧಾನ ತುಂಬ ಮುಖ್ಯ ಎಂದು ತಾನು ತಿಳಿದಿದ್ದೇನೆ. ಸಂವಿಧಾನ ನಮ್ಮ ಸ್ವಾತಂತ್ರ್ಯದ ಮೂಲೆಯಷ್ಟು ಗಟ್ಟಿ ಮತ್ತು ಮೂಳೆಗಳು ನಮ್ಯತೆಗಿಂತ, ಪೆಡಸುತನ ಹೊಂದಿರಬೇಕು.

ಮಾನ್ಯರೆ, ಡಾ.ಅಂಬೇಡ್ಕರ್ ಗ್ರಾಮಪಂಚಾಯಿತಿಗಳ ಕುರಿತು ಮಾತನಾಡುವಲ್ಲಿ, ಹಳ್ಳಿಯಿಂದ ಪಲ್ಲಟಗೊಂಡರು ಹಾಗೂ ಅವು ಆಧುನಿಕ ಸಂವಿಧಾನವೊಂದಕ್ಕೆ ಸೂಕ್ತ ಹಿನ್ನೆಲೆ ಒದಗಿಸಲು ಸೂಕ್ತವಲ್ಲ ಎಂದುದನ್ನು ಕೇಳಿ ವಿಷಾದವಾಗುತ್ತದೆ. ಕೆಲಮಟ್ಟಿಗೆ ನಾನು ಒಪ್ಪುತ್ತೇನೆ. ಆದರೆ ಅದೇ ಸಮಯಕ್ಕೆ ಗ್ರಾಮಪಂಚಾಯಿತಿಗಳ ಖಂಡನೆಯನ್ನು ಅವು ಎಲ್ಲ ರಾಷ್ಟ್ರೀಯ ವಿಪತ್ತುಗಳಿಗೆ ಕಾರಣ ಎಂಬ ಅವರ ಹೇಳಿಕೆಗಳನ್ನು ನಾನು ಒಪ್ಪುವುದಿಲ್ಲ. ಕ್ರಾಂತಿಗಳು ಮತ್ತು ಬದಲಾವಣೆಗಳು ಇದ್ದಾಗಲೂ ಅವು ಭಾರತೀಯ ಜೀವನವನ್ನು ಕಾಯ್ದುಕೊಂಡಿವೆ ಮತ್ತು ಅವುಗಳಿಲ್ಲದೆ ಹೋಗಿದ್ದಲ್ಲಿ ಭಾರತವು ಅರಾಜಕತೆಯಿಂದ ಕೂಡಿರುತ್ತಿತ್ತು. ಸೂಕ್ತ ಮಿತಿಗಳಲ್ಲಿ ಗ್ರಾಮಕ್ಕೆ ಸ್ವತಂತ್ರ ಅಧಿಕಾರ ಕುರಿತಂತೆ ಯಾವುದಾದರೂ ಶಾಸನಬದ್ಧ ಉಪಬಂಧವನ್ನು ಸೇರಿಸಬೇಕು ಎಂದು ನಾನು ಆಶಿಸುತ್ತೇನೆ. ಹಾಗೆ ನೋಡಿದರೆ ಕಷ್ಟಗಳಿವೆ. ಏಕೆಂದರೆ ತುಂಬ ಸಣ್ಣ ಹಳ್ಳಿಗಳು ಮತ್ತು ದೊಡ್ಡ ಹಳ್ಳಿಗಳು ಇವೆ ಹಾಗೂ ಅವುಗಳಲ್ಲಿ ಹಲವನ್ನು ಪಂಚಾಯಿತಿಗಳನ್ನು ಸ್ಥಾಪಿಸಲು ಸಂಘಟಿಸಬೇಕಾಗಬಹುದು. ಆದರೆ ಯಾವುದಾದರೂ ಹಂತದಲ್ಲಿ ಎಲ್ಲ ಪ್ರಾಂತ್ಯಗಳು ಪಂಚಾಯಿತಿಗಳನ್ನು ರಚಿಸಿದಾಗ, ಅವುಗಳ ಅಸ್ತಿತ್ವವನ್ನು ಸಂವಿಧಾನದಲ್ಲಿ ಗುರುತಿಸಬೇಕಾಗಬಹುದು. ಮುಂದೆ ಪ್ರತಿ ಹಳ್ಳಿಯ ಸ್ಥಳೀಯ ಸ್ವಾಯತ್ತತೆಯು ಈ ದೇಶದ ಸ್ವಾತಂತ್ರ್ಯದ ಮೂಲ ಸ್ವರೂಪವನ್ನು ರಚಿಸಬೇಕಾಗುತ್ತದೆ.

ಮಾನ್ಯರೆ, ಇನ್ನೊಂದು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ಇನ್ನು ಒಂದು ವಿಷಯ ಮಾತ್ರ ಇದೆ. ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವಿನ ಕೃತಕ ಭೇದ ಆದಷ್ಟು ತ್ವರಿತವಾಗಿ ಅಳಿಸಿಹೋಗಬೇಕು ಎಂದು ಪ್ರಸ್ತಾವಕರು ಆಡಿದ ಮಾತಿಗೆ ನನ್ನ ಸಹಮತವಿದೆ. ಇರುವ ಒಂದೇ ತೊಡಕೆಂದರೆ, ಕೇಂದ್ರ ವಿಷಯವನ್ನು ರಾಜ್ಯಗಳು ಒಳಗೊಂಡು ತುಸು ಹಣಕಾಸು ವಿಷಯದಲ್ಲಿ ಅವಕ್ಕೆ ಆಸಕ್ತಿ ಹೆಚ್ಚಿದೆ. ಮತ್ತು ನಾವು ಪ್ರಾಂತ್ಯಗಳಂತೆ ಅದೇ ಸಂವಿಧಾನಗಳನ್ನು ಅಳವಡಿಸುವುದರಿಂದ ಆಗುವ ಆರ್ಥಿಕ ಪರಿಣಾಮಗಳಿಂದ ರಾಜ್ಯಗಳನ್ನು ರಕ್ಷಿಸಲು ಒಂದು ಸೂತ್ರ ಕಂಡುಕೊಳ್ಳಬೇಕಾದರೆ ಆಗ ರಾಜ್ಯಗಳ ಪ್ರಾಂತ್ಯಗಳೊಂದಿಗೆ ವಿಲೀನಗೊಳ್ಳಲು ತಕರಾರಿಲ್ಲದೆ

ಅಪೇಕ್ಷಿಸಬಹುದು. ಆದುದರಿಂದ, ನಾವು ಯಾವ ರಾಜ್ಯವೂ ಪ್ರಾಂತಗಳೊಂದಿಗೆ ಇದ್ದು ನರಳಬಾರದೆಂಬುದಕ್ಕೆ ಮೂಲತತ್ತ್ವವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಮತ್ತು ಪ್ರಾಂತ್ಯಗಳೊಂದಿಗೆ ಇದ್ದು ಅನುಭವಿಸುವ ಯಾವುದೇ ನಷ್ಟವನ್ನು ಕೇಂದ್ರದ ನಿಧಿಯಿಂದ ಕಟ್ಟಿಕೊಡಲಾಗುತ್ತದೆ ಎಂಬ ಭರವಸೆ ಕೊಡಬೇಕು. ನಾವು 'ಎ' ವರ್ಗದ ರಾಜ್ಯಗಳು ಮತ್ತು 'ಬಿ' ವರ್ಗದ ರಾಜ್ಯಗಳು ಎಂಬ ಅಸಮಂಜಸತೆಯನ್ನು ಹೊಂದಿರಬಾರದು ಎಂಬುದನ್ನು ನಾನು ಒಪ್ಪುತ್ತೇನೆ. ಅವು ಕೇವಲ ಗೊಂದಲಕ್ಕೆ ಕಾರಣವಾಗುತ್ತದೆ. ಸಾಧ್ಯವಾದರೆ, ಘಟಕಗಳ ವಿವಿಧ ಪ್ರವರ್ಗಗಳೆಲ್ಲವನ್ನೂ ರದ್ದುಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ಕೇವಲ ಏಕೈಕ ಸರ್ವಸಮ್ಮತ / ಸರ್ವಾನ್ವಯಿಕ ಘಟಕ ಸಂವಿಧಾನವಿದ್ದು, ಅದು ಸ್ಥಳೀಯ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಿರಬೇಕು.

ಮಾನ್ಯರೆ, ಸಮಯದ ಮಿತಿಯ ಕಾರಣ ಸಂವಿಧಾನದ ಸೂಕ್ತ ಚರ್ಚೆಗೆ ಇದು ಸಕಾಲವಲ್ಲ ಎಂಬುದಕ್ಕಾಗಿ ನಾನು ಕೆಲವೇ ವಿಷಯಗಳನ್ನು ಪ್ರಸ್ತಾವಿಸಿದ್ದೇನೆ. ಅವು ಈ ಸದನದ ಪರಿಗಣನೆಗೆ ಸ್ವೀಕಾರವಾಗುತ್ತವೆ ಎಂದು ನಾನು ಆಶಿಸುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಒಬ್ಬ ಸಮರ್ಥ ಮತ್ತು ದಕ್ಷ ವಕೀಲರಾಗಿ, ಗೌರವಾನ್ವಿತ ಡಾ. ಅಂಬೇಡ್ಕರ್ ಈ ಸದನದಲ್ಲಿ ಕರಡು ಸಂವಿಧಾನವನ್ನು ತುಂಬ ಸರಳವಾದ ಶಬ್ದಗಳಲ್ಲಿ ಮಂಡಿಸಿದ್ದಾರೆ ಮತ್ತು ಅವರು ಬಾಹ್ಯ ಜಗತ್ತಿನ ಮೇಲೆ ಮತ್ತು ಇಲ್ಲಿನ ಕೆಲವು ಗೌರವಾನ್ವಿತ ಸದಸ್ಯರ ಮೇಲೂ ಪ್ರಭಾವ ಬೀರಿರುವರು. ಆದರೆ ಅದು ಸಂವಿಧಾನ ನಿರ್ಣಯಿಸಲು ಮಾನದಂಡವಲ್ಲ. ಇದು ಈ ದೇಶದಲ್ಲಿ ಪ್ರಜಾಪ್ರಭುತ್ವಕ್ಕಾಗಿ ತಯಾರಿಸಲಾಗಿರುವ ಒಂದು ಸಂವಿಧಾನ ಮತ್ತು ಡಾ.ಅಂಬೇಡ್ಕರ್ ಅವರು ಸ್ಥಳೀಯ ಪ್ರಾಧಿಕಾರಗಳು ಮತ್ತು ಹಳ್ಳಿಗಳನ್ನು ಉಪೇಕ್ಷಿಸುವ ಮೂಲಕ ಪ್ರಜಾಪ್ರಭುತ್ವದ ಕಲ್ಪನೆಯನ್ನೇ ಧಿಕ್ಕರಿಸಿರುವರು. ಮಾನ್ಯರೆ, ಸ್ಥಳೀಯ ಪ್ರಾಧಿಕಾರಗಳು ದೇಶದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಹೆಗ್ಗುರುತುಗಳು ಮತ್ತು ಈ ಸಂವಿಧಾನದಲ್ಲಿ ಸ್ಥಳೀಯ ಪ್ರಾಧಿಕಾರಗಳಿಗೆ ಸ್ಥಳವಿಲ್ಲದಿದ್ದರೆ, ಸಂವಿಧಾನವು ಪರಿಗಣನೆಗೆ ಯೋಗ್ಯವಲ್ಲ. ಸ್ಥಳೀಯ ಪ್ರಾಧಿಕಾರಗಳು ಇಂದು ತುಂಬ ಹೀನಾಯ ಸ್ಥಿತಿಯಲ್ಲಿವೆ. ಕೇಂದ್ರವು ತುಂಬ ಬಲಿಷ್ಠಗೊಂಡಿದೆ ಎಂದೂ ಕೆಲವು ಅಧಿಕಾರಗಳನ್ನು ತಮ್ಮಿಂದ ತೆಗೆದುಕೊಳ್ಳಲಾಗಿವೆ ಎಂದೂ ದೂರು ಮಾಡಿರುವ ಪ್ರಾಂತ್ಯಗಳು ತಾವೆ ಸ್ಥಳೀಯ ಅಂಗಗಳ ಅಧಿಕಾರವನ್ನು ಕಿತ್ತುಕೊಂಡ ಅಧಿಕಾರದ ಅಮಲಿನಲ್ಲಿವೆ ಮತ್ತು ಇಂದು ದುರಾಡಳಿತದ ಹೆಸರಿನಲ್ಲಿ ಶೇಕಡ ೫೦ಕ್ಕೂ ಹೆಚ್ಚು ಸ್ಥಳೀಯ ಅಂಗಗಳು ಪ್ರಾಂತೀಯ ಸರ್ಕಾರಗಳಿಂದ ಕಡೆಗಣಿಸಲ್ಪಟ್ಟಿವೆ. ಸ್ಥಳೀಯ ನಿಕಾಯಗಳು ಪ್ರಾಂತೀಯ ಸರ್ಕಾರಗಳಿಂದ ಅಧಿಕ್ರಮಿಸಲ್ಪಟ್ಟಿವೆ. ಮಾನ್ಯರೆ, ಇದು ಹಿಂದಿನ ಬ್ರಿಟಿಷ್ ಆಡಳಿತದಲ್ಲಿದ್ದ ಮನೋಭಾವ. ಪ್ರಾಂತೀಯ ಸರ್ಕಾರಗಳು ಸ್ಥಳೀಯ ಅಂಗಗಳ ಇಡೀ ವ್ಯವಸ್ಥೆಯಲ್ಲಿ ಕ್ರಾಂತಿ ತರುವ ಬದಲಿಗೆ ಸುಮ್ಮನೆ ರೂಢಿಯಲ್ಲಿದ್ದುದನ್ನೇ ಅನುಸರಿಸುತ್ತಿವೆ. ಗ್ರಾಮೀಣರ ಉತ್ಕರ್ಷಕ್ಕೆ ಈ ಅಂಗಗಳನ್ನು ತುಂಬ ಉಪಯುಕ್ತ ಸಂಸ್ಥೆಗಳನ್ನಾಡಿ ಮಾಡಲು ಸಂವಿಧಾನದಲ್ಲಿ ಒಂದು ಮಾರ್ಗದರ್ಶನ ಮಾಡಿದ ಹೊರತು, ಈ ದಾಖಲೆಯನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ಜಾರಿಗೊಳಿಸುವುದು ಯೋಗ್ಯವಲ್ಲ ಎಂದು ನಾನು ನಿಮಗೆ ಹೇಳುತ್ತೇನೆ. ಸ್ಥಳೀಯ ಅಂಗಸಂಸ್ಥೆಗಳ ಹಣಕಾಸು ಸ್ಥಿತಿ ಶೋಚನೀಯ ಸ್ಥಿತಿಯಲ್ಲಿದೆ. ಪ್ರಾಂತೀಯ ಸರ್ಕಾರಗಳ ಸ್ಥಳೀಯ ಸಂಸ್ಥೆಗಳಿಗೆ ವಿದ್ಯುಚ್ಛಕ್ತಿ ತೆರಿಗೆಗಳು, ಮನೋರಂಜನಾ ತೆರಿಗೆ ಮೊದಲಾದವನ್ನು ಕೊಡಬಯಸುವುದಿಲ್ಲ. ಅವು ಪಾಶ್ಚಾತ್ಯ ದೇಶಗಳಲ್ಲಿ ಸ್ಥಳೀಯರ ಸಂಸ್ಥೆಗಳಿಗೆ ಆದಾಯದ ಮೂಲಗಳಾಗಿವೆ. ಈ ದೇಶದಲ್ಲಿ ಈ ಎಲ್ಲ ತೆರಿಗೆಗಳನ್ನು ಪ್ರಾಂತ್ಯಗಳೇ ಕಸಿದುಕೊಂಡುಬಿಡುತ್ತವೆ. ಇಂದು ಸ್ಥಳೀಯ ಸಂಸ್ಥೆಗಳು ಕೇವಲ ಅಸ್ಥಿಪಂಜರಗಳಾಗಿವೆ. ಇದೇ ಪ್ರವೃತ್ತಿ ಮುಂದುವರಿದರೆ, ಸ್ಥಳೀಯ ಸಂಸ್ಥೆಗಳ ಮತ್ತು ಹಳ್ಳಿಗಳ ಸಮೃದ್ಧಿ ಹೇಗೆ ಕಂಡೀತು? ಘನತೆವೆತ್ತ ಗವರ್ನರ್ ಜನರಲ್ ಅವರು ತಮ್ಮ ಇತ್ತೀಚಿನ ಭಾಷಣಗಳಲ್ಲಿ ಹಾಗೂ ಉಪಪ್ರಧಾನಿ ಬಾಂಬೆಯಲ್ಲಿ ತಮ್ಮ ಭಾಷಣದಲ್ಲಿ

ಪ್ರತಿಯೊಬ್ಬ ಗ್ರಾಮಸ್ಥನೂ ತಾನು ಒಬ್ಬ ಜವಾಬ್ದಾರಿಯುತ ಪುರುಷ ಅಥವಾ ಜವಾಬ್ದಾರಿಯುತ ಮಹಿಳೆ ಎಂದು ತಿಳಿಯುವಂತೆ ಮತ್ತು ಅವನು ಅಥವಾ ಅವಳು ದೇಶದ ಆಡಳಿತದಲ್ಲಿ ಒಂದು ಪಾಲು ಹೊಂದಿರುವರು ಎಂದು ಗ್ರಹಿಸುವಂತೆ ಮಾಡಬೇಕೆಂದು ಹೇಳಿರುವರು. ತಾವು ಜನಸಂಖ್ಯೆಯ ಅತ್ಯಂತ ದೊಡ್ಡ ಭಾಗವಾದ ಗ್ರಾಮಸ್ಥರನ್ನು ಉಪೇಕ್ಷಿಸಿದರೆ ಇದನ್ನು ಹೇಗೆ ಮಾಡಲಾದೀತು ಎಂದು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿದ್ದೇನೆ.

ನೀವು ನಿಮ್ಮ ಕೈಗಳಲ್ಲಿ ಅಧಿಕಾರವನ್ನು ಸುಮ್ಮನೆ ತೆಗೆದುಕೊಂಡು ಅತ್ಯುನ್ನತ ಸ್ತರದಲ್ಲಿ ಕೆಲವು ಸುಧಾರಣೆಗಳನ್ನು ಮಾಡುವಿರಿ. ಆದರೆ ಜನಸಾಮಾನ್ಯರು ಇಂದು ಸುಖವಾಗಿರಲು ಹೋರಾಡುತ್ತಿದ್ದಾರೆ. ಮತ್ತು ನೀವು ಯಾವ ವಿಧದಲ್ಲೂ ಅವರಿಗೆ ಸಹಾಯಕವಾಗಿಲ್ಲ. ನಾನು ನಮೂದಿಸಿರುವ ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸದೆ. ನಾವು ಸಂವಿಧಾನವನ್ನು ಅಂಗೀಕರಿಸಿದರೆ ಜನಸಾಮಾನ್ಯರನ್ನು ಉಪೇಕ್ಷಿಸಲಾಗಿದೆ ಎಂಬ ಪ್ರಸ್ತುತ ಭಾವನೆ ತೀವ್ರಗೊಳ್ಳುತ್ತದೆ. ಮಾನ್ಯರೆ, ಡಾ. ಅಂಬೇಡ್ಕರ್ ಇತರ ದೇಶಗಳ ಹಲವಾರು ಸಂವಿಧಾನಗಳ ಹಲವು ಹತ್ತು ಉಪಬಂಧಗಳನ್ನು ಎರವಲು ಪಡೆದು ಈ ಸಂವಿಧಾನದಲ್ಲಿ ಸೇರಿಸಲಾಗಿದೆ ಎಂಬ ಒಂದು ತಪ್ಪೊಪ್ಪಿಗೆ ಮಾಡಿಕೊಂಡಿದ್ದಾರೆ. ಇತರ ದೇಶಗಳಲ್ಲಿರತಕ್ಕ ಕೆಲವು ಉತ್ತಮ ಉಪಬಂಧಗಳನ್ನು ಎರವಲು ಪಡೆಯುವುದರಲ್ಲಿ ಏನೂ ತಪ್ಪಿಲ್ಲ ಎಂದು ನಾನು ವೈಯಕ್ತಿಕವಾಗಿ ತಿಳಿದಿದ್ದೇನೆ. ನಾವು ನೋಡಬೇಕಾದ ಒಂದೇ ವಿಷಯವೆಂದರೆ, ಆ ದೇಶಗಳಲ್ಲಿ ಅನುಕೂಲಕರವಾಗಿರಬಹುದಾದ ಉಪಬಂಧಗಳು ಈ ದೇಶದಲ್ಲಿ ಕೂಡ ಅಷ್ಟೇ ಅನುಕೂಲಕರವಾಗಿರಬಹುದೇ ಎಂದು. ಹೇಗೇ ಇರಲಿ, ಅನುಸೂಚಿ ೭ರಲ್ಲಿ ನೋಡುವಾಗ ನಾನು ನೋಡುವುದೆಂದರೆ – ಅವು ಮುಖ್ಯಪಟ್ಟಿಗಳು–ಒಕ್ಕೂಟ ಅಧಿಕಾರಪಟ್ಟಿ, ರಾಜ್ಯಪಟ್ಟಿ, ಪ್ರಾಂತೀಯಪಟ್ಟಿ ಮತ್ತು ಸಮವರ್ತಿ ಪಟ್ಟಿ ಇವುಗಳಲ್ಲಿ ಅಲ್ಲಲ್ಲಿ ಕೆಲವು ಬದಲಾವಣೆಗಳನ್ನು ಬಿಟ್ಟರೆ ಇಡಿಯಾಗಿ ೧೯೩೫ರ ಅಧಿನಿಯಮವನ್ನು ನಕಲು ಮಾಡಲಾಗಿದೆ. ಹಲವಾರು ಪ್ರಾಂತೀಯ ಸರ್ಕಾರಗಳು ಮಾನ್ಯತೆಗಳನ್ನೇನಾದರೂ ಕಂಡಿವೆಯೇ ಎಂಬ ಬಗ್ಗೆ ವಿಚಾರಣೆ ಮಾಡಲಾಗಿದೆಯೇ ಎಂಬುದು ನನಗೆ ತಿಳಿದಿಲ್ಲ. ನಾನು ಒಂದೆರಡು ವಿಷಯಗಳನ್ನು ತಿಳಿಸುತ್ತೇನೆ. ಮಾರ್ಗಾಂತ್ಯದ ತೆರಿಗೆ, ವೃತ್ತಿತೆರಿಗೆ ಮತ್ತು ಭಾರತ ಸರ್ಕಾರದ ಕಟ್ಟಡದ ಮೇಲಿನ ತೆರಿಗೆಯನ್ನು ವಸೂಲಿ ಮಾಡುವುದು ಇವೆಲ್ಲ ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ನಡುವಿನ ವಿವಾದ ವಿಷಯವಾಗಿದ್ದುವು. ಕೆಲವು ಸಂದರ್ಭಗಳಲ್ಲಿ ವಿಷಯ ಒಕ್ಕೂಟ ನ್ಯಾಯಾಲಯಕ್ಕೆ ಹೋಗಿತ್ತು. ಪ್ರಾಂತೀಯ ಸರ್ಕಾರಗಳಿಂದ ಹೇರಲಾದ ಶ್ರಮಕ್ಕೆ ಯಾವುದೇ ಗಮನವನ್ನು ನೀಡದೆ ಉಪಸಮಿತಿಗಳು ಈ ವಿಷಯಗಳನ್ನೆಲ್ಲ ಬರಿಯ ನಕಲು ಮಾಡಿವೆ ಎಂದು ನನಗೆ ತೋರುತ್ತದೆ. ಆದುದರಿಂದ ಈ ಮೂರೂ ಪಟ್ಟಿಗಳು ಸದನದ ಮುಂದೆ ಬಂದಾಗ ಸದನ ಅದಕ್ಕೆ ಗಮನಹರಿಸಲೇಬೇಕೆಂದು ನಾನು ಭಾವಿಸುತ್ತೇನೆ. ಕಳೆದ ಸಲ ನಾವು ಸೇರಿದಾಗ ಈ ಪಟ್ಟಿ ನಮ್ಮ ಮುಂದೆ ಬಂದಾಗ ಕಾಲಾಭಾವದಿಂದ ಅವು ಹೇಗಿದ್ದವೋ ಹಾಗೆಯೇ ಬಿಟ್ಟೆವು. ಈ ಸಂವಿಧಾನದಲ್ಲಿರುವ ಯಾವುದೇ ಉಪಬಂಧಕ್ಕಿರುವಷ್ಟೆ ಪ್ರಾಮುಖ್ಯ ಈ ಪಟ್ಟಿಗೂ ಇದೆ. ಆದುದರಿಂದ ಇದರ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಲಾಗುವುದೆಂಬ ಭರವಸೆ ಹೊತ್ತಿದ್ದೇನೆ.

ಮೂಲಭೂತ ಹಕ್ಕುಗಳಿಗೆ ಬಂದರೆ, ಈ ಸದನದ ಸರ್ವಾನುಮತ ನಿರ್ಣಯವನ್ನು ಬದಲಿಸಲು ಸಮಿತಿಗೆ ಅಧಿಕಾರವಿದೆಯೇ ಎಂದು ನಾನು ತಿಳಿದಿಲ್ಲ. ನಾನು ಆ ಬಗ್ಗೆ ವಿವಾದ ಮಾಡುವುದಿಲ್ಲ ಮತ್ತು ಇವೂ ಸಹ ಶಿಫಾರಸುಗಳು ಎಂದು ನಾನು ಒಪ್ಪುತ್ತೇನೆ. ಆದರೆ ಒಂದು ಮೂಲಭೂತ ವಿಷಯ ಕುರಿತಂತೆ, ಸದನವು ಪಕ್ವ ಪರಿಗಣನೆಯ ಅನಂತರ ನಿರ್ಣಯವೊಂದನ್ನು ತೆಗೆದುಕೊಂಡಾಗ, ಆ ಶಿಫಾರಸುಗಳನ್ನು ಮಾಡುವಲ್ಲಿಯೂ ಅವರ ಹಕ್ಕುಗಳನ್ನು ಮೀರಿದ್ದಾರೆ ಎಂದು ನಾನು ಭಾವಿಸುತ್ತೇನೆ.

ನಾನು ಒಂದು ನಿದರ್ಶನ ಮಾತ್ರ ಕೊಡುತ್ತೇನೆ. ಕಳೆದ ಅಧಿವೇಶನದಲ್ಲಿ ಸಂವಿಧಾನ ರಚನಾಸಭೆ ಮೂಲಭೂತ ಹಕ್ಕುಗಳನ್ನು ಅಂಗೀಕರಿಸಿತು.

"ಯಾವುದೇ ವ್ಯಕ್ತಿ ಕಾನೂನಿನ ಪ್ರಕ್ರಿಯೆ ಇಲ್ಲದೆ ಯಾವ ವ್ಯಕ್ತಿಯೂ ತನ್ನು ಸ್ವತಂತ್ರ ಜೀವನದಿಂದ ವಂಚಿತನಾಗಬಾರದು ಇಲ್ಲವೇ ಯಾವುದೇ ವ್ಯಕ್ತಿಯನ್ನು ಒಕ್ಕೂಟ ಪ್ರದೇಶಗಳೊಳಗೆ ಕಾನೂನುಗಳ ಸಮಾನ ವ್ಯವಹಾರದಿಂದ ಹೊರಗಿಡಬಾರದು."

ಕಂಡು ರಚನಾಸಮಿತಿ ಇದರಲ್ಲಿ ಒಂದು ಬದಲಾವಣೆ ಮಾಡಿದೆ. ಕ್ರಾಂತಿಕಾರಿ ಬದಲಾವಣೆ ಎಂದು ನಾನು ಹೇಳಬೇಕು ಮತ್ತು ಈ ಸದನದ ಮುಂದೆ ಇಡುತ್ತೇನೆ. ನಾನು ಅವರ ಶಿಫಾರಸು ಓದುತ್ತೇನೆ.

"ಕಾನೂನಿನಿಂದ ಸ್ಥಾಪಿತವಾದ ಕ್ರಮಗಳಿಗನುಗುಣವಾಗಿ ಹೊರತು, ಯಾವುದೇ ವ್ಯಕ್ತಿ ಆತನ ವೈಯಕ್ತಿಕ ಸ್ವಾತಂತ್ರ್ಯದ ಜೀವನದಿಂದ ವಂಚಿತನಾಗಬಾರದು."

ಉಳಿದ ಶಬ್ದಗಳನ್ನು ತೆಗೆದು ಹಾಕಲಾಗಿತ್ತು. ನಾವು ಈ ವಿಷಯವನ್ನು ಸಂದರ್ಭ ಬಂದಾಗ ಎತ್ತಿಕೊಳ್ಳೋಣ. ಆದರೆ ಮಾನ್ಯರೆ, ಕಳೆದ ಬಾರಿ ನಾವು ಅಂಗೀಕರಿಸಿದ ಮೂಲಭೂತ ಹಕ್ಕುಗಳಲ್ಲಿ ಆಗಲೇ ಒಂದು ದೂರು ಇತ್ತು ಎಂದು ನಾನು ಭಾವಿಸಿದ್ದೇನೆ. ಅದೇಂದರೆ ನಾವು ಹೋಗಬೇಕಾದ ವ್ಯಾಪ್ತಿಗೆ ಹೋಗಲಿಲ್ಲ ಎಂದು ಇತ್ತು. ತಾವು ಪೌರರ ಆ ಹಕ್ಕುಗಳನ್ನು ಕೂಡ ಮೊಟಕು ಮಾಡಹೋದರೆ, ಮೂಲಭೂತ ಹಕ್ಕುಗಳನ್ನ ಅಪಹಾಸ್ಯಮಾಡಲಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ರಾಜ್ಯಗಳ ಸಂವಿಧಾನ ಕುರಿತಂತೆ ಎತ್ತಲಾದ ಒಂದು ವಿಷಯವನ್ನು ನಾನು ಮೆಚ್ಚಿದ್ದೇನೆ. ಈ ವಿಷಯದಲ್ಲಿ ಅವರು ಏನು ಹೇಳಿರುವರೋ ಅದನ್ನು ನಾನು ಒಪ್ಪುತ್ತೇನೆ. ನಾವು ಕಳೆದ ಬಾರಿ ಈ ಸಂವಿಧಾನ ರಚಿಸಿದಾಗ ರಾಜ್ಯಗಳ ಸ್ಥಿತಿಗಳು ಇಂದು ಏನಿವೆಯೋ ಅದಕ್ಕಿಂತ ತುಸು ಭಿನ್ನವಿದ್ದವು. ಪ್ರತಿ ಹೊಸ ರಾಜ್ಯಕ್ಕೂ ಒಂದು ಪ್ರತ್ಯೇಕ ಸಂವಿಧಾನವಿರಬೇಕು ಏಕೆ ಎಂದು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಎಲ್ಲ ರಾಜ್ಯಗಳೂ ಈ ಸಂವಿಧಾನದ ಪ್ರಾಂತೀಯ ಭಾಗವನ್ನು ಅಳವಡಿಸಿಕೊಳ್ಳಬೇಕು ಎಂಬ ಉಪಬಂಧವಿರಬೇಕು. ರಾಜ್ಯಪಾಲರ ಬದಲು ಆಡಳಿತಗಾರ ರಾಜ್ಯಪಾಲರಾಗಿರಬೇಕು ಮತ್ತು ಅಂತಹ ಕೆಲವು ಇತರ ಬದಲಾವಣೆಗಳು, ಆದರೆ ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಸಂವಿಧಾನ ಇರಬಾರದು. ಹಾಗೆ ನೋಡಿದರೆ ಅವೆಲ್ಲ ಭಾರತೀಯ ಒಕ್ಕೂಟಕ್ಕೆ ವಿಲೀನಗೊಂಡಿವೆ. ಅವುಗಳ ಕಾನೂನುಗಳು ನಮ್ಮ ಕಾನೂನುಗಳೇ ಆಗಿರಬೇಕು. ಈಗ ಇದು ಒಬ್ಬ ಮನುಷ್ಯನ ಆಡಳಿತವಲ್ಲ. ಈ ಒಕ್ಕೂಟದಲ್ಲಿ ಎಲ್ಲ ರಾಜ್ಯಗಳೂ ನಮ್ಮ ಸ್ವಂತ ಬಂಧುಬಳಗದವರೇ ಆಗಿರುವುದರಿಂದ ಒಂದು ದೇಶದಲ್ಲಿ ಹೇಗೆ ಎರಡು ಕಾನೂನುಗಳು ಇರುತ್ತವೆ ಎಂದು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಆದುದರಿಂದ, ಮಾನ್ಯರೆ, ಆ ಪ್ರಶ್ನೆಗೆ ತುಂಬ ಗಂಭೀರ ಗಮನ ಕೊಡಬೇಕಾಗಿದೆ ಎಂದು ನಾನು ಭಾವಿಸುತ್ತೇನೆ. ರಾಜ್ಯಗಳ ಜನ ತಮ್ಮದೇ ಸಂವಿಧಾನಗಳನ್ನು ತಯಾರಿಸಿಕೊಳ್ಳಲು ಅವಕಾಶ ಮಾಡಬಹುದೆ? ಅದು ನಾವು ಈಗ ಸಿದ್ಧಪಡಿಸುತ್ತಿರುವ ಮುಖ್ಯ ಸಂವಿಧಾನದ ಮೂಲಸೂತ್ರಗಳಿಗೆ ವಿರುದ್ಧವಲ್ಲವೆ? ಮೂಲಭೂತ ಹಕ್ಕುಗಳಲ್ಲಿ ಅವು ನಾವು ನಿರ್ಧರಿಸಿರುವುದಕ್ಕಿಂತ ಕಡಮೆ ಎಲ್ಲಿಯೋ ಹೋಗಬಹುದು. ಹಲವು ವಿಷಯಗಳಲ್ಲಿ ಅವು ಈ ದೇಶದ ಪ್ರತಿಯೊಬ್ಬ ನಾಗರಿಕನಿಗೂ ನಾವು ಅಂತಿಮವಾಗಿ ಒದಗಿಸಿರುವುದಕ್ಕೆ ವಿರುದ್ಧ ಹೋಗಬಹುದು.

ಮಾನ್ಯರೆ, ಉದಾಹರಣೆಗೆ, ಉಚ್ಚನ್ಯಾಯಾಲಯಗಳನ್ನು ತೆಗೆದುಕೊಳ್ಳಿ. ಇಂದು ಭಾರತದ ಉಚ್ಚನ್ಯಾಯಾಲಯಗಳಲ್ಲಿ ಅತ್ಯುತ್ತಮ ಮನುಷ್ಯರು ನ್ಯಾಯಪೀಠಾಸೀನರಾಗಿರುವರು. ಅವರು ಪ್ರಥಮ ದರ್ಜೆ ಮನುಷ್ಯರು ಮತ್ತು ಅವರ ತೀರ್ಪುಗಳು ಕೂಡ ಸಂಯುಕ್ತ ನ್ಯಾಯಾಲಕ್ಕೂ ಪ್ರಿವಿ ಕೌನ್ಸಿಲ್‌ಗೂ ಪ್ರಿಯವಾಗಬಲ್ಲವು. ಆದರೆ ರಾಜ್ಯಗಳ ಈ ಎರಡನೇ ದರ್ಜೆ ಉಚ್ಚನ್ಯಾಯಾಲಯಗಳಲ್ಲಿ – ಎರಡನೇ ದರ್ಜೆ ಎಂದು ಹೇಳುವಲ್ಲಿ ನಾನು ಯಾವುದೇ ಅಗೌರವ ತೋರಿಸುತ್ತಿಲ್ಲ–ಇರುವವರು. ಪ್ರಥಮದರ್ಜೆ ಮನುಷ್ಯರಲ್ಲ ಎಂಬುದು ವಾಸ್ತವಾಂಶ. ಅವರ ತೀರ್ಪುಗಳು ಸಂಯುಕ್ತ ನ್ಯಾಯಾಲಯದಲ್ಲಿ ಬದಲಾಯಿಸಲಾಗದು. ನಾನು ಕೇಳುತ್ತೇನೆ, ನೀವು ಈ ಹಕ್ಕನ್ನು ರಾಜ್ಯವೊಂದರ ಪೌರನಿಗೆ ಕೊಡದಿರುವುದು ಸರಿಯೆ? ಆದುದರಿಂದ, ಮಾನ್ಯರೆ, ಈ ವಿಷಯವನ್ನು ಕೂಡ ತುಂಬ ಗಂಭೀರವಾಗಿ ಪರಿಗಣಿಸಬೇಕು ಮತ್ತು ರಾಜ್ಯದ ಜನರ ಕೆಲಸವನ್ನು ಸುಲಭಮಾಡಬೇಕು.

ಈ ಸಂವಿಧಾನದ ಪ್ರಾಂತೀಯ ಭಾಗವನ್ನು ಕೆಲವು ಬದಲಾವಣೆಗಳಿಂದ ಸಂಪೂರ್ಣವಾಗಿ ಅವರಿಗೆ ಅನ್ವಯವಾಗುವಂತೆ ಮಾಡಬೇಕು ಎಂದು ನಾನು ಭಾವಿಸುತ್ತೇನೆ.

ಕಡೆಯದಾಗಿ, ಅಲ್ಪಸಂಖ್ಯಾತರಿಗೆ ಮೀಸಲಾತಿ ಮತ್ತು ರಕ್ಷಣೆ ಕುರಿತು ಒಂದು ಉಲ್ಲೇಖ ಮಾಡಲಾಗಿದೆ. ನಾನು ಈ ಅಲ್ಪಸಂಖ್ಯಾತ ಸಮಿತಿಯಲ್ಲಿ ಮತ್ತು ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ ಉಳಿದಿದ್ದೇನೆ ಮತ್ತು ನಾನು ಅಲ್ಪಸಂಖ್ಯಾತರ ಸಮಸ್ಯೆಯೊಂದಿಗೆ ಬಹುಸಂಖ್ಯಾತ ಸಮುದಾಯ ವ್ಯವಹರಿಸಿರುವ ರೀತಿಗೆ ವಂದಿಸುತ್ತೇನೆ. ಈ ವಿಷಯವಾಗಿ ಯಾವುದೇ ವಿಭಾಗದಿಂದ ಯಾವ ದೂರೂ ಇರಬಾರದು ಎಂದು ನಾನು ಹೇಳಲೇಬೇಕು. ನಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ, ಸ್ಥಾನಗಳ ಮೀಸಲಾತಿಯ ಕೊಡುಗೆ ಮಾಡಲಾಗಿದ್ದರೂ ನಾವು ಅದನ್ನು ವಿನಯಪೂರ್ವಕವಾಗಿ ತಿರಸ್ಕರಿಸಿದ್ದೇವೆ. ಹಾಗೆಯೇ, ನಿನ್ನೆ ಸ್ಥಾನಗಳ ಮೀಸಲಾತಿ ರದ್ದುಪಡಿಸುವಂತೆ ಖಾಜಿ ಸೈಯದ್ ಕರೀಮುದ್ದೀನ್ ಆಗ್ರಹಪಡಿಸಿದರು. ಈ ಹೇಳಿಕೆ ಮುಂದಿನ ಹಂತದಲ್ಲಿಯಾದರೂ ಕೂಡ ಸ್ವಾಗತಾರ್ಹ. ಹೇಗೆಂದರೆ, ಬಹುಸಂಖ್ಯಾತ ಸಮುದಾಯ ಪಾರಸೀ ಸಮುದಾಯಕ್ಕೆ ಸ್ಥಾನಗಳ ಮೀಸಲಾತಿ ನೀಡಿದಾಗ ನಾವು ಹೇಳಿದೆವು: "ಬೇಡ, ವಂದನೆಗಳು, ನಮಗೆ ಬೇಡ". ಹಾಗೆಯೇ ಎಲ್ಲ ವರ್ಗಗಳು, ಬಹುಸಂಖ್ಯಾತರ ಕೊಡುಗೆಯನ್ನು ವಿನಯಪೂರ್ವಕ ತಿರಸ್ಕರಿಸುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ.

**ಮೌಲಾನಾ ಹಸ್ರತ್ ಮೋಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಗೌರವಾನ್ವಿತ ಖಲೀಖುಜ್ಜಮಾನ್ ಮೀಸಲಾಧಾರಿತ ಬಯಸಿದರು. ಸೈಯದ್ ಕರೀಮುದ್ದೀನ್ ಅಲ್ಲ,

**ಶ್ರೀ ಆರ್.ಕೆ. ಸಿಧ್ವಾ** : ನಾನು ಗ್ರಹಿಸಲಿಲ್ಲ. ಆದುದರಿಂದ ಈ ಕೋಮು ವಿಷಯವನ್ನು ಈ ದೇಶದಿಂದ ತೆಗೆದುಹಾಕಬೇಕು ಮತ್ತು ಈ ಸಂವಿಧಾನವನ್ನು ಒಂದು ದಾಖಲೆಯಾಗಿ ಮಾಡಬೇಕು. ಈ ಬಗ್ಗೆ ನಾವು ಹೆಮ್ಮೆಪಡಬೇಕು ಮತ್ತು ಜಗತ್ತಿಗೆ ನಾವು ಈ ದಾಖಲೆ ಭಾರತೀಯ ಜನರು ಇತರರು ಉಪಕ್ರಮಿಸಲೆಂದು ಮಾಡಿದುದಾಗಿದೆ ಎಂದು ಹೇಳಲು ಸಮರ್ಥರಾಗಬೇಕು. ಈ ಮಾತುಗಳೊಂದಿಗೆ ಮಾನ್ಯರೆ, ನಾನು ಮುಗಿಸುತ್ತೇನೆ. ನಾನು ನಮೂದಿಸಿದ ಕೆಲವು ವಿಷಯಗಳನ್ನು ಸಮಯಬಂದಾಗ ಸದನವು ಮನಸ್ಸಿನಲ್ಲಿಟ್ಟು ನೆನಪಿನಲ್ಲಿಟ್ಟುಕೊಂಡಿರುತ್ತದೆ ಎಂದು ಆಶಿಸುತ್ತೇನೆ. ಮಾನ್ಯರೆ, ವಂದನೆಗಳು.

**ಶ್ರೀ ರಾಮ್ ಸಹಾಯ್** (ಗ್ವಾಲಿಯರ್-ಇಂದೂರ್ – ಇಂದೋರ್-ಮಾಳವ (ಮಧ್ಯಭಾರತ)

*[ಮಾನ್ಯ ಉಪಸಭಾಧ್ಯಕ್ಷರೆ, ಸಂವಿಧಾನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಮೇಲೆ ಹಲವು ಸದಸ್ಯರು ಬೆಳಕು ಚೆಲ್ಲಿದ್ದಾರೆ. ಆ ವಿಷಯಕ್ಕೆ ಪುನಃ ನಾನು ಹೋಗುವುದಿಲ್ಲ. ನಾನು ರಾಜ್ಯಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ರಾಜ್ಯಗಳ ಜನತೆ ಬಲಿಷ್ಠ ಕೇಂದ್ರದ ಪರವಿರುತ್ತಾರೆ ಮತ್ತು ಹೃತ್ಪೂರ್ವಕವಾಗಿ ಈ ರೀತಿಯಲ್ಲಿ ಬಲಿಷ್ಠ ಕೇಂದ್ರಗಳನ್ನು ಸ್ಥಾಪಿಸಲು ಬೆಂಬಲಿಸುತ್ತಾರೆ ಎಂದು ಸದನಕ್ಕೆ ಸ್ಪಷ್ಟಪಡಿಸಬಯಸುತ್ತೇನೆ. ಹೇಗೆ ಇರಲಿ, ಸಂವಿಧಾನ ನಿಮ್ಮ ಮುಂದೆ ಏನು ಪ್ರಸ್ತುತಪಡಿಸಿದೆಯೋ ಅದರಲ್ಲಿ ರಾಜ್ಯಗಳನ್ನು ಕುರಿತಂತೆ ಹೆಚ್ಚು ಚಿಂತನೆ ನಡೆಸಿಲ್ಲವೆಂದು ತೋರುತ್ತದೆ. ಒಂದು ಉದಾಹರಣೆಯಿಂದ ಈ ವಿಷಯವನ್ನು ವಿಶದಪಡಿಸಲು ನಾನು ಇಷ್ಟಪಡುತ್ತೇನೆ.

ಭಾಗ-೩ ಅನುಸೂಚಿ ೧ರಲ್ಲಿ ರಾಜ್ಯಗಳನ್ನು ಹಿಂದೆ ಅವು ಇದ್ದಂತೆ ನಿರ್ದಿಷ್ಟಪಡಿಸಲಾಗಿದೆ. ಅವು ಒಕ್ಕೂಟದಲ್ಲಿ ವಿಲೀನಗೊಂಡಿವೆ. ಮತ್ತು ಅವುಗಳಿಗೆ ಒಂದು ಪ್ರಾಂತ್ಯದ ಸ್ವರೂಪವನ್ನು ಕೊಡಲಾಗಿದೆ. ಇಲ್ಲಿ ಉದಾಹರಣೆಗೆ, ಮಧ್ಯಭಾರತ ಒಕ್ಕೂಟವನ್ನು ತೆಗೆದುಕೊಳ್ಳಬಹುದು. ಮಧ್ಯಭಾರತದ ರಾಜಪ್ರಮುಖರು ಜೂನ್ ೧೫ರಂದು ಹೊಸ ಸೇರ್ಪಡೆ ಲೇಖಕ್ಕೆ ಸಹಿ ಹಾಕಿದರು. ಇದರಿಂದ ೭ನೆಯ ಅನುಸೂಚಿಯ ೧ನೇ ಮತ್ತು ೩ನೇ ಪಟ್ಟಿಗಳಲ್ಲಿ ನಮೂದಿಸಿದ ಎಲ್ಲ ವಿಷಯಗಳನ್ನು (ತೆರಿಗೆಗಳು ಮತ್ತು ಸುಂಕಗಳು ಹೊರತುಪಡಿಸಿ) ಕೇಂದ್ರಕ್ಕೆ ಹಸ್ತಾಂತರಿಸಲಾಗಿದೆ. ನ್ಯಾಯಾಂಗವನ್ನು ಕೂಡಾ ಕೇಂದ್ರಕ್ಕೆ ಒಳಪಡಿಸಲಾಗಿದೆ. ಆದರೆ ಆಗ ಕೂಡ ಪ್ರಸ್ತುತ ಕರಡಿನ ೧೧೧ ಮತ್ತು ೧೧೩ ಪ್ರಕರಣಗಳಿದ್ದು ಅದರ ಉಚ್ಚನ್ಯಾಯಾಲಯದ ನಿರ್ಣಯಗಳ

ಮೇಲೆ ಸರ್ವೋಚ್ಚನ್ಯಾಯಾಲಯಕ್ಕೆ ಯಾವ ಮನವಿಯನ್ನೂ ಹಾಕುವ ಹಾಗಿಲ್ಲ. ಮಧ್ಯಭಾರತ ಒಕ್ಕೂಟ ಅದರ ಸೇರ್ಪಡೆಯ ಹೊಸ ಲೇಖನದಿಂದ ಅದರ ಎಲ್ಲ ಹಕ್ಕುಗಳನ್ನು ಕೇಂದ್ರಕ್ಕೆ ಒಪ್ಪಿಸಿದೆ ಹಾಗೂ ಅದರ ಎಲ್ಲ ಪ್ರಸ್ತಾವಗಳಿಗೆ ಒಪ್ಪುತ್ತದೆ. ಒಕ್ಕೂಟದ ಉಚ್ಚನ್ಯಾಯಾಲಯದ ನಿರ್ಣಯದ ವಿರುದ್ಧ ಸರ್ವೋಚ್ಚನ್ಯಾಯಾಲಯಕ್ಕೆ ಮಾಡಲಾಗುವ ಮನವಿಗಳನ್ನು ನಿಷೇಧಿಸುವ ಒಂದು ಉಪಬಂಧವನ್ನು ಏಕೆ ಮಾಡಲಾಗಿದೆ ಎಂಬುದು ನನಗೆ ತಿಳಿಯುತ್ತಿಲ್ಲ. ಭಾಗ ೧೧೩ ಸರ್ವೋಚ್ಚನ್ಯಾಯಾಲಯಕ್ಕೆ ಒಂದು ಉಲ್ಲೇಖ ಕಳುಹಿಸಬಹುದು ಎಂದು ಕೊಟ್ಟಿದೆ. ಆದರೆ ಉಚ್ಚನ್ಯಾಯಾಲಯದ ವಿರುದ್ಧ ಒಂದು ಮನವಿಯನ್ನೇಕೆ ಸರ್ವೋಚ್ಚನ್ಯಾಯಾಲಯದಲ್ಲಿ ಒಪ್ಪಲಾಗುವುದಿಲ್ಲ ಎಂದು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಇದು ವಿಶಿಷ್ಟವಾಗಿ ಜನರ ಹಕ್ಕುಗಳನ್ನು ಬಾಧಿಸುವ ಒಂದು ವಿಷಯವಾಗಿದೆ. ಅಂತಹ ಒಂದು ಉಪಬಂಧ ಜನರ ಹಕ್ಕುಗಳನ್ನು ರಕ್ಷಿಸಲು ಸಾಕಾಗಿತ್ತು ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಒಕ್ಕೂಟದ ಉಚ್ಚನ್ಯಾಯಾಲಯವನ್ನು ಪ್ರಾಂತೀಯ ಉಚ್ಚನ್ಯಾಯಾಲಯಗಳ ಸಾಲಿನಲ್ಲಿ ತರುವ ನಮ್ಮ ಪ್ರಯತ್ನಗಳು ಈ ಉಚ್ಚನ್ಯಾಯಾಲಯಗಳನ್ನು ಸರ್ವೋಚ್ಚನ್ಯಾಯಾಲಯಕ್ಕೆ ಅಧೀನ ಮಾಡುವುದಾದರೆ, ಅನುಕೂಲಕರವೂ ಯಶಸ್ಕರವೂ ಆಗುತ್ತದೆ. ಇದರಿಂದ ಒಕ್ಕೂಟವನ್ನು ಪ್ರಾಂತ್ಯಗಳ ಸಾಲಿನೊಂದಿಗೆ ತರುವ ಪ್ರಯತ್ನಗಳು ಕೂಡ ಗಣನೀಯವಾಗಿ ಫಲಿಸುತ್ತದೆ. ಅಲ್ಲಿ ಉಚ್ಚನ್ಯಾಯಾಲಯಗಳು ಸಾಕಷ್ಟು ಅಭಿವೃದ್ಧಿಯಾಗಿಲ್ಲ ಎಂದು ಹೇಳಬಹುದು. ಆದರೆ ಗ್ವಾಲಿಯರ್ ಮತ್ತು ಇಂದೂರು ಉಚ್ಚನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ತುಸು ಹೆಮ್ಮೆಯಿಂದ ಅವು ಯಾವ ವಿಧದಲ್ಲೂ ಪ್ರಾಂತ್ಯಗಳ ಉಚ್ಚನ್ಯಾಯಾಲಯಗಳಿಗೆ ಕೆಳದರ್ಜೆಯವೇನಲ್ಲ ಎಂದು ಹೇಳಬಹುದು; ಅವು ಕಡಿಮೆ ನಿಲುವುಳ್ಳವು ಎಂದೂ ಅಲ್ಲ. ಅವು ಕೂಡ ಪ್ರಾಂತ್ಯಗಳ ಉಚ್ಚನ್ಯಾಯಾಲಯಗಳು ಹೊಂದಿರುವಂತೆ ಸುಶಿಕ್ಷಿತ ನ್ಯಾಯಮೂರ್ತಿಗಳನ್ನು ಹೊಂದಿವೆ.

ಗೌರವಾನ್ವಿತ ಡಾ. ಅಂಬೇಡ್ಕರ್ ಸಂವಿಧಾನದ ರಚನಾಸಭೆಗಳು ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬರದೇ ಇರಬಹುದು ಎಂದು ಬಯಸುತ್ತಾರೆ. ಆದರೆ ಡಾ. ಅಂಬೇಡ್ಕರ್ ಈ ವಿಷಯವಾಗಿ ರಾಜ್ಯಗಳ ಸಚಿವಾಲಯದೊಂದಿಗೆ ತುಸು ಸಂಪರ್ಕದಲ್ಲಿದ್ದಿದ್ದರೆ ಮತ್ತು ಅದನ್ನು ಸಚಿವಾಲಯದ ಮುಂದೆ ಪ್ರಸ್ತಾವಿಸಿದ್ದರೆ ಈ ಜಟಿಲತೆಗಳು ಉದ್ಭವಿಸುತ್ತಲೇ ಇರಲಿಲ್ಲ. ಪ್ರಾಸಂಗಿಕವಾಗಿ ನಾನು ಮಧ್ಯಭಾರತದ ಸಂವಿಧಾನ ರಚನಾಸಭೆಯ ವಿಷಯವನ್ನು ಅವರ ಮುಂದಿಡುತ್ತೇನೆ. ಅಲ್ಲಿ ಒಂದು ಮಧ್ಯಾವಧಿ ಶಾಸನಸಭೆಯನ್ನು ರೂಪಿಸಲಾಗುತ್ತಿದೆ ಮತ್ತು ಒಂದು ಸಂವಿಧಾನ ರಚನಾಸಭೆಯನ್ನು ಕೂಡ ರೂಪಿಸಲಾಗುತ್ತದೆ. ಈ ಎರಡನ್ನೂ ಒಂದೇ ಸಮಯಕ್ಕೆ ರೂಪಿಸುವ ಆವಶ್ಯಕತೆ ಏನು? ಇನ್ನೂ ಮಧ್ಯಾವಧಿ ಶಾಸನಸಭೆಯ ಯಾವುದೇ ಅಧಿವೇಶನ ಗಮನದಲ್ಲಿಲ್ಲ ಮತ್ತು ಯಾವಾಗ ಸಂವಿಧಾನ ರಚನಾಸಭೆ ಕೆಲಸ ಆರಂಭವಾಗುತ್ತದೆ ಎಂದು ಕಾದು ನೋಡಬೇಕು. ಮಧ್ಯಕಾಲೀನ ಶಾಸನಸಭೆಯ ಸದಸ್ಯರು, ಸಂವಿಧಾನವನ್ನು ರೂಪಿಸುವ ಸಲುವಾಗಿ ಈ ಸಂವಿಧಾನ ರಚನಾಸಭೆಯಲ್ಲಿ ಇದ್ದಾರೆ. ಶಾಸನಸಭೆಯಲ್ಲಿ ಕಾನೂನುಗಳನ್ನು ಮಾಡಬಲ್ಲ ಮತ್ತು ಇಲ್ಲಿ ಸಂವಿಧಾನ ರೂಪಿಸಬಲ್ಲ ಈ ಜನ ಅಲ್ಲಿ ಏಕೆ ಸಂವಿಧಾನ ರೂಪಿಸಲಾಗುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಅಂತಹ ಜಟಿಲತೆಗಳು ಹುಟ್ಟಿಕೊಂಡಿವೆ. ಡಾ. ಅಂಬೇಡ್ಕರ್ ಈ ವಿಷಯದಲ್ಲಿ ಸರ್ದಾರ್ ಪಟೇಲರಲ್ಲಿ ಸಮಾಲೋಚಿಸಿದ್ದರೆ. ಹಲವು ಸಮಸ್ಯೆಗಳು ಸುಲಭವಾಗಿ ಬಗೆಹರಿಯುತ್ತಿದ್ದವು. ಬಹುತೇಕ ಎಲ್ಲ ರಾಜ್ಯಗಳು, ಪ್ರಾಂತ್ಯಗಳ ಆಕಾರ ತಳೆದಿರುವಾಗ ಸಂವಿಧಾನ ರೂಪಿಸುತ್ತಿರುವ ಸಂವಿಧಾನ ರಚನಾಸಭೆಯ ಯಾವ ಆವಶ್ಯಕತೆಯೂ ಈಗ ಉಳಿದಿಲ್ಲ.

೧ನೇ ಅನುಸೂಚಿ ೩ನೇ ಭಾಗವನ್ನು ಪರಿಷ್ಕರಿಸಬೇಕೆಂದು ಮತ್ತು ಒಕ್ಕೂಟಗಳು ಎಲ್ಲೆಲ್ಲಿ ರೂಪಿಸಲ್ಪಟ್ಟಿವೆಯೋ ಅವನ್ನು ಮೊದಲ ಭಾಗದಲ್ಲಿ ಸೇರಿಸಬೇಕು ಎಂದು ಸದನಕ್ಕೆ ನಿವೇದಿಸುತ್ತೇನೆ. ಅಂಥ ಒಂದು ಸೇರ್ಪಡೆ ರಾಜ್ಯಗಳನ್ನು ಪ್ರಾಂತ್ಯಗಳ ಮಟ್ಟಕ್ಕೆ ತರುವಲ್ಲಿ ಫಲಪ್ರದವಾಗುತ್ತವೆ. ಇರುವ ಒಂದೇ

ವ್ಯತ್ಯಾಸ ಎಂದರೆ ಪ್ರಾಂತ್ಯಗಳ ರಾಜ್ಯಪಾಲರನ್ನು ಸಾರ್ವಜನಿಕರು ಚುನಾಯಿಸುತ್ತಾರೆ. ರಾಜ್ಯಗಳ ರಾಜಪ್ರಮುಖರನ್ನು ರಾಜರು ಆಯ್ಕೆಮಾಡುತ್ತಾರೆ. ಶ್ರೀ ಸಂತಾನಮ್ ಮತ್ತು ಶ್ರೀ ಸಿಧ್ವಾ ಹೇಳಿದಂತೆ ಪ್ರಾಂತ್ಯಗಳು ಮತ್ತು ಒಕ್ಕೂಟಗಳನ್ನು ಒಂದೇ ನೆಲೆಗಟ್ಟಿನ ಮೇಲೆ ಇರಿಸುವುದು ತುಂಬ ಅನುಕೂಲಕರ ಮತ್ತು ನನ್ನ ಅಭಿಪ್ರಾಯದಲ್ಲಿ ಅಂತಹ ಒಂದು ಹೆಜ್ಜೆ ಆವಶ್ಯಕ. ಅಗತ್ಯ. ನಾವು ಈ ಎರಡೂ ಅನುಸೂಚಿಗಳ ಭಾಗಗಳನ್ನು ಪರಿಷ್ಕರಿಸಬೇಕು ಮತ್ತು ಒಕ್ಕೂಟಗಳನ್ನು ಈಗಾಗಲೇ ರೂಪಿಸಿರುವ ರಾಜ್ಯಗಳನ್ನು ಪ್ರಾಂತ್ಯಗಳ ಮಟ್ಟಕ್ಕೆ ತರುವಂತೆ ಅದನ್ನು ಪುನಃ ರಚಿಸಬೇಕು ಹಾಗೂ ಇದಕ್ಕೆ ತೊಡಕುಗಳೂ ಇರಬಾರದು.

ಆರ್ಥಿಕ ಉಪಬಂಧಗಳಿಗೆ ಸಂಬಂಧಿಸಿದಂತೆ ನೇಮಿಸಲಾದ ತಜ್ಞರ ಸಮಿತಿಯು ನಿರ್ಧರಿಸಿರುವುದು ಏನೆಂದರೆ ಹತ್ತು ವರ್ಷಗಳ ಅವಧಿಯಲ್ಲಿ ಎಲ್ಲ ರಾಜ್ಯಗಳನ್ನೂ ಕನಿಷ್ಠಪಕ್ಷ ಪ್ರಾಂತ್ಯಗಳ ಮಟ್ಟಕ್ಕೆ ತರಬೇಕು. ತಜ್ಞರ ಈ ಸಮಿತಿಯ ವರದಿಗೆ ಒಂದು ಪ್ರಾಯೋಗಿಕವಾದ ಆಕಾರವನ್ನು ಕೊಡಲು ಅನುಮತಿಸುವಂತಹ ಯಾವ ಸಂಗತಿಯೂ ನನಗೆ ಈ ಸಂವಿಧಾನದಲ್ಲಿ ಕಂಡುಬರಲಿಲ್ಲ. ಆದ್ದರಿಂದ ನಾನು ಕರಡು ರಚನಾ ಸಮಿತಿಗೆ ವಿನಂತಿಸುವುದೇನೆಂದರೆ ಒಕ್ಕೂಟ ರಚನೆಯಲ್ಲಿ ವಿಲೀನವಾದ ರಾಜ್ಯಗಳನ್ನು ಪ್ರಾಂತ್ಯಗಳ ಮಟ್ಟಕ್ಕೆ ತರಲು ಅಂತಹ ಯಾವುದಾದರೂ ಉಪಬಂಧಗಳನ್ನು ಒದಗಿಸಬೇಕು. ಮತ್ತು ಈ ವಿಚಾರವಾಗಿ ಯವ ತೊಂದರೆಗಳೂ ಉಳಿದಿರಕೂಡದು.

ಹೆಚ್ಚಿನ ಇನ್ನೊಂದು ವಿಷಯವನ್ನು ಸದನಕ್ಕೆ ನಿವೇದಿಸಲು ನಾನು ಇಷ್ಟಪಡುತ್ತೇನೆ. ಅದೆಂದರೆ ಮೈಸೂರು ಮತ್ತು ಟ್ರಾವಂಕೂರುಗಳಂಥ ದೊಡ್ಡ ರಾಜ್ಯಗಳು ಬಹುತೇಕ ಪ್ರಾಂತ್ಯಗಳಿಗಿಂತ ಒಂದು ಉತ್ತಮ ಸ್ಥಾನ ಬಯಸುತ್ತವೆ. ನಾನು ಈ ರಾಜ್ಯಗಳ ಆಡಳಿತಗಾರರು ಮತ್ತು ಪ್ರತಿನಿಧಿಗಳು ಈ ವಿಷಯದಲ್ಲಿ ತಮ್ಮ ಹಿತಾಸಕ್ತಿಯನ್ನು ಬಿಟ್ಟು ಇತರ ಪ್ರಾಂತ್ಯಗಳು ಅನುಭವಿಸುತ್ತಿರುವ ಸ್ಥಾನಮಾನವನ್ನೇ ಒಪ್ಪಿಕೊಳ್ಳಬೇಕು ಎಂದು ವಿನಂತಿಸುತ್ತೇನೆ. ರಾಜ್ಯಕ್ಕೆ ಅಗತ್ಯವಿಲ್ಲದ ತಮ್ಮೆಲ್ಲ ಸಂಪನ್ಮೂಲಗಳನ್ನು ಅಧಿಕಾರವನ್ನೂ ಕೇಂದ್ರಕ್ಕೆ ಹಸ್ತಾಂತರಿಸಬೇಕು. ಈ ರೀತಿಯಲ್ಲಿ ನಾವು ಒಂದು ಬಲಿಷ್ಠ ಕೇಂದ್ರ ಕಟ್ಟಲು ನೆರವಾಗಬಹುದು. ಇತರ ರಾಜ್ಯಗಳಂತೆ ಗ್ವಾಲಿಯರ್‌ನ ಪ್ರತ್ಯೇಕ ಅಸ್ತಿತ್ವವನ್ನು ಕಾಯ್ದುಕೊಳ್ಳಬಹುದಿತ್ತು ಎಂಬುದು ಯಾರಿಗಾದರೂ ತಿಳಿದ ವಿಷಯವೇ. ಆದರೆ ಆ ರಾಜ್ಯದ ಆಡಳಿತಗಾರ  ತಾನೇ ಈ ಆವಶ್ಯಕತೆಯನ್ನು ಗ್ರಹಿಸಿ ತನ್ನೆಲ್ಲ ಅಧಿಕಾರಗಳನ್ನು ಕೇಂದ್ರಕ್ಕೆ ಹಸ್ತಾಂತರಿಸಿದರು. ಈ ಸಂವಿಧಾನ ಪ್ರಾಂತ್ಯಗಳ ಜನತೆಗೆ ಇರುವಂತೆ ರಾಜ್ಯಗಳ ಜನರಿಗೂ ಇರಬೇಕು. ಆದುದರಿಂದ ಸದನಕ್ಕೆ, ವಿಶೇಷವಾಗಿ ಕರಡು ರಚನಾಸಮಿತಿಗೆ ನಾನು ನಿವೇದಿಸಿಕೊಳ್ಳಲು ಇಷ್ಟಪಡುವುದೆಂದರೆ, ಯಾವ ಒಕ್ಕೂಟಗಳು ಪ್ರಾಂತ್ಯಗಳ ರೂಪವನ್ನು ಪಡೆದಿವೆಯೋ ಮತ್ತು ದೊಡ್ಡ ರಾಜ್ಯಗಳು ಯಾವುದೇ ಒಕ್ಕೂಟದೊಳಕ್ಕೆ ವಿಲೀನವಾಗಿಲ್ಲವೋ, ಅಂತಹ ವಿಷಯದಲ್ಲಿ ಏಕರೂಪತೆ ಪಡೆಯಲು ಸಮರ್ಥವಾಗುವಂತೆ ಯಾವುದಾದರೂ ಅಂತಹ ಸಾಧನವನ್ನು ಅಳವಡಿಸಿಕೊಳ್ಳಬೇಕು ಎಂದೇ ಆಗಿದೆ.]*

**ಶ್ರೀ ಜೈನಾರಾಯಣ ವ್ಯಾಸ್** (ಜೋಧ್‌ಪುರ) : *[ಮಾನ್ಯ ಉಪಸಭಾಧ್ಯಕ್ಷರೆ, ಡಾ. ಅಂಬೇಡ್ಕರ್ ಅವರ ಸಹೋದ್ಯೋಗಿಗಳು ಹಾಗೂ ಬೆರಳಚ್ಚುಗಾರರು ಮತ್ತು ನಕಲು ಮಾಡುವವರನ್ನು ಕರಡು ಸಂವಿಧಾನ ತಯಾರಿಸುವಲ್ಲಿ ವ್ಯಯಿಸಿದ ಶ್ರಮಕ್ಕಾಗಿ ವಂದಿಸಬೇಕು. ಇದು ಒಂದು ತುಂಬ ದೊಡ್ಡ ಕರಡು ಮತ್ತು ಹಲವಾರು ವಿಷಯಗಳನ್ನು ಅದರಲ್ಲಿ ಸೇರಿಸಲಾಗಿದೆ. ಎಲ್ಲ ಕರಡುಗಳೊಂದಿಗೆ ಇದ್ದಂತೆ, ಈ ಕರಡಿನಲ್ಲಿ ಕೂಡ ಹಲವು ದೋಷಗಳಿವೆ. ವಿಶಿಷ್ಟವಾಗಿ, "ರಾಜ್ಯ" ಎಂಬ ಶಬ್ದದ ಉಪಯೋಗ. ಇದನ್ನು ಎಲ್ಲೂ ಲಕ್ಷಣ ನಿರೂಪಣೆ ಮಾಡಿಲ್ಲ. ಒಂದು ರೀತಿ ನಮಗೆಲ್ಲ ತುಂಬ ಗೊಂದಲವುಂಟುಮಾಡಿದೆ. ಪ್ರಾದೇಶಿಕ ಅಥವಾ ಪ್ರಾಂತೀಯ ದೃಷ್ಟಿಯಿಂದ ಒಂದು ರಾಜ್ಯ ಎಂದರೇನು ಎಂಬುದನ್ನು ಇಡಿಯಾಗಿ ಅಸ್ಪಷ್ಟವಾಗಿ ಬಿಡಲಾಗಿದೆ. ಅದರ ವ್ಯಾಖ್ಯೆಯನ್ನು ಯಾವುದೇ ಜಾಗದಲ್ಲಿ ಕೊಟ್ಟಿಲ್ಲ. ಪೌರತ್ವದ ಹಕ್ಕುಗಳ ದೃಷ್ಟಿಯಿಂದ ಕೂಡ ರಾಜ್ಯ ಎಂದರೇನು ಎಂಬುದನ್ನು ಗ್ರಹಿಸಲಾಗುತ್ತಿಲ್ಲ. ಮೂಲಭೂತ ಹಕ್ಕುಗಳ ಉದ್ದೇಶಗಳಿಗಾಗಿ

"ರಾಜ್ಯಗಳು" ಎಂಬ ಶಬ್ದವನ್ನು ರಾಜ್ಯಗಳ ಶಾಸನಸಭೆಗಳು, ಸ್ಥಳೀಯ ಸರ್ಕಾರಗಳು ಮತ್ತು ರಾಜ್ಯಗಳ ಸರ್ಕಾರ ಎಂಬರ್ಥದಲ್ಲಿ ಒಳಗೊಳ್ಳಲು ಉಪಯೋಗಿಸಲಾಗಿದೆ. "ರಾಜ್ಯ" ಶಬ್ದವನ್ನು ಸಾಮಾನ್ಯವಾಗಿ ಭಾರತೀಯ ರಾಜ್ಯಗಳಿಗಾಗಿ ಉಪಯೋಗಿಸಿದುದರಿಂದ, ಯಾವುದಾದರೂ ಇತರ ಶಬ್ದವನ್ನು ಅದಕ್ಕೆ ಸಂವಾದಿಯಾಗಿ ಉಪಯೋಗಿಸಿದ್ದಿದ್ದರೆ ಉತ್ತಮವಾಗಿರುತ್ತಿತ್ತು.

ರಾಜ್ಯಗಳನ್ನು ಕೂಡ ವಿಭಿನ್ನ ಪ್ರವರ್ಗಗಳಾಗಿ ವಿಭಾಗಿಸಲಾಗಿದೆ. ರಾಜ್ಯಪಾಲರುಗಳ ಪ್ರಾಂತ್ಯಗಳು ಇವೆ. ಮುಖ್ಯ ಆಯುಕ್ತರ ಪ್ರಾಂತ್ಯಗಳು ಇವೆ ಮತ್ತು ಮೂರನೆಯ ಪ್ರವರ್ಗವನ್ನು ಭಾರತೀಯ ರಾಜ್ಯಗಳು ಎಂದು ಕರೆಯಲಾಗಿದೆ. ಅವನ್ನು ಅನುಸೂಚಿ-೧ ಭಾಗ-೩ರಲ್ಲಿ ನಮೂದಿಸಲಾಗಿದೆ. ತಮ್ಮ ಭಾಷಣದ ಸಮಯದಲ್ಲಿ ಡಾ. ಅಂಬೇಡ್ಕರ್ ವ್ಯಕ್ತಪಡಿಸಿದ ಅಭಿಪ್ರಾಯವನ್ನು ನಾನು ಬೆಂಬಲಿಸುತ್ತೇನೆ. ಅವರು ರಾಜ್ಯಗಳು ಪ್ರಾಂತ್ಯಗಳಂತೆ ದೊಡ್ಡದಿರಬೇಕು ಮತ್ತು ಅವು ಪ್ರಾಂತ್ಯಗಳ ಸಾಲಿನಲ್ಲಿರಬೇಕು ಎಂದು ಹೇಳಿದರು. ಹಾಗೆ ನೋಡಿದರೆ, ನಾವು ರಾಜ್ಯಗಳಲ್ಲಿ ವಾಸಿಸುವ ಜನ, ಸಣ್ಣಪ್ರದೇಶಗಳಲ್ಲಿ ಉಳಿದು ನಮ್ಮ ಆರ್ಥಿಕತೆಗೆ ನ್ಯಾಯ ದೊರಕಿಸಲಾರೆವು ಇಲ್ಲವೇ ನಮ್ಮ ಆಡಳಿತವನ್ನು ಸರಿಯಾಗಿ ನಿರ್ವಹಿಸಲಾರೆವು. ಆದರೆ ಅದೇ ಕಾಲಕ್ಕೆ ನಾವು ಡಾ. ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳಿಗೆ ಹೇಳಬಯಸುವುದೇನೆಂದರೆ ಅವರು ಪ್ರಾಂತ್ಯಗಳ ಸಾಲಿನೊಂದಿಗೆ ನಮ್ಮನ್ನು ತರಲು ತುಸು ಉತ್ಸುಕತೆ ಕೂಡ ತೋರಬೇಕಿತ್ತು ಎಂದು ಅನುಸೂಚಿ-೧ ಭಾಗ-೩ರಲ್ಲಿ ಅವರು ನಮ್ಮನ್ನು ಸಣ್ಣ ಘಟಕಗಳಾಗಿ ವಿಭಾಗಿಸಿರುವರು. ಅಲ್ಲಿ ಸಹ ದೊಡ್ಡ ಘಟಕಗಳಾಗಿ ವರ್ಗೀಕರಿಸಬೇಕಿತ್ತು. ರಾಜ್ಯಗಳು ಅಂದರೆ ಸಂಸ್ಥಾನಗಳಿಗೆ ನ್ಯಾಯಾಲಯಕ್ಕೆ ಮನವಿ ಹೋಗುವುದಕ್ಕೆ ಒದಗಿಸಿರುವ ಅನುಚ್ಛೇದದಿಂದ ಸಂಯುಕ್ತ ನ್ಯಾಯಾಲಯಕ್ಕೆ ಮನವಿಯ ಹಕ್ಕನ್ನು ಕೊಡಲಾಗಿಲ್ಲ. ಕೇವಲ ಪ್ರಾಂತ್ಯಗಳು ಮನವಿಯ ಹಕ್ಕನ್ನು ತಾವೆ ಪಡೆದುಕೊಳ್ಳಬಹುದು. ಸಂಯುಕ್ತ ನ್ಯಾಯಾಲಯಕ್ಕೆ ಮನವಿಗಳ ವಿಷಯದಲ್ಲಿ ನಮ್ಮನ್ನು ಹರಿಜನರಂತೆ ಏಕೆ ಕಾಣುತ್ತೀರಿ. ಒಕ್ಕೂಟ ನ್ಯಾಯಾಲಯಕ್ಕೆ ಮನವಿಯ ವಿಷಯದಲ್ಲಿ ರಾಜ್ಯಗಳ ಜನರನ್ನು ಹರಿಜನರಂತೆ ಕಾಣುವ ರೀತಿ, ನೋಡುವ ನೀತಿಯು ನೀವು ದೊಡ್ಡ ಘಟಕಗಳನ್ನು ರೂಪಿಸುವ ಬಗ್ಗೆ ಯೋಚಿಸಿಲ್ಲ ಕೂಡ ಎಂದು ತೋರಿಸುತ್ತದೆ. ಪ್ರತಿಯಾಗಿ ನೀವು ಕೆಲವು – ಮೀಸಲಾತಿಗಳನ್ನು ಇಟ್ಟುಕೊಂಡಿರುವಿರಿ. ನಾವು ದೊಡ್ಡ ರಾಜ್ಯಗಳನ್ನು ರೂಪಿಸಬೇಕು ಎಂದು ಹೇಳುವಿರಿ. ಹೌದಾದರೆ ಆಗ ನಮಗೆ ನಮ್ಮ ಹಕ್ಕುಗಳನ್ನು ಕೊಡುವುದು ನಿಮ್ಮ ಕರ್ತವ್ಯವಾಗುತ್ತದೆ. ಶ್ರೀ ಸಿಧ್ವಾ ಅವರು ಈಗ ತಾನೆ ನಾವು ದೊಡ್ಡ ಪ್ರಾಂತ್ಯಗಳೊಂದಿಗೆ ಸಮಾನವಾಗಿ ಬರಬೇಕು ಎಂದು ಹೇಳಿದರು. ಅವುಗಳೊಂದಿಗೆ ಸಮಾನರಾಗಿ ಬರಲು ಯಾರು ತಾನೆ ಬಯಸುವುದಿಲ್ಲ ಎಂದು ನಾನು ಕೇಳುತ್ತೇನೆ. ಆದರೆ, ನೀವು ಸಂಸ್ಥಾನಗಳ ರಾಜರು ಮತ್ತು ಪ್ರಾಂತ್ಯಗಳ ಜನ ರಾಜ್ಯಪಾಲರುಗಳಾಗಿರಬಹುದು ಎಂದು ಹೇಳುತ್ತೀರಿ. ನೀವು ಈ ಅವಕಾಶವನ್ನು ರಾಜ್ಯಗಳ ಜನರಿಗೇಕೆ ಕೊಡುವುದಿಲ್ಲ? ನೀವು ನಿಜವಾಗಿ ರಾಜ್ಯಗಳು ಮತ್ತು ರಾಜ್ಯಪಾಲರ ಪ್ರಾಂತ್ಯಗಳು, ಎರಡು ವಿಭಿನ್ನ ಪ್ರವರ್ಗಗಳು ಎಂದು ಅರ್ಥೈಸಿದರೆ ಅದನ್ನು ಸ್ಪಷ್ಟವಾಗಿ ಹೇಳಬೇಕು. ಅಂದರೆ ನೀವು ಈ ಮೀಸಲಾತಿ ರಾಜ್ಯಗಳ ಜನರಿಗೆ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಬೇಕು. ಈ ವಿಷಯಗಳಲ್ಲಿ ನೀವು ಮರೆಮಾಚಬಾರದು. ಒಂದೆಡೆ ರಾಜ್ಯಗಳನ್ನು ರಾಜ್ಯಪಾಲರ ಪ್ರಾಂತ್ಯಗಳೊಂದಿಗೆ ಸಮಾನವಾಗಿ ತರಬೇಕು ಎಂದು ಹೇಳಿದ್ದರೆ ಇನ್ನೊಂದೆಡೆ ಸಂಸ್ಥಾನಗಳ ರಾಜಕುಮಾರರನ್ನು ರಾಜ್ಯಪಾಲರಾಗಿ ನೇಮಕಮಾಡಬಹುದಾದರೂ ರಾಜ್ಯಗಳ ಜನರು ರಾಜ್ಯಪಾಲರಾಗಲು ಅರ್ಹರಲ್ಲ ಎಂದು ಹೇಳಲಾಗಿದೆ. ಈ ಭೇದವನ್ನು ನಾನು ಮೆಚ್ಚುವುದಿಲ್ಲ. ಈ ಸಂವಿಧಾನದಲ್ಲಿ ಇದೊಂದು ದೋಷವೆಂದು ನಾನು ತಿಳಿಯುತ್ತೇನೆ ಮತ್ತು ಇದನ್ನು ತೆಗೆಯಬೇಕು.

ಇನ್ನೊಂದು ಅವಲೋಕನ ನಾನು ಮಾಡಲಿಚ್ಛಿಸುವುದು ಪ್ರಾಂತ್ಯಗಳ ಪ್ರದೇಶಗಳಿಗೆ ಸಂಬಂಧಿಸಿದೆ. ಈ ಸಂವಿಧಾನದಲ್ಲಿ ಪ್ರಾಂತ್ಯಗಳ ಕೆಲವು ಪ್ರದೇಶಗಳನ್ನು ಅವುಗಳಿಂದ ಪ್ರತ್ಯೇಕಿಸಬಹುದು ಮತ್ತು ಇತರೆ

ಪ್ರದೇಶಗಳಿಗೆ ಸೇರಿಸಬಹುದು ಎಂದೂ, ಎರಡು ಅಥವಾ ಹೆಚ್ಚು ಪ್ರದೇಶಗಳನ್ನು ಒಂದು ಪ್ರಾಂತ್ಯವಾಗಿ ರೂಪಿಸಲು ಒಟ್ಟುಗೂಡಿಸಬಹುದು ಎಂದು ಉಪಬಂಧಿಸಲಾಗಿದೆ. ಅಂತಹ ಪ್ರಾಂತ್ಯಗಳನ್ನು ರೂಪಿಸುವುದಕ್ಕೆ ನಿಬಂಧನೆ ಎಂದರೆ, ರಾಜ್ಯದ ಶಾಸನಸಭೆ ಅಥವಾ ಅದರ ಸದಸ್ಯರು ಅಥವಾ ಬಹುಸಂಖ್ಯಾತ ಸದಸ್ಯರು ತಾವು ನಮಗಾಗಿ ಪ್ರತ್ಯೇಕ ಪ್ರಾಂತ್ಯವೊಂದನ್ನು ರೂಪಿಸಬಯಸಿರುವುದಾಗಿ ರಾಷ್ಟ್ರಪತಿಗೆ ಮನವಿ ಸಲ್ಲಿಸಬೇಕು. ಆದರೆ ಈ ವಿಷಯದಲ್ಲಿ ಕೂಡ ರಾಜ್ಯಗಳ ಜನರ ವಿರುದ್ಧ ಒಂದು ಮೀಸಲಾತಿಯನ್ನು ನಿಗದಿಪಡಿಸಿದ್ದು ಅದನ್ನು ಅನುಸೂಚಿ-೧ ಭಾಗ-೩ರಲ್ಲಿ ನಮೂದಿಸಲಾಗಿದೆ. ಒಂದು ಪ್ರಸ್ತಾವವನ್ನು ತಮ್ಮ ಶಾಸನಸಭೆಗಳು ಅಥವಾ ತಮ್ಮ ಶಾಸನಸಭೆಗಳ ಸದಸ್ಯರ ಮೂಲಕ ಸಲ್ಲಿಸಿ ಒಂದು ದೊಡ್ಡ ಘಟಕ ರೂಪಿಸಲು ರಾಜ್ಯಗಳಿಗೆ ಅನುಮತಿ ಇಲ್ಲ. ಅದಕ್ಕೆ ರಾಜ್ಯದ ಸಮ್ಮತಿ ಆವಶ್ಯಕ. "ರಾಜ್ಯದ ಸಮ್ಮತಿ" ಎಂದರೇನೆಂದು ನನಗೆ ಅರ್ಥವಾಗಿಲ್ಲ. ರಾಜ್ಯದ ಶಾಸನಸಭೆ ಒಪ್ಪಿದರೆ, ಅದರ ಸದಸ್ಯರು ಒಪ್ಪಿದರೆ ಅದು ರಾಜ್ಯದ ಸಮ್ಮತಿ ಎಂದು ಅರ್ಥೈಸಬೇಕಾಗುತ್ತೆ. ಆದರೆ ಬಹುಶಃ "ರಾಜ್ಯದ ಸಮ್ಮತಿ" ಎಂದರೆ "ಆಡಳಿತಗಾರನ ಸಮ್ಮತಿ" ಇರಬೇಕು. ಹಾಗಿಲ್ಲದಿದ್ದರೆ, ಪ್ರಜಾಭಿಮತವನ್ನು ಪಡೆಯಬೇಕು ಅಥವಾ ಇನ್ನು ಯಾವುದಾದರೂ ವ್ಯವಸ್ಥೆಯಿಂದ ಗೊತ್ತುಪಡಿಸಲಾಗುತ್ತದೆ ರಾಜ್ಯದ ಸಮ್ಮತಿ ಎಂದರೆ ಆಡಳಿತಗಾರನ ಸಮ್ಮತಿಯಲ್ಲಿ ಎಂದಾದರೆ ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ಆದುದರಿಂದ, ರಾಜ್ಯಗಳಿಗೆ ಸಂಬಂಧಿಸಿದಂತೆ ಸಂವಿಧಾನ ಪೂರ್ಣ ಸ್ಪಷ್ಟವಿಲ್ಲ ಎಂದು ನಾನು ಭಾವಿಸುತ್ತೇನೆ. ಈ ಸಂವಿಧಾನದ ಬಗೆಗೆ ಇನ್ನೊಂದೆರಡು ಅಂಶಗಳನ್ನು ಪ್ರಸ್ತಾವಿಸಲು ನಾನು ಬಯಸುತ್ತೇನೆ. ಎಲ್ಲ ವರ್ಗಗಳ ಜನರಿಗೆ ಸಮಾನ ಹಕ್ಕು ಕೊಟ್ಟಿರುವುದನ್ನು ನಾನು ಮೆಚ್ಚುತ್ತೇನೆ. ಆದರೆ ಉದ್ದೇಶಪೂರ್ವಕವಾಗಿಯೋ ಅಥವಾ ಇನ್ನಾವ ರೀತಿಯೋ ಎಂದು ನಾನು ಹೇಳಲಾರೆ. ಧರ್ಮಶಾಲೆಗಳು ಮತ್ತು ಬಾವಿಗಳಿಗೆ ಪ್ರವೇಶಾಧಿಕಾರವನ್ನು ಹರಿಜನರಿಗೆ ಕೊಟ್ಟಂತೆ ದೇವಾಲಯಗಳನ್ನು ಪ್ರವೇಶಿಸುವ ಹಕ್ಕು ಕೊಟ್ಟಿಲ್ಲ. ಹರಿಜನರಿಗೆ ಬಾವಿಗಳಿಗೆ, ಧರ್ಮಶಾಲಾಗಳು ಮೊದಲಾದವುಗಳಿಗೆ ಪ್ರವೇಶದ ಹಕ್ಕು ಕೊಟ್ಟಿರುವಲ್ಲಿ ಅವರಿಗೆ ದೇವಸ್ಥಾನಗಳಿಗೆ ಪ್ರವೇಶಿಸುವ ಹಕ್ಕು ಕೊಡದಿರುವುದು. ಡಾ.ಅಂಬೇಡ್ಕರರ ಗಮನಕ್ಕೆ ಬಂದಿರುವ ಬಗ್ಗೆ ನಾನೇನು ಹೇಳಲಾರೆ. ಇದೊಂದು ತಪ್ಪು ಅಥವಾ ಲೋಪ ಎಂದು ನಾನು ತಿಳಿದಿದ್ದೇನೆ. ಲೋಪವಾಗಿದ್ದಲ್ಲಿ ಅದನ್ನು ಒದಗಿಸಬೇಕು.

ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ಎಂಬುದರ ನಡುವೆ ಭೇದ ತರುವ ಅಗತ್ಯವಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಹಾಗೂ ಪೌರರನ್ನು ಸಾಮಾನ್ಯ ಅರ್ಥದಲ್ಲಿ ಪೌರರು ಎಂದು ಪರಿಗಣಿಸಲಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಅಲ್ಪಸಂಖ್ಯಾತರು ಯಾವುದೇ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಿದರೆ, ರಾಜ್ಯ ಅವುಗಳಿಗೆ ನೆರವು ನೀಡಲು ಸಮರ್ಥವಿರಬೇಕು ಎಂಬುದನ್ನು ಒಪ್ಪಲಾಗಿದೆ. ಅಂದರೆ ಈ ಕರಡಿನಡಿ ಹಾಲಿ ಕೋಮುವಾರು ಶಾಲೆಗಳು ಮತ್ತು ಶೈಕ್ಷಣಿಕ ಶಾಲೆಗಳನ್ನು ನಡೆಸಲು ಇನ್ನೂ ಸಾಧ್ಯ. ಅಂತಹ ಒಂದು ಸಾಧ್ಯತೆಗೆ ಅವಕಾಶ ನೀಡುವುದು ಸರಿ ಎಂದು ನಾನು ತಿಳಿದಿಲ್ಲ. ಅದೂ ನಾವು ಸ್ವತಂತ್ರರಿದ್ದು ಅಲ್ಪಸಂಖ್ಯಾತ ಸಮುದಾಯಗಳು ಮತ್ತು ಬಹುಸಂಖ್ಯಾತ ಸಮುದಾಯದ ಜನ ಸೋದರರಂತೆ ಜೀವಿಸಬೇಕಿರುವಾಗ ಅಂತಹ ಸಂಸ್ಥೆಗಳಿಗೆ ಸಹಾಯಾನುದಾನಗಳು ಇರುವ ವ್ಯವಸ್ಥೆ ಅಂತಹ ಒಂದು ಭೇದಭಾವಕ್ಕೆ ಎಡೆಕೊಡುತ್ತದೆಯಷ್ಟೆ.

ನಾನು ಇನ್ನೂ ಒಂದು ಅಂಶವನ್ನು ಪ್ರಸ್ತಾವಿಸಬೇಕಿದ್ದು ಅದು ಭಾಷೆಯನ್ನು ಕುರಿತದ್ದಾಗಿದೆ. ನಮ್ಮ ಹಲವು ಸೋದರರು ಅದರ ಬಗ್ಗೆ ಮಾತನಾಡಿದ್ದಾರೆ. ಒಬ್ಬ ಗೌರವಾನ್ವಿತ ಸದಸ್ಯರು ಇಲ್ಲಿ ಹಿಂದಿ ಸಾಮ್ರಾಜ್ಯಶಾಹಿ ಸ್ಥಾಪಿಸಲಾಗುತ್ತಿದೆ ಎಂದು ಟೀಕಿಸುವ ಮಟ್ಟಕ್ಕೆ ಹೋಗಿದ್ದರು. ಇನ್ನೋರ್ವ ಗೌರವಾನ್ವಿತ ಸದಸ್ಯರು ಇಲ್ಲಿ ಭಾಷಾವಾರು ದುರಭಿಮಾನ ಪ್ರೇರೇಪಿಸಲಾಗುತ್ತಿದೆ ಎಂದು ಹೇಳಿದರು. ನಾವು ನಮ್ಮದೇ ರಾಷ್ಟ್ರಭಾಷೆ ಹೊಂದಿರಬೇಕು ಎಂದು ಹೇಳುವಾಗ ಹಿಂದಿ ಸಾರ್ವಭೌಮತ್ವ ಅಥವಾ ಭಾಷಾವಾರು ದುರಭಿಮಾನದ ಪ್ರಶ್ನೆ ಇಲ್ಲಿ ಇಲ್ಲವೇ ಇಲ್ಲ ಎಂದು ನಾನು ಹೇಳಲು ಬಯಸುತ್ತೇನೆ. ನಾವು ಇಂಗ್ಲಿಷ್ ಬಗ್ಗೆ ಮಾಡಬಹುದಾದರೆ ನಾವು ಹಿಂದಿ ಏಕೆ ಅಳವಡಿಸಿಕೊಳ್ಳಬಾರದು ಎಂದು ನನಗೆ ಅರ್ಥವಾಗುತ್ತಿಲ್ಲ ನೀವು ಹಿಂದಿಯನ್ನು

ಇಟ್ಟುಕೊಳ್ಳಲು ಬಯಸದಿದ್ದರೆ ಧೈರ್ಯವಹಿಸಿ ಇಂಗ್ಲಿಷ್ ನಮ್ಮ ರಾಷ್ಟ್ರಭಾಷೆ ಎಂದು ಹೇಳಿ. ಆದರೆ ನೀವು ಹೇಳುವುದಿಲ್ಲ. ಇಂಗ್ಲಿಷಿನ ನಮ್ಮ ರಾಷ್ಟ್ರಭಾಷೆ ಅಲ್ಲದಿರುವಾಗ ಇನ್ನೊಂದು ಭಾಷೆಯು ರಾಷ್ಟ್ರಭಾಷೆಯಾಗಿರಲು ಅವಕಾಶ ನೀಡಬಾರದು ಎನ್ನುವುದು ಸರಿಯಲ್ಲ. ನಾನು ಹಿಂದಿಯನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ ಎಂದು ಯಾರು ಹೇಳುವರೋ ಅವರ ಬಗ್ಗೆ ಸಹಾನುಭೂತಿ ತೋರುತ್ತೇನೆ. ಅವರು ತಮ್ಮ ಸಮುದಾಯದ್ದೇ ಒಂದು ರಾಷ್ಟ್ರಭಾಷೆಯನ್ನು ಘೋಷಿಸಲು ಇಲ್ಲವೆ ರೂಪಿಸಲು ಪ್ರಯತ್ನಿಸಬೇಕು ಎಂದು ನಾನು ಹೇಳುತ್ತೇನೆ. ಎಲ್ಲ ಜನರೂ ಒಂದೇ ಭಾಷೆ ಮಾತನಾಡಬೇಕೆಂದು ನಾವು ಹೇಳುವುದಿಲ್ಲ. ಅವರು ಹಾಗೆ ಮಾತನಾಡಲಾಗದವರೆಗೂ ಇಂಗ್ಲಿಷ್ ಮಾತನಾಡಬಹುದು. ಯಾರೂ ಅವರನ್ನು ತಡೆಯುವುದಿಲ್ಲ. ನನ್ನ ಭಾಷೆ ರಾಜಾಸ್ಥಾನಿಯಾಗಿದ್ದರೂ ಅದು ಹಿಂದಿಗಿಂತ ಭಿನ್ನವಾಗಿದ್ದರೂ ನಾನು ಹಿಂದಿಯಲ್ಲಿ ಮಾತನಾಡುತ್ತೇನೆ ಮತ್ತು ಹಿಂದಿಯಲ್ಲಿ ಇಲ್ಲದಿರುವ ಕೆಲವು ವಿಶೇಷತೆಗಳನ್ನು ನನ್ನ ಭಾಷೆ ಹೊಂದಿದೆ. ಅದೇ ಕಾಲಕ್ಕೆ ಬಹುಸಂಖ್ಯೆಯಲ್ಲಿ ಜನ ಹಿಂದಿ ಮಾತನಾಡಬಲ್ಲರು ಮತ್ತು ಹಿಂದಿ ಕಲಿಯಬಲ್ಲರು ಎಂದು ನಾನು ಬಲ್ಲೆ. ಆದುದರಿಂದ ನಾವು ಒಂದು ರಾಷ್ಟ್ರಭಾಷೆ ಅಳವಡಿಸಬೇಕು. ಯಾರು ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿರುವರೋ, ಅವರು ಆ ಭಾಷೆಯ ಶ್ರೇಷ್ಠತೆ ಸ್ಥಾಪಿಸಲು ಇಚ್ಛಿಸುವರೆಂದು ಅವರ ಬಗ್ಗೆ ಯಾವ ತಪ್ಪು ತಿಳಿವಳಿಕೆ ಇರಲಾರದೆಂದು ಎಂದುಕೊಳ್ಳುತ್ತೇನೆ. ಅವರು ನಮ್ಮ ದೇಶದ ಹಿತಾಸಕ್ತಿಯಿಂದ ಒಂದು ರಾಷ್ಟ್ರಭಾಷೆಯನ್ನು ಬಯಸುತ್ತಾರಷ್ಟೆ. ಹಾಗೆಂದ ಮಾತ್ರಕ್ಕೆ ಪ್ರಾಂತೀಯ ಭಾಷೆಗಳನ್ನು ಯಾವುದೆ ನಿಷೇಧದಡಿ ತರಲಾಗುತ್ತದೆ ಅಥವಾ ಇಂಗ್ಲಿಷ್ ಅದು ಗಳಿಸಿರುವ ಸ್ಥಾನದಿಂದ ತಬ್ಬಲಿಯಾಗುತ್ತವೆ ಎಂದು ಅರ್ಥವಲ್ಲ. ಇಂಗ್ಲಿಷ್ ದೀರ್ಘಕಾಲದಲ್ಲಿ ಇಲ್ಲದಿರಬಹುದು.

ಈ ಮಾತುಗಳೊಂದಿಗೆ ನಾನು ಡಾ. ಅಂಬೇಡ್ಕರ್ ಅವರಿಂದ ನಮ್ಮ ಮುಂದೆ ಮಂಡಿಸಲಾದ ಕರಡು ಸಂವಿಧಾನವನ್ನು ಬೆಂಬಲಿಸುತ್ತೇನೆ ಮತ್ತು ಸಲಹೆ ಮಾಡಿದ ಬದಲಾವಣೆಗಳನ್ನು ಸೇರಿಸಲು ಅವರು ಯತ್ನಿಸಲೆಂದು ನಾನು ಆಶಿಸುತ್ತೇನೆ.]*

**ಶ್ರೀ ಬಿ.ಎ. ಮಂಡ್ಲೋಯಿ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಕರಡು ರಚನಾಸಮಿತಿಯ ಅಧ್ಯಕ್ಷ ಡಾ. ಅಂಬೇಡ್ಕರ್ ತುಂಬ ಸರಳವಾದ ಭಾಷಣದಲ್ಲಿ ಕರಡು ಸಂವಿಧಾನದ ಪ್ರಮುಖ ಅಂಶಗಳನ್ನು ವಿವರಿಸಿದರು. ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದರು. ಸರ್ಕಾರ ಯಾವ ನಮೂನೆಯಲ್ಲಿರುತ್ತದೆ. ದೇಶದ ಸಂವಿಧಾನ ಯಾವುದು ಇತ್ಯಾದಿ. ನಮ್ಮದು ಸಂಯುಕ್ತ ಸರ್ಕಾರ. ಅದರೆ ಕೇಂದ್ರ ಬಲಿಷ್ಠ ಸಂಸದೀಯ ಸ್ವರೂಪದ ವ್ಯವಸ್ಥೆಯಲ್ಲಿ ಏಕರೂಪಿ ನ್ಯಾಯಾಂಗ; ಅಂತೆಯೇ ಕಾನೂನುಗಳು ಸಹ ಏಕರೂಪಿಯಾಗಿರುತ್ತವೆ ಎಂದು ತಿಳಿಸಿದರು. ಅವರು ಸ್ಥಿರತೆಗಿಂತ ಜವಾಬ್ದಾರಿಯ ಮೇಲೆ ಒತ್ತು ಕೊಡಲಾಗಿದೆ ಎಂದು ಹೇಳಿದರು. ಇದು ಶಾಂತಿಸಮಯ ಹಾಗೂ ಯುದ್ಧಕಾಲದಲ್ಲೂ ಸಾಕಷ್ಟು ಬಲಿಷ್ಠ. ಅವರು ತಮ್ಮ ಭಾಷಣದಲ್ಲಿ ಕರಡು ಸಂವಿಧಾನದ ವಿರುದ್ಧ ಮಂಡಿಸಿದ್ದ ಹಲವು ಟೀಕೆಗಳಿಗೆ ಉತ್ತರಿಸಿದರು. ನಾನು ಅವರ ಭಾಷಣವನ್ನು ಕರಡು ಸಂವಿಧಾನದ ಸರಳ ಶೈಲಿಯ ನಿರೂಪಣೆ ಎಂದು ಕರೆಯುತ್ತೇನೆ. ಕರಡುಸಮಿತಿಯು ರಚಿಸಿದ ಕರಡು ಸಂವಿಧಾನವು ಒಕ್ಕೂಟ ಅಧಿಕಾರಸಮಿತಿ, ಪ್ರಾಂತೀಯಸಮಿತಿ, ಸಲಹಾಸಮಿತಿ ಮತ್ತು ಅಲ್ಪಸಂಖ್ಯಾತಸಮಿತಿ ಈ ಹಲವಾರು ಸಮಿತಿಗಳ ವಿನ್ಯಾಸಗಳನ್ನೊಳಗೊಂಡಿದೆ. ಸಂವಿಧಾನ ರಚನಾಸಮಿತಿ ತನ್ನ ಮೊದಲ ಅಧಿವೇಶನದಲ್ಲಿ ನಮ್ಮ ಸಂವಿಧಾನದ ಉದ್ದೇಶ ಕುರಿತಂತೆ ಒಂದು ನಿರ್ಣಯ ಅಂಗೀಕರಿಸಿತು. ಆ ನಿರ್ಣಯವನ್ನು ನಮ್ಮ ಗೌರವಾನ್ವಿತ ನಾಯಕರಾದ ಪಂಡಿತ ಜವಾಹರಲಾಲ್ ನೆಹರು ಮಂಡಿಸಿದರು ಮತ್ತು ಅದು ಸರ್ವಾನುಮತದಿಂದ ಅಂಗೀಕಾರವಾಯಿತು. ನಮ್ಮ ಸಂವಿಧಾನವು ಆ ಮೂಲ ನಿರ್ಣಯ ಹಾಗೂ ಉದ್ದೇಶಗಳನ್ನು ಆಧರಿಸಿದೆಯೇ ಎಂಬುದನ್ನು ನಾವು ನೋಡಬೇಕು. ಅದರಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳಿಗೆ ಹಕ್ಕುಗಳನ್ನು ದಯಪಾಲಿಸಲಾಗಿದೆ. ಕರಡು ಸಂವಿಧಾನ, ಉದ್ದೇಶಗಳ,

ನಿರ್ಣಯದ ನೈಜ ಪ್ರತಿಬಿಂಬ ಎಂದು ನಾನು ತಿಳಿದಿದ್ದೇನೆ ಆದುದರಿಂದ ಅದು ನಮ್ಮ ಉದ್ದೇಶ ಪೂರೈಸಿದೆ ಎಂದು ನಾವು ಹೇಳಬಹುದು.

ಇಲ್ಲಿ ಇನ್ನೊಂದು ಕಾಂತಶಿಲೆ ಇದೆ. ಅದರಿಂದ ಕರಡು ಸಂವಿಧಾನ ನಮ್ಮ ದೇಶ ಮತ್ತು ನಮ್ಮ ರಾಷ್ಟ್ರದ ಉದ್ದೇಶವನ್ನು ಈಡೇರಿಸುತ್ತಿದೆಯೇ ಉತ್ತರಿಸುತ್ತಿದೆಯೇ ಎಂದು ನೋಡಬೇಕು. ಆ ಕಾಂತಶಿಲೆ ನಮ್ಮ ಸ್ವಾತಂತ್ರ್ಯ, ನಮ್ಮ ಪ್ರಜಾಸತ್ತಾತ್ಮಕ ಜಾತ್ಯತೀತ ಸರ್ಕಾರವನ್ನು ಕಾಯ್ದುಕೊಳ್ಳುತ್ತದೆಯೇ ಎಂದು ನೋಡಬೇಕು. ಆ ದೃಷ್ಟಿಯಿಂದ ನೋಡಿದಾಗಲೂ ಈ ಕರಡು ಸಂವಿಧಾನ ನಮ್ಮ ಉದ್ದೇಶ ಪೂರೈಸುತ್ತದೆ.

ಹೇಗೇ ಇರಲಿ, ಕರಡು ಸಂವಿಧಾನದಲ್ಲಿ ಕಾಣಲಾಗದ ಕೆಲವು ಲೋಪಗಳು ಮತ್ತು ಕೆಲವು ವಿಷಯಗಳು ಇವೆ ಮತ್ತು ಆ ವಿಷಯಗಳ ಬಗ್ಗೆ ಸೂಕ್ತ ಒತ್ತು ಕೊಡಲಾಗಿಲ್ಲ. ಲೋಪಗಳು ನಮ್ಮ ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಕುರಿತಾಗಿದೆ. ಒಂದು ಕರಡು ಸಂವಿಧಾನದಲ್ಲಿ ಮತ್ತು ನಮ್ಮ ದೇಶವನ್ನು ಆಳಲಿರುವ ಸಂವಿಧಾನವೊಂದರಲ್ಲಿ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಸೂಕ್ತ ಸ್ಥಾನವಿರಬೇಕು. ಒಂದು ಸಾಮಾನ್ಯ ಭಾಷೆ ಮತ್ತು ಒಂದು ಸಾಮಾನ್ಯ ಲಿಪಿಗೂ ಆವಶ್ಯಕತೆ ಇದೆ. ಇದರ ಬಗ್ಗೆ ನಾವು ಖಚಿತವಿರಬೇಕು. ಏಕೆಂದರೆ ನಮ್ಮ ಗುರಿ ಏನಿದ್ದರೂ ಒಂದು ರಾಷ್ಟ್ರ ಮತ್ತು ಒಂದು ದೇಶವಾಗಿದೆ. ಒಂದು ಸಾಮಾನ್ಯ ಭಾಷೆಯ ಗೈರಿನಲ್ಲಿ ನಾವು ಒಂದು ರಾಷ್ಟ್ರ ಮತ್ತು ಒಂದು ದೇಶವಾಗಿರಲು ಸಾಧ್ಯವಿಲ್ಲ. ನಮ್ಮ ದೇಶದಲ್ಲಿರುವ ಹಲವು ಭಾಷೆಗಳನ್ನು ಪರಿಗಣಿಸಿದಲ್ಲಿ, ಯಾರೇ ಆಗಲಿ ಯಾವುದೇ ವಿವಾದವಿಲ್ಲದೆ ಗೌರವದ ಸ್ಥಾನ ಹಿಂದಿಗೆ ಕೊಡಬೇಕು ಮತ್ತು ಲಿಪಿ ದೇವನಾಗರಿ ಲಿಪಿ ಇರಬೇಕು ಎಂದು ಹೇಳುವರು. ನಾವು ಆದಷ್ಟೂ ಬೇಗ ಇಂಗ್ಲಿಷ್‌ಭಾಷೆಗೆ ವಿದಾಯ ಹೇಳಬೇಕು. ಏಕೆಂದರೆ ಆ ವಿದೇಶಿಭಾಷೆಯೊಂದನ್ನು ಅಳವಡಿಸಿದಲ್ಲಿ ನಮ್ಮ ರಾಷ್ಟ್ರತ್ವಕ್ಕೆ ಹೀನಾಯ. ದೇಶದಲ್ಲಿ ಬಹಳಷ್ಟು ಜನ ಹಿಂದಿಭಾಷೆ ಮಾತನಾಡುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ. ದೇವನಾಗರಿ ಲಿಪಿಯು ತುಂಬ ವೈಜ್ಞಾನಿಕ ಲಿಪಿಯಾಗಿದ್ದು ಅದನ್ನು ನಮ್ಮ ಸರ್ಕಾರದ ಅಧಿಕೃತ ಲಿಪಿಯಾಗಿ ಅಳವಡಿಸಬೇಕು.

ನಾವು ಕೇಂದ್ರವನ್ನು ಸಾಕಷ್ಟು ಬಲಿಷ್ಠಮಾಡಬೇಕೆಂದು ಪ್ರಯತ್ನಿಸಿಲ್ಲ. ನಾವು ನಮ್ಮ ಪ್ರಾಂತ್ಯಗಳಿಗೆ ತಕ್ಕಷ್ಟು ಗಮನಹರಿಸಿಲ್ಲ ಎಂದು ನಾನು ಭಾವಿಸಿದ್ದೇನೆ. ಪ್ರಾಂತೀಯ ಆಯವ್ಯಯಗಳು ದುರ್ಬಲಗೊಂಡಿವೆ. ಪ್ರಾಂತ್ಯಗಳಲ್ಲಿ ಬೇರೂರಿದ ಬಡತನವಿದೆ. ಪ್ರಾಂತ್ಯಗಳ ಜವಾಬ್ದಾರಿ ಮಹತ್ತ್ವದ್ದಾಗಿದೆ. ನಾವು ಅಜ್ಞಾನ, ರೋಗ ಮತ್ತು ಹಲವು ಇತರ ವಿಷಯಗಳನ್ನು ಕುರಿತು ಹೋರಾಡಬೇಕಿದೆ ಹಾಗೂ ನಾವು ರಾಷ್ಟ್ರನಿರ್ಮಾಣ ಇಲಾಖೆಗಳನ್ನು ನಡೆಸಬೇಕು ಮತ್ತು ಪ್ರಾಂತ್ಯಗಳಲ್ಲಿ ರಚನಾತ್ಮಕ ಕೆಲಸ ಆಗಬೇಕು. ಕೇಂದ್ರ ಆದಾಯಗಳಿಂದ ಪ್ರಾಂತ್ಯಗಳಿಗೆ ಹಂಚಿಕೆ ಸಮಾನತೆ ಆಧಾರದ ಮೇಲಿರಬೇಕು. ಹಾಗಾಗಿ ಪ್ರಾಂತ್ಯಗಳು ತಮ್ಮ ಕರ್ತವ್ಯಗಳನ್ನು ಸೂಕ್ತವಾಗಿ ಮತ್ತು ದಕ್ಷವಾಗಿ ನಿರ್ವಹಿಸಲು ಸಾಧ್ಯ.

ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್, ರಾಜ್ಯಗಳ ವಿಷಯವಾಗಿ ಒಂದು ಮನವಿ ಮಾಡಿದರು. ಯಾವುದನ್ನು ಘಟಕಗಳನ್ನಾಗಿ ರೂಪಿಸಿ ಒಕ್ಕೂಟಕ್ಕೆ ಸೇರಿಸಿದ್ದೇವೆಯೋ ಆ ರಾಜ್ಯಗಳು ಪ್ರಾಂತ್ಯಗಳೊಂದಿಗೆ ಸರಿಸಮವಾಗಿರಬೇಕು. ನಾವು ಅಲ್ಲಿ ಕೂಡ ಏಕರೂಪ ನಿಯಮಗಳು ಇರುವುದನ್ನು ನೋಡಲು ಕಾತರಗೊಂಡಿದ್ದೇವೆ. ಮತ್ತು ಏಕರೂಪ ರೀತಿಯಲ್ಲಿ ಪ್ರಗತಿಯ ಮಟ್ಟವನ್ನು ರಾಜ್ಯಗಳಲ್ಲಿ ಕಾಯ್ದುಕೊಳ್ಳುವುದನ್ನು ನೋಡಬಯಸುತ್ತೇವೆ. ಆದುದರಿಂದ ನಾನು ಕರಡು ಸಂವಿಧಾನದಲ್ಲಿ ಪ್ರಾಂತ್ಯಗಳ ಘಟಕಗಳು ಮತ್ತು ರಾಜ್ಯಗಳ ಘಟಕಗಳು ಎಂದು ಭೇದಮಾಡಬಾರದು ಎಂದು ಸಲಹೆ ಮಾಡುತ್ತೇನೆ. ನಾವು ರಾಜ್ಯಗಳ ಪ್ರತಿನಿಧಿಗಳನ್ನು ಹೊಂದಿದ್ದೇವೆ ಮತ್ತು ನಾವು ಅವರೊಂದಿಗೆ ಸಮಾಲೋಚಿಸಿ ರಾಜ್ಯಗಳನ್ನು ಸಂವಿಧಾನದ ಭಾಗ-೧ರಲ್ಲಿ ತೋರಿಸಿದ ರೀತಿಯಲ್ಲಿ ಇತರ ಪ್ರಾಂತ್ಯಗಳಂತೆ ತರಬೇಕು.

ಅಲ್ಪಸಂಖ್ಯಾತರ ವಿಷಯವಾಗಿ ಏನೋ ಹೇಳಲಾಗಿದೆ. ಅಲ್ಪಸಂಖ್ಯಾತರ ಸಲಹಾಸಮಿತಿ, ಅಲ್ಪಸಂಖ್ಯಾತರಿಗೆ ಕೆಲವು ಸುರಕ್ಷತೆಗಳನ್ನು ಶಿಫಾರಸ್ ಮಾಡಿದೆ. ಜಂಟಿಮತದಾರರ ಆಧಾರದ ಮೇಲೆ ಭವಿಷ್ಯದ ಸಂಬಂಧಗಳು

ಜರುಗುವುದಾದರೂ, ಆ ಸುರಕ್ಷೆಗಳನ್ನು ಒದಗಿಸಲಾಗಿದೆ. ಮಾನ್ಯರೆ, ನಾನು ಈ ದಿನಗಳು ಸ್ವಯಂ ಸಮರ್ಪಣಾ ದಿನಗಳು ಎಂದು ತಿಳಿಸಲು ಬಯಸುತ್ತೇನೆ. ಕಾಂಗ್ರೆಸ್‌ನ ಹಲವಾರು ವರುಷಗಳ ಹೋರಾಟದ ನಡುವೆಯೂ ೧೯೪೭ರಲ್ಲಿ, ಬ್ರಿಟಿಷರು ನೂರಐವತ್ತು ವರ್ಷಗಳ ಆಡಳಿತದ ಅನಂತರ, ಸ್ವಯಂ ಅಧಿಕಾರ ತೊರೆದು ಶರಣಾದರು. ಆಗ ನಾವು ಭಾರತೀಯ ಸಂಸ್ಥಾನಗಳ ಆಡಳಿತಗಾರರೂ ಅಧಿಕಾರ ಬಿಟ್ಟುಕೊಟ್ಟುದನ್ನು ಕಂಡೆವು. ಅಲ್ಪಸಂಖ್ಯಾತರು ಸುರಕ್ಷತೆಗಳನ್ನು ಬಿಟ್ಟುಕೊಟ್ಟಲ್ಲಿ ಅವರು ಉತ್ತಮ ಮತ್ತು ಬಲಿಷ್ಠ ಸ್ಥಾನದಲ್ಲಿರುತ್ತಾರೆ ಮತ್ತು ಅವರು ಬಹು ಸಂಖ್ಯಾತರಿಂದ ಯಾವ ಹೆದರಿಕೆಯೂ ಒಳಗಾಗಬೇಕಿಲ್ಲ. ಅವರು ಸುರಕ್ಷತೆಗಳನ್ನು ಬಿಟ್ಟುಕೊಟ್ಟು ಬಹುಸಂಖ್ಯಾತರನ್ನು ಸೇರಿದರೆ, ನಾವು ಬಲಿಷ್ಠ ಭಾರತವನ್ನು ಹೊಂದುತ್ತೇವೆ ಮತ್ತು ನಮ್ಮ ರಾಷ್ಟ್ರತ್ವದ ಆದರ್ಶ ಬೇಗ ಸಾಕಾರಗೊಳುತ್ತದೆ.

ಮಾನ್ಯರೆ, ನಮ್ಮ ಸಂವಿಧಾನವು ವಿಶ್ವದಾದ್ಯಂತ ನಾಗರಿಕ ದೇಶಗಳಲ್ಲಿ ಇರತಕ್ಕ ಹಲವಾರು ಸಂವಿಧಾನಗಳ ಸಮನ್ವಯದಿಂದ ರೂಪುಗೊಂಡ ಒಂದು ಸಂವಿಧಾನವಾಗಿದೆ. ಎಲ್ಲ ಸಂವಿಧಾನಗಳಿಂದ ಹಲವು ಉತ್ತಮ ಅಂಶಗಳನ್ನು ನಮ್ಮ ದೇಶದ ಹಿತಾಸಕ್ತಿಗಾಗಿ ಆವಶ್ಯಕ ಮಾರ್ಪಾಡುಗಳೊಂದಿಗೆ ಅಳವಡಿಸಿಕೊಂಡುದಾಗಿದೆ. ನಾವು ವಿಧೇಯತೆಯಿಂದ ಮತ್ತು ಪ್ರಾಮಾಣಿಕವಾಗಿ ಸಂವಿಧಾನವನ್ನು ಕಾರ್ಯಗತಮಾಡಿದಲ್ಲಿ, ನಮ್ಮ ದೇಶ ಸಮೃದ್ಧಿ ಕಾಣುತ್ತದೆ, ಸುಖವಾಗಿರುತ್ತದೆ. ಬಲಿಷ್ಠವಿರುತ್ತದೆ ಹಾಗೂ ನಾವು ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಸಮರ್ಥರಾಗುತ್ತೇವೆ. ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವಷ್ಟೆ ಅಲ್ಲದೆ, ಇಲ್ಲಿಂದಾಚೆಗೆ ಭಾರತವು ಇತರ ಆಶ್ರಿತ ದೇಶಗಳನ್ನು ಮುಕ್ತಿಗೊಳಿಸುವ ಹಾಗೂ ಇಡೀ ವಿಶ್ವದಲ್ಲಿ ಶಾಂತಿ ಮತ್ತು ಸಮೃದ್ಧಿ ತರುವ ಸ್ಥಾನದಲ್ಲಿರುತ್ತದೆ ಎಂದು ಹೇಳಿದ ರಾಷ್ಟ್ರಪಿತನ ಮಹಾನ್ ಉದ್ದೇಶವನ್ನು ಪೂರೈಸಬಲ್ಲವರಾಗುತ್ತೇವೆ.

ಈ ಮಾತುಗಳೊಂದಿಗೆ, ಮಾನ್ಯರೆ, ನಾನು ಡಾ. ಅಂಬೇಡ್ಕರ್ ಅವರು ಮಂಡಿಸಿದ ಪ್ರಸ್ತಾವವನ್ನು ಸದನ ಒಪ್ಪಬೇಕೆಂದು ನಿವೇದಿಸಿಕೊಳ್ಳುತ್ತಿದ್ದೇನೆ.

**ಪಂಡಿತ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಹಲವಾರು ಗೆಳೆಯರು ಇಲ್ಲಿಗೆ ಬಂದಿದ್ದಾರೆ ಮತ್ತು ತಮ್ಮ ಅಭಿನಂದನೆಗಳನ್ನು ಕರಡು ಸಂವಿಧಾನದ ಜವಾಬ್ದಾರಿಯಲ್ಲಿರುವ ಗೌರವಾನ್ವಿತ ಕಾನೂನು ಸಚಿವರಿಗೆ ತಿಳಿಸಿದ್ದಾರೆ. ನಾನು ಚರ್ವಿತಚರ್ವಣ ಮಾಡಲಾರೆ. ಆದರೆ ನಮ್ಮ ಪರಿಗಣನೆಗೆ ಈ ಕರಡು ಸಂವಿಧಾನ ತುಂಬ ಸರಳವಾದ ರೀತಿಯಲ್ಲಿ ಮಂಡಿಸಿರುವುದಕ್ಕೆ ಸುಶಿಕ್ಷಿತ ಕಾನೂನು ಸಚಿವರಿಗೆ ನನ್ನ ನಮ್ರ ಮತ್ತು ಗೌರವಯುತ ಅಭಿನಂದನೆಗಳನ್ನು ಹೇಳದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ವಿಫಲನಾದಂತೆ.

ಹಲವು ಗೆಳೆಯರು ಮತ್ತು ವಿಮರ್ಶಕರು ಇಲ್ಲಿ ಬಂದಿರುತ್ತಾರೆ ಮತ್ತು ನಮ್ಮ ಸಂವಿಧಾನದ ವಿರುದ್ಧ ಕೆಲವು ಆರೋಪಗಳನ್ನು ಮಾಡಿದ್ದಾರೆ. ಹಲವು ಮಿತ್ರರಿಂದ ಪುನರುಚ್ಚರಿತವಾದ ಒಂದು ಆರೋಪವೆಂದರೆ ನಮ್ಮ ಸಂವಿಧಾನ ತುಂಬ ದೊಡ್ಡ ಗಾತ್ರದ್ದೆಂಬುದಾಗಿದೆ. ಈ ಪ್ರಸ್ತಾವವನ್ನು ಮಂಡಿಸಿದವರೇ ಸ್ವತಃ ಈ ದಾಖಲೆಯ ವಿಶಾಲ ಸ್ವರೂಪವನ್ನು ಕುರಿತು ಉಲ್ಲೇಖಿಸಿದ್ದಾರೆ. ನಾವು ಇತರ ಹಲವು ಸಂವಿಧಾನಗಳ ಖಂಡಗಳನ್ನು ಮತ್ತು ಅನುಚ್ಛೇದಗಳನ್ನು ಪರಿಶೀಲಿಸಿದಾಗ, ನಮ್ಮ ಸಂವಿಧಾನ ಒಂದು ಬೃಹತ್ ಗಾತ್ರದ್ದೆಂಬ ತೀರ್ಮಾನಕ್ಕೆ ಬರುತ್ತೇವೆ. ಮಾನ್ಯರೆ, ತಾವು ತಿಳಿದಂತೆ ಅದು ೩೧೫ ಅನುಚ್ಛೇದಗಳನ್ನು ಹೊಂದಿದೆ. ಅದೇ ಬ್ರಿಟಿಷ್ ಉತ್ತರಅಮೆರಿಕ ಅಂದರೆ ಕೆನಡಾ ೧೪೩ ಅನುಚ್ಛೇದಗಳನ್ನು ಹೊಂದಿದೆ; ಆಸ್ಟ್ರೇಲಿಯದ ಕಾಮನ್‌ವೆಲ್ತ್ ಅಧಿನಿಯಮದಲ್ಲಿ ಸುಮಾರು ೧೨೮ ಅನುಚ್ಛೇದಗಳಿವೆ. ದಕ್ಷಿಣಆಫ್ರಿಕಾದ ಒಕ್ಕೂಟ ಕಾಯಿದೆ ೧೫೩ ಅನುಚ್ಛೇದಗಳನ್ನು ಹೊಂದಿದೆ; ಐರಿಷ್ ಸಂವಿಧಾನ ಕೇವಲ ೬೩ ಅನುಚ್ಛೇದಗಳನ್ನು ಹೊಂದಿದೆ; ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನ ೨೮ ಅನುಚ್ಛೇದಗಳನ್ನು ಹೊಂದಿದೆ; ಯು.ಎಸ್‌ಎಸ್.ಆರ್ ಸಂವಿಧಾನ ೧೪೬ ಅನುಚ್ಛೇದಗಳನ್ನು ಹೊಂದಿದೆ; ಸ್ವಿಸ್ ಒಕ್ಕೂಟ ಸಂವಿಧಾನ ೧೨೩ ಅನುಚ್ಛೇದಗಳನ್ನು ಹೊಂದಿದೆ;

ಜರ್ಮನ್ ರೀಷ್ ಸಂವಿಧಾನವು ೧೮೧ ಅನುಚ್ಛೇದಗಳನ್ನು ಹೊಂದಿದೆ; ಜಪಾನಿನ ಸಂವಿಧಾನವು ೧೦೩ ಅನುಚ್ಛೇದಗಳನ್ನು ಹೊಂದಿದೆ. ಈ ಸಂವಿಧಾನಗಳತ್ತ ಒಂದು ನೋಟ ಹರಿಸಿದರೆ ಈ ಯಾವ ಸಂವಿಧಾನವೂ ೨೦೦ ಅನುಚ್ಛೇದಗಳಿಂತ ಹೆಚ್ಚು ಅನುಚ್ಛೇದಗಳನ್ನು ಹೊಂದಿಲ್ಲ ಎಂದು ಕಂಡುಬರುತ್ತದೆ. ಆದರೆ ನಮ್ಮ ಸಂವಿಧಾನ ೩೧೫ ಅನುಚ್ಛೇದಗಳನ್ನು ಹೊಂದಿದೆ.

ಟೀಕಾಕಾರರು ನಮ್ಮ ಸಂವಿಧಾನದ ಈ ದೊಡ್ಡ ಗಾತ್ರವನ್ನೇ ಒಂದು ಮಹತ್ತ್ವದ ಚರ್ಚಾವಿಷಯವನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ದೇಶ ೩೩ ಕೋಟಿ ಜನರ ಒಂದ ದೊಡ್ಡ ದೇಶ ಎಂಬುದನ್ನು ಮತ್ತು ನಾವು ಬಹುತೇಕ ಮಾನವ ಜನಾಂಗದ ಐದನೆಯ ಒಂದರಷ್ಟಕ್ಕೆ ಸಂವಿಧಾನ ಮಾಡುತ್ತಿದ್ದೇವೆ ಎಂಬುದನ್ನು ಮರೆಯಬಾರದು. ಆದುದರಿಂದ ನಮ್ಮ ಸಂವಿಧಾನ ದೊಡ್ಡದೆಂಬುದರಲ್ಲಿ ಅಚ್ಚರಿ ಏನಿಲ್ಲ. ಇಷ್ಟು ಜನಕ್ಕೆ ಯಾವ ದೇಶವೂ ಯಾವುದೇ ಸಂವಿಧಾನವನ್ನು ಮಾಡಿಲ್ಲವಾಗಿ ನಾವು ಆ ಜನಕ್ಕೆ ಸಂವಿಧಾನವನ್ನು ಮಾಡುತ್ತಿರುವುದಷ್ಟೆ ಅಲ್ಲ. ಆದರೆ ನಮ್ಮ ಸಮಸ್ಯೆಗಳು ವೈವಿಧ್ಯ ಮತ್ತು ವಿಭಿನ್ನ. ಅದೇ ಕಾಲಕ್ಕೆ ನಾವು ಸಂವಿಧಾನದಲ್ಲಿ ನಮ್ಮ ಕಾರ್ಯವಿಧಾನವನ್ನು ಕೊಡಲು ಪ್ರಯತ್ನಿಸಿದ್ದೇವೆ. ಹಾಗಾಗಿ ನಾವು ಒಕ್ಕೂಟದ ಸಂಕೀರ್ಣತೆ, ಜಟಿಲತೆ ಮತ್ತು ಏಕಕೇಂದ್ರ ಪ್ರಭುತ್ವ ಸರ್ಕಾರದ ನಡುವೆ ಸಮನ್ವಯ ತರುವ ಪ್ರಯತ್ನದಲ್ಲಿ ನಾವು ಕೆಲವು ಅನುಚ್ಛೇದಗಳನ್ನು ಸ್ವಾಭಾವಿಕವಾಗಿ ಅವಲಂಬಿಸಬೇಕಾಗಿದೆ. ಹಾಗಾಗಿ ಅದು ನಮ್ಮ ಸಂವಿಧಾನದ ಗಾತ್ರ ಹೆಚ್ಚಿಸಲು ಕಾರಣವಾಗಿದೆ.

ನಾನು ಹೇಳಿದಂತೆ, ನಮ್ಮ ದೇಶ ಅದರದೇ ಆದ ಸಮಸ್ಯೆಗಳುಳ್ಳ ದೇಶ. ವಿಶ್ವದ ಯಾವ ದೇಶದಲ್ಲೂ ನಾವು ಸಂಸ್ಥಾನಗಳು ಎಂದು ಏನು ಕರೆಯುತ್ತೇವೆಯೋ ಆ ರಾಜ್ಯಗಳು ಇಲ್ಲ ಮತ್ತು ಪ್ರಸಕ್ತ ಪ್ರಜಾಸತ್ತಾತ್ಮಕ ತತ್ತ್ವಗಳೊಂದಿಗೆ ಸಮನಾಗಿ ಈ ಹಲವು ಅಂಶಗಳನ್ನೆಲ್ಲ ತರುವಲ್ಲಿ ನಮ್ಮ ಸಂವಿಧಾನ ರಚಯಿತರು ತಾವು ಏನೆಲ್ಲ ಮಾಡಬೇಕೆಂದು ಇಚ್ಛಿಸಿದ್ದರೋ ಅವೆಲ್ಲವನ್ನು ಕೆಲವೇ ಅನುಚ್ಛೇದಗಳಲ್ಲಿ ಅಡಕಗೊಳಿಸಲು ಒತ್ತಿ ಇಡಲು ಆಗದಿದ್ದುದು ಆಶ್ಚರ್ಯವೇನಿಲ್ಲ. ಆದುದರಿಂದ ನಮ್ಮ ಸಂವಿಧಾನದ ವಿರುದ್ಧ ಹೊರಿಸಿದ ಆರೋಪ ಅಂದರೆ ಅದು ದೊಡ್ಡ ಗಾತ್ರದ್ದೆಂಬ ಹೇಳಿಕೆಯು ನಿಷ್ಪ್ರಯೋಜಕ ಎಂದು ತೋರುತ್ತೆ.

ಎರಡನೇ ಆರೋಪ ಹಲವು ಸಂವಿಧಾನಗಳಿಂದ ನಾವು ಬಹುತೇಕ ಅಕ್ಷರಶಃ ಎರವಲು ಪಡೆದಿದ್ದೇವೆ ಮತ್ತು ನಾವು ಯುಎಸ್‌ಎಸ್‌ಆರ್‌ನ ಸಂವಿಧಾನದತ್ತ ಇಣುಕು ನೋಟಹರಿಸಲೂ ಎಚ್ಚರವಹಿಸಿಲ್ಲ ಎಂಬುದೇ ಆಗಿದೆ. ಈ ಆರೋಪಕ್ಕೆ ಸಂಬಂಧಿಸಿದ ಹಾಗೆ, ನಾನು ಗೌರವಾನ್ವಿತ ಸದನದ ಗಮನವನ್ನು ನಮ್ಮ ದೇಶ ಮತ್ತು ಯುಎಸ್‌ಎಸ್‌ಆರ್ ನಡುವೆ ಇರತಕ್ಕ ತುಂಬ ಸ್ಪಷ್ಟವಾದ ನಿಖರ ಮತ್ತು ಮೂಲವ್ಯತ್ಯಾಸಗಳ ಕಡೆಗೆ ಸೆಳೆಯಲು ಇಚ್ಛಿಸುತ್ತೇವೆ. ರಷ್ಯನ್ ಸಂವಿಧಾನ ಒಂದೇ ಪಕ್ಷದ ಸಂಪೂರ್ಣ ಹದಿನೆಂಟು ವರ್ಷಗಳ ಸರ್ಕಾರದ ಆಡಳಿತ ಅನಂತರ ಅಸ್ತಿತ್ವಕ್ಕೆ ಬಂದಿತು. ಆ ಪಕ್ಷ ಯುಎಸ್‌ಎಸ್‌ಆರ್‌ನ ಕಮ್ಯೂನಿಸ್ಟ್ ಪಕ್ಷ. ಸಂಪೂರ್ಣ ಹದಿನೆಂಟು ವರ್ಷಗಳು ಆ ಪಕ್ಷ ಅಧಿಕಾರದಲ್ಲಿತ್ತು. ೧೯೧೭ರ ಅಕ್ಟೋಬರ್ ಕ್ರಾಂತಿ ಆ ಪಕ್ಷವನ್ನು ಅಧಿಕಾರಕ್ಕೆ ತಂದಿತು ಮತ್ತು ೧೯೩೫ರವರೆಗೆ ತಮ್ಮ ದೇಶಕ್ಕೆ ಅವರು ಒಂದು ಸಂವಿಧಾನ ಸಿದ್ಧಪಡಿಸುವ ಬಗ್ಗೆ ಆಲೋಚಿಸಲೇ ಇಲ್ಲ. ಹದಿನೆಂಟು ವರ್ಷಗಳ ಅನಂತರ ಯಾವ ಅವಧಿಯಲ್ಲಿ ದೃಢವಾದ ಒಂದು ಪಕ್ಷದ ಆಡಳಿತ ಅಲ್ಲಿದ್ದಿತೋ, ಆ ಪಕ್ಷ ರಷ್ಯಾಕ್ಕೆ ಒಂದು ಸಂವಿಧಾನ ಕೊಡುವ ಆಲೋಚನೆ ಮಾಡಿತು. ನಮ್ಮ ಸ್ಥಿತಿಗತಿಗಳು ರಷ್ಯದಲ್ಲಿದ್ದ ಸ್ಥಿತಿಗತಿಗಳಿಗಿಂತ ಪೂರಾ ಭಿನ್ನ. ಸಹಜವಾಗಿ, ರಷ್ಯನ್ ಸಂವಿಧಾನದಿಂದ, ಎರವಲು ತೆಗೆದುಕೊಳ್ಳಲಿಲ್ಲವೆಂದರೆ, ನಾವು ಉದ್ದೇಶಪೂರ್ವಕವಾಗಿ ಎರವಲು ಪಡೆದಿಲ್ಲ ಎಂಬುದನ್ನು ಮರೆಯಬಾರದು. ರಷ್ಯನ್ ಸಂವಿಧಾನ ಅಲ್ಪಸಂಖ್ಯಾತರಿಗೆ ಪರಿಪೂರ್ಣ ಅವಕಾಶ ಕೊಡುತ್ತದೆ ಎನ್ನಲಾಗಿದೆ. ಆದರೆ ಹದಿನೆಂಟು ವರ್ಷಗಳ ಕಾಲ, ಆ ದೃಢ ಪಕ್ಷ ಅಂದರೆ ರಷ್ಯದ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರದ ಪ್ರಜಾಪ್ರಭುತ್ವ ಗಣತಂತ್ರ ಎಂದು ಏನು ಕರೆಯುತ್ತೇವೆಯೋ ಅದರಲ್ಲಿ ಅಧಿಕಾರದಲ್ಲಿದ್ದಾಗ ಅದು ಯುಎಸ್‌ಎಸ್‌ಆರ್ ಅನ್ನು ರಚಿಸಿದ

ಹಲವು ಗಣತಂತ್ರಗಳ ಮೇಲೆ ಅಂತಹ ಹಿಡಿತ ಸ್ಥಾಪಿಸಿತ್ತು ಎಂಬುದನ್ನು ನಾವು ಮರೆಯುತ್ತೇವೆ; ಸಂವಿಧಾನ ಅವರಿಗೆ ಕೇಂದ್ರ ಸರ್ಕಾರದೊಂದಿಗಿನ ಸಂಪರ್ಕವನ್ನು ಕಡಿದುಕೊಳ್ಳಲು ಅಧಿಕಾರ ಕೊಟ್ಟಿತು ಎಂಬ ಅಂಶವಿದ್ದಾಗ್ಯೂ ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಜಾರ್ಜಿಯ, ಉಕ್ರೇನ್ ಮೊದಲಾದವುಗಳ ಗಣರಾಜ್ಯಗಳು ಮತ್ತು ಇತರ ಕೇಂದ್ರೀಯ ಏಷ್ಯಾ ಗಣರಾಜ್ಯಗಳಿಗೆ ಮೊದಲೇ ಅವರಿಗೆ ಒಂದು ಸಂವಿಧಾನವನ್ನು ಕೊಡಲಾಗಿತ್ತು. ಅವು ಚೆನ್ನಾಗಿ ಒಂದುಗೂಡಿದ, ಚೆನ್ನಾಗಿ ವ್ಯವಸ್ಥಿತವಾಗಿದ್ದ ಯುಎಸ್‌ಎಸ್‌ಆರ್‌ನ ಕಮ್ಯೂನಿಸ್ಟ್ ಪಕ್ಷದ ಹಿಡಿತದಲ್ಲಿದ್ದವು. ಆದುದರಿಂದ ನಾವು ರಷ್ಯನ್ ಸಂವಿಧಾನದ ಯಾವುದೇ ಮಹತ್ತ್ವದ ಸಿದ್ಧಾಂತವನ್ನು ತೆಗೆದುಕೊಂಡಿಲ್ಲ ಮತ್ತು ನಮ್ಮ ಸಂವಿಧಾನದಲ್ಲಿ ಅಡಕಮಾಡಿಲ್ಲ. ನಾವು ರಷ್ಯಾ ಸಂವಿಧಾನದಿಂದ ಇಲ್ಲೊಂದು ಅಲ್ಲೊಂದು ಮಹತ್ತ್ವದ ತತ್ತ್ವಗಳನ್ನು, ಎರವಲು ಪಡೆದಿಲ್ಲ ಎಂದು ಆರೋಪಿಸುವುದು, ರಷ್ಯಾ ಮತ್ತು ನಮ್ಮಲಿನ ವಾಸ್ತವಾಂಶಗಳ ಬಗ್ಗೆ ಅರಿವಿಲ್ಲದಿರುವುದನ್ನು ಎತ್ತಿ ತೋರುತ್ತದೆ.

ಮಾನ್ಯರೆ, ನಾವು ನಮ್ಮ ದೇಶದ ರಾಜಕೀಯ ಬೆಳವಣಿಗೆಯತ್ತ ನೋಡಿದರೆ, ಪ್ರಜಾಪ್ರಭುತ್ವ ಸಿದ್ಧಾಂತಗಳ ಮೇಲೆ ನಮ್ಮ ಪಕ್ಷ, ಕಾಂಗ್ರೆಸ್ ರಾಜಕೀಯ ಪಕ್ಷ ಬೆಳೆದಿರುವುದನ್ನು ಕಾಣುತ್ತೇವೆ. ರಷ್ಯನ್ ಕಮ್ಯೂನಿಸ್ಟ್ ಪಕ್ಷ ಒಟ್ಟಾರೆ ವಿಭಿನ್ನ ತತ್ತ್ವದ ಮೇಲೆ ಬೆಳೆದಿದೆ. ಮತ್ತು ಅಲ್ಲಿಯ ಮೂಲ ಆಧಾರ ಕ್ರಾಂತಿಕಾರಿ ಸರ್ವಾಧಿಕಾರಿಶಾಹಿಯಾಗಿದೆ. ಆದುದರಿಂದ ಯಾವ ಸ್ನೇಹಿತರು ವೇದಿಕೆಗೆ ಬಂದು ರಷ್ಯನ್ ಸಂವಿಧಾನದ ಬಗೆಗೆ ತುಂಬ ಚೆನ್ನಾಗಿ ಮಾತನಾಡಿ ನಾವು ರಷ್ಯನ್ ಸಂವಿಧಾನದಿಂದ ಹಲವು ಖಂಡಗಳನ್ನು ಎರವಲು ಪಡೆಯದಿದ್ದುದಕ್ಕೆ ಛೇಡಿಸಿದರೋ ಅವರ ಟೀಕೆ ಸಂಪೂರ್ಣ ಆಧಾರರಹಿತ ಎಂದು ಹೇಳಬಹುದು. ಅವರು ಟೀಕೆ ಮಾಡುವಾಗ ನಮ್ಮ ದೇಶದಲ್ಲಿನ ಸನ್ನಿವೇಶದತ್ತ ನೋಡಲು ಲಕ್ಷ್ಯವಹಿಸಿಲ್ಲ.

ಬಳಿಕ ಪುನಃ ನಾವು ರಷ್ಯನ್ ರಾಜ್ಯಾಡಳಿತದ ತತ್ತ್ವಗಳು, ಗುರಿಗಳು ಮತ್ತು ಉದ್ದೇಶಗಳು ಮತ್ತು ನಮ್ಮ ದೇಶದಲ್ಲಿ ಬೆಳೆಸಲಿರುವ ರಾಜ್ಯಾಡಳಿತದ ತತ್ತ್ವಗಳು ಮತ್ತು ಗುರಿಗಳು ಹಾಗೂ ಉದ್ದೇಶಗಳ ನಡುವೆ ಪ್ರಮುಖ ವ್ಯತ್ಯಾಸವಿದೆ ಎಂಬುದನ್ನು ನಾವು ಮರೆಯದಿರೋಣ.

ಮಾನ್ಯರೆ, ರಷ್ಯಾದಲ್ಲಿ, ವ್ಯಕ್ತಿಯ ಬೆಲೆ ನಗಣ್ಯ. ದೇಶ, ಸಮಾಜ ಮತ್ತು ಪಕ್ಷದ ಸಲುವಾಗಿ ಪ್ರತಿ ವ್ಯಕ್ತಿಯ ಬದುಕು ಮೀಸಲು. ಆದರೆ ಇಲ್ಲಿ ಮಹಾತ್ಮ ಗಾಂಧಿಯವರ ಸ್ಫೂರ್ತಿದಾಯಕ ನಾಯಕತ್ವದಡಿ, ನಾವು ತುಸು ವಿಭಿನ್ನ ವಿಧಾನದಲ್ಲಿ ವಿಷಯಗಳತ್ತ ನೋಡುವುದನ್ನು ಕಲಿತಿದ್ದೇವೆ. ನಾವು ವ್ಯಕ್ತಿಗಳನ್ನು ಸಾಮಾಜಿಕ ಪಕ್ಷದ ಹಾಗೂ ರಾಷ್ಟ್ರದ ಆಧಾರವೆಂದು ಪರಿಗಣಿಸುತ್ತೇವೆ. ಪ್ರತಿ ವ್ಯಕ್ತಿಯ ಮೇಲೆ ಒತ್ತು ಕೊಡುವುದರಿಂದ ನಮ್ಮ ಸನ್ನಿವೇಶ ರಷ್ಯದಲ್ಲಿರತಕ್ಕ ಸನ್ನಿವೇಶದಿಂದ ತೀರ ಭಿನ್ನವಾಗಿರುತ್ತದೆ. ಈ ಎಲ್ಲ ಕಾರಣಗಳಿಗಾಗಿ ನಮ್ಮ ಸಂವಿಧಾನ ರಚನಾಕಾರರು ರಷ್ಯನ್ ಸಂವಿಧಾನದಿಂದ ಎರವಲು ತೆಗೆದುಕೊಂಡಿಲ್ಲವಾದರೆ ಅವರು ಉದ್ದೇಶಪೂರ್ವಕವಾಗಿ ಹಾಗೆ ಮಾಡಿದುದಾಗಿ ನಾವು ಹೇಳಬಹುದು. ಸ್ಫೂರ್ತಿಗಾಗಿ ರಷ್ಯದತ್ತ ಮುಖಮಾಡುವ ಬದಲು, (ಅದು ಪ್ರಜಾಪ್ರಭುತ್ವವಾದಿ ಸರ್ಕಾರವೆಂಬುದು ಸ್ಪಷ್ಟವಾಗಿದ್ದರೂ) ಇತರ ಪ್ರಜಾಪ್ರಭುತ್ವ ರಾಷ್ಟ್ರಗಳತ್ತ ನೋಡಬೇಕಿತ್ತು. ರಷ್ಯ ಏಕಪಕ್ಷಾಡಳಿತಕ್ಕೆ ಒಳಪಟ್ಟ ಜಿಗುಟು ವ್ಯವಸ್ಥೆಯ ಪ್ರಜಾಪ್ರಭುತ್ವವನ್ನು ಹೊಂದಿದೆ.

ಮೂರನೆಯ ಆರೋಪವೆಂದರೆ ಈ ಸಂವಿಧಾನ ಒಂದು ಭಾರಿ ಶಕ್ತಿಯುತ ಕೇಂದ್ರಾಪಗಾಮಿ ಪ್ರವೃತ್ತಿ ಹೊಂದಿದೆ ಎಂದೂ ಕಿಂಚಿತ್ ಸ್ವಾಯತ್ತತೆಯನ್ನು ಸಂವಿಧಾನದ ಅಡಿಯಲ್ಲಿ ನೀಡಿದಂತೆ ತೋರಿಸಿ ಸಂವಿಧಾನ ಕಾರ್ಯರೂಪಕ್ಕೆ ಬರುವ ಹೊತ್ತಿಗೆ ಕಸಿದುಕೊಳ್ಳಲಾಗುತ್ತದೆ ಎಂದೂ ಮತ್ತು ಆ ಎಲ್ಲ ಶಕ್ತಿಯೂ ಅಧಿಕಾರವೂ ಒಕ್ಕೂಟದಲ್ಲಿ ಕೇಂದ್ರೀಕೃತವಾಗುತ್ತದೆ ಎಂದೂ ಆರೋಪವಿದೆ. ಆದರೆ, ಒಂದು ರಾಷ್ಟ್ರವಾಗಿ ನಾವು ಕೇಂದ್ರಾಪಗಾಮಿತ್ವದ ಕಾಯಿಲೆಗೆ ಪಕ್ಕಾಗಿದ್ದೇವೆ ಎಂಬುದನ್ನು ನಾವೇಕೆ ಮರೆಯಬೇಕು? ಈ ಕೇಂದ್ರಾಗಾಮಿ ಪ್ರವೃತ್ತಿಯು ಕೇಂದ್ರದಿಂದ ಹಾರಿಹೋಗುವ ಒಂದು ಪ್ರವೃತ್ತಿ. ರಾಜಕಾರಣ ನಿಕಾಯದಿಂದ, ಹಲವಾರು ಅಂಗಗಳು ಪ್ರತ್ಯೇಕಗೊಳ್ಳುವ ಈ ಪ್ರವೃತ್ತಿ ಐತಿಹಾಸಿಕ, ನಾವದನ್ನು ಕಡೆಗಣಿಸಬಾರದು.

ಇಂದು ನಾವು ಇಲ್ಲಿ ರಾಷ್ಟ್ರವನ್ನು ಸುವ್ಯವಸ್ಥಿತಿವಾಗಿ ಹೆಣೆದ ಬಲಿಷ್ಠಸಮಾಜವನ್ನಾಗಿ ಬೆಸೆಯಲು ಕುಳಿತಿದ್ದೇವೆ. ನಮ್ಮ ಸಂವಿಧಾನ ನಿರ್ಮಾಪಕರು, ಶತಮಾನಗಳ ಕಾಲ ನಮ್ಮ ದೇಶ ಯಾವ ಉಲ್ಬಣಿಸಿದ ಕಾಯಿಲೆಯಿಂದ ನರಳುತ್ತಿದ್ದೆಯೋ ಅದರ ವಿರುದ್ಧ ರಕ್ಷಿಸಲು ಲಕ್ಷ್ಯ ವಹಿಸದಿದ್ದರೆ, ಮುಳುಗುತ್ತೇವೆ. ನಾವು ದುಃಖದಲ್ಲಿ ಕೇಂದ್ರಕ್ಕೆ ಕೆಲವು ತುರ್ತುಸ್ಥಿತಿಗಳನ್ನು ಗಮನಿಸಲು ನಿಶ್ಚಿತ ಅಧಿಕಾರಗಳನ್ನು ಕೊಡಲಾಗಿರುವುದನ್ನು ದುರುಪಯೋಗಮಾಡಿಕೊಳ್ಳುತ್ತವೆ ಎಂದು ಯಾವ ಗೆಳೆಯರು ಮತ್ತು ಟೀಕಾಕಾರರು ಯೋಚಿಸುತ್ತಾರೋ ಅವರು ತಮ್ಮ ಮನೆ ಬಾಗಿಲುಗಳಿಗೆ ತೋಳ ನಿಜವಾಗಿ ಬರುವ ಮುನ್ನವೇ "ತೋಳ, ತೋಳ" ಎಂದು ಕೂಗಲು ಯತ್ನಿಸುತ್ತಿರುವರು.

ಗ್ರಾಮಪಂಚಾಯಿತಿಗಳನ್ನು ಕುರಿತಂತೆ ಸಂವಿಧಾನ ಯಾವುದೇ ಖಂಡ ಹೊಂದಿಲ್ಲ ಎಂಬುವುದರಲ್ಲಿ ಯಾವ ಅನುಮಾನವೂ ಇಲ್ಲ. ಅವರತ್ತ ಆ ಕಾರಣಕ್ಕಾಗಿ ಸಾಕಷ್ಟು ಟೀಕೆಯನ್ನು ರಾಚಲಾಗಿದೆ. ಆದರೆ ಸಂವಿಧಾನ ಯಾವುದೇ ವಿಧದಲ್ಲೂ ಗ್ರಾಮಪಂಚಾಯಿತಿ ಬೆಳವಣಿಗೆಯನ್ನು ತಳ್ಳಿ ಹಾಕುವುದಿಲ್ಲ ಎಂದು ನಾನು ಒತ್ತಿ ಹೇಳಬಹುದೆ? ಸಂವಿಧಾನವು ಸ್ಥಳೀಯ ಸ್ವ-ಸರ್ಕಾರದ ಘಟಕಗಳನ್ನು ಅಂದರೆ ಸ್ವಂತ ವ್ಯವಹಾರಗಳನ್ನು ನಿರ್ವಹಿಸುವ ಅಥವಾ ಅಧಿಕಾರವನ್ನು ಅನುಭವಿಸುವ ಘಟಕಗಳ ಬೆಳವಣಿಗೆಯ ಪಥದಲ್ಲಿ ಯಾವುದೇ ತಡೆ ಹಾಕುವುದಿಲ್ಲ. ಆದುದರಿಂದ ಆ ಟೀಕೆ ಕೂಡ ನನಗೆ ಯಾವುದೇ ತಳಹದಿ ಇಲ್ಲದ್ದೆಂದು ತೋರುತ್ತದೆ.

ಮಾನ್ಯರೆ, ಇನ್ನೊಂದು ಮಾತು. ನನ್ನ ಗೌರವಾನ್ವಿತ ಸ್ನೇಹಿತ ಶ್ರೀ ಟಿ.ಟಿ. ಕೃಷ್ಣಮಾಚಾರಿ ಮತ್ತು ನನ್ನ ಗೌರವಾನ್ವಿತ ಹಿರಿಯ, ಪಂಡಿತ ಲಕ್ಷ್ಮಿಕಾಂತ ಮೈತ್ರ ಒಂದು ರಾಷ್ಟ್ರಭಾಷೆ ಕೊಡಲು ಯತ್ನಿಸುವ ದಿಕ್ಕಿನಲ್ಲಿ ನಮ್ಮ ಪ್ರಯತ್ನಗಳು ಅನುಮಾನಾಸ್ಪದವೆಂದು ಭಾವಿಸಿರುವುದು ವಿಷಾದನೀಯ. ಆ ಭಾವನೆ ಸೃಷ್ಟಿಯಾಗಿದ್ದರೆ ನಾನು ನನ್ನ ಗೆಳೆಯ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರಿಗೆ ಸಾವಿರ ತಪ್ಪೊಪ್ಪಿಗೆಗಳನ್ನು ಸಲ್ಲಿಸುತ್ತೇನೆ. ಯಾರು ನಮ್ಮಲ್ಲಿ ಒಂದು ರಾಷ್ಟ್ರಭಾಷೆ ಇರಬೇಕು ಎಂದು ಭಾವಿಸುತ್ತಾರೋ, ಅಂಥವರು ತಮ್ಮ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳಲು ಹಾಗೂ ಮುಕ್ತವಾಗಿ ಅಭಿಪ್ರಾಯ ವ್ಯಕ್ತಪಡಿಸಲು ಒಂದು ಸಾಮಾನ್ಯ ಮಾಧ್ಯಮ ಬೇಕು ಎಂದು ನಾನು ಸದನಕ್ಕೆ ಹೇಳಬಹುದೇ? ನಮ್ಮ ಅಭಿಪ್ರಾಯದಲ್ಲಿ ರಾಷ್ಟ್ರಭಾಷೆ ಹಿಂದಿ ಇರಬೇಕು. ಹಾಗೆಂದರೆ ನಮ್ಮ ಯಾವುದೇ ಗೆಳೆಯರನ್ನು ಅವಮಾನಪಡಿಸಲು ಬಯಸುತ್ತೇವೆ ಎಂದು ಅರ್ಥವಲ್ಲ. ಆ ಗೆಳೆಯರು ಒಂದು ರಾಷ್ಟ್ರಭಾಷೆಯನ್ನು ಹೊಂದಲು ನಮ್ಮೊಂದಿಗೆ ಸಹಕರಿಸಿದರೆ ಯಾವುದೇ ಪ್ರಾಂತೀಯ ಭಾಷೆ ಸಂಕಟಕ್ಕೀಡಾಗುವುದಿಲ್ಲ. ರಾಷ್ಟ್ರಕ್ಕೆ ಒಂದು ಸಾಮಾನ್ಯ ಭಾಷೆಯನ್ನು ಕೊಡಲು ಪ್ರಯತ್ನಿಸುವಲ್ಲಿ ನಮ್ಮ ಪ್ರಯತ್ನಗಳು ಯಾವುದೇ ಗೆಳೆಯರನ್ನು ಕೆರಳಿಸುವ ಉದ್ದೇಶ ಹೊಂದಿಲ್ಲ. ಪ್ರತಿ ವಿಭಾಗದಿಂದಲೂ ಸಹಾನುಭೂತಿ ತೋರುವವರನ್ನು ಬಯಸುತ್ತೇವೆ. ನಮ್ಮ ರಕ್ಷಣೆಗೆ ದಕ್ಷಿಣದಿಂದ ಇಡೀ ಸಮೂಹವಿದ್ದು ಅದು ನಮ್ಮ ಈ ಪ್ರಾಚೀನ ನಾಡಿಗೆ ಒಂದು ರಾಷ್ಟ್ರಭಾಷೆ ಕೊಡುವಲ್ಲಿ ನಮ್ಮ ಪ್ರಯತ್ನಗಳಿಗೆ ನಮಗೆ ನೆರವಾಗಬೇಕು. ವಂದನೆಗಳು.

**ಪಂಡಿತ್ ಠಾಕುರ್ ದಾಸ್ ಭಾರ್ಗವ** : (ಪೂರ್ವ ಪಂಜಾಬ್ : ಸಾಮಾನ್ಯ):

(ಹಿಂದೂಸ್ಥಾನಿಯಲ್ಲಿ ಆರಂಭಿಸಿದರು)

**ಶ್ರೀ ನಾಗಪ್ಪ ಎಸ್.** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಸದಸ್ಯರು ಇಂಗ್ಲಿಷಿನಲ್ಲಿ ವ್ಯಕ್ತಪಡಿಸಬಹುದಿದ್ದರೆ ಇಂಗ್ಲಿಷಿನಲ್ಲೇ ಮಾತನಾಡಿ ಎಂದು ಕೇಳಬಹುದೆ?

**ಪಂಡಿತ್ ಠಾಕುರ್ ದಾಸ್ ಭಾರ್ಗವ** : ನನ್ನ ಗೆಳೆಯರು ನಾನು ಇಂಗ್ಲಿಷಿನಲ್ಲಿ ಮಾತನಾಡಬೇಕೆಂದು ಒತ್ತಾಯಮಾಡಿರುವುದರಿಂದ ನಾನು ಅವರ ಇಚ್ಛೆಗೆ ಬಾಗುತ್ತೇನೆ. ಹೆಚ್ಚು ಸುಲಭವಾಗಿ ನಾನು ಹಿಂದಿಯಲ್ಲಿ ವ್ಯಕ್ತಪಡಿಸಲು ಸಮರ್ಥನಿದ್ದೇನೆ. ಆದರೆ ಅದೇ ಸಮಯಕ್ಕೆ ಸದನದ ಎಲ್ಲ ಸದಸ್ಯರು ನಾನು ಹೇಳಿದುದನ್ನು ಅರ್ಥಮಾಡಿಕೊಳ್ಳಬೇಕೆಂದೂ ನಾನು ಆಶಿಸುತ್ತೇನೆ.

ಮಾನ್ಯರೆ, ಕರಡು ರಚನಾಸಮಿತಿ ಮೇಲೆ ಈ ಸದನದಲ್ಲಿ ಹೊಗಳಿಕೆಯ ಮಹಾಪೂರ ಹರಿದಿರುವಲ್ಲಿ, ಅವರೊಡನೆ ನಾನೂ ಸೇರಿಕೊಳ್ಳಬಯಸುತ್ತೇನೆ. ಆದರೆ ನಾನು ನನ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸದೆ ಹಾಗೆ ಮಾಡಲಾಗದು. ಇಲ್ಲಿ ಕೆಲವು ಗೆಳೆಯರಿಂದ ಮಾಡಲಾದ ದೂರುಗಳನ್ನು ನನ್ನ ಮನಸ್ಸಿನಲ್ಲಿರಿಸಿಕೊಂಡಾಗ, ನಾನೂ ಸಹ ಕರಡು ರಚನಾಸಮಿತಿ, ನಾವು ಏನು ಮಾಡಬೇಕೆಂದು ನಿರೀಕ್ಷಿಸಿದ್ದೆವೋ ಅದು ಮಾಡಿಲ್ಲ ಎಂದು ಭಾವಿಸುತ್ತೇನೆ. ಕೆಲವು ಸದಸ್ಯರು ಗೈರುಹಾಜರಿದ್ದರು. ಕೆಲವರು ಸೇರಿಕೊಳ್ಳಲಿಲ್ಲ ಕೆಲವರು ತಮ್ಮ ಮನಸ್ಸನ್ನು ಪೂರಾ ಇತ್ತ ಹರಿಸಲಿಲ್ಲ. ಹಣಕಾಸು ಉಪಬಂಧಗಳ ವಿಷಯವಾಗಿ ನಾವು ಏನು ಕಾಣುತ್ತೇವೆ? ಅವರು ಪ್ರಶ್ನೆಗಳಿಂದ ತಪ್ಪಿಸಿಕೊಂಡಿದ್ದಾರೆ ಮತ್ತು ಕೆಲವು ಇತರ ಪ್ರಶ್ನೆಗಳಿಗೂ ಕೂಡ ಯಾವುದೇ ಪರಿಹಾರವನ್ನು ಅದು ಏನೇ ಇರಲಿ ನಮಗೆ ಕೊಟ್ಟಿಲ್ಲ. ಭಾರತದ ನಿಜ ಆತ್ಮವನ್ನು ಈ ಸಂವಿಧಾನ ಪ್ರತಿನಿಧಿಸಿಲ್ಲ ಮತ್ತು ಗ್ರಾಮಗಳ ಸ್ವಾಯತ್ತತೆಯನ್ನು ಪೂರಾ ಇಲ್ಲಿ ಚಿತ್ರಿಸಿಲ್ಲ ಮತ್ತು ಈ ಕ್ಯಾಮೆರಾ (ಕರಡು ಸಂವಿಧಾನ ಎತ್ತಿ ಹಿಡಿದು) ಭಾರತ ಹೇಗಿರಬೇಕೆಂದು ಹಲವು ಜನ ಇಚ್ಛಿಸುತ್ತಾರೆ ಎಂಬುದನ್ನು ಕುರಿತು ನಿಜ ಚಿತ್ರ ಕೊಡುವುದಿಲ್ಲ. ಕರಡು ರಚನಾಸಮಿತಿ ಗಾಂಧೀಜಿಯವರ ಮನಸ್ಸನ್ನು ಹೊಂದಿಲ್ಲ. ಈ ಕ್ಯಾಮೆರಾ ಮೂಲಕ ಮರು ಭಾರತದ ಲಕ್ಷಾಂತರ ಜನರು ಇಲ್ಲಿ ಬಿಂಬಿತವಾಗಬೇಕೆಂದು ಆಲೋಚಿಸುತ್ತಾರೆಯೋ ಅವರ ಮನಸ್ಸನ್ನು ಗ್ರಹಿಸಿಲ್ಲ. ಮಾನ್ಯರೆ, ನಾನು ಈ ಸಂವಿಧಾನದೊಂದಿಗೆ ವ್ಯವಹರಿಸಿರುವ ಡಾ. ಅಂಬೇಡ್ಕರ್ ಪರಿಶ್ರಮ ಉದ್ಯಮಶೀಲತೆ ಮತ್ತು ಸಾಮರ್ಥ್ಯಗಳನ್ನು ಪ್ರಶಂಸಿಸುವುದನ್ನು ತಡೆಹಿಡಿಯಲಾರೆ. ನಾನು ಅವರು ಮಾಡಿದ ಭಾಷಣಕ್ಕೆ ನನ್ನ ಸಹಮತವಿಲ್ಲದಿರುವಾಗಲೂ, ಅಭಿನಂದನೆ ಸಲ್ಲಿಸುತ್ತೇನೆ.

ಮಾನ್ಯರೆ, ಈ ಸಂವಿಧಾನದ ಆತ್ಮ ಪೀಠಿಕೆಯಲ್ಲಿ ಒಳಗೊಂಡಿದೆ ಎಂದು ನಾನು ತಿಳಿದಿದ್ದೇನೆ. ಪೀಠಿಕೆಗೆ "ಭ್ರಾತೃತ್ವ" ಎಂಬ ಶಬ್ದ ಸೇರಿಸಿದ ಡಾ. ಅಂಬೇಡ್ಕರ್ ಅವರಿಗೆ ನನ್ನ ಕೃತಜ್ಞತೆಗಳ್ನು ವ್ಯಕ್ತಪಡಿಸಲು ನಾನು ಹರ್ಷಿಸುತ್ತೇನೆ. ಮಾನ್ಯರೆ, ಈಗ ನಾನು ಈ ಪೀಠಿಕೆಯ ಕಾಂತಶಿಲೆಯನ್ನು ಇಡೀ ಸಂವಿಧಾನಕ್ಕೆ ಅನ್ವಯಿಸಲು ಬಯಸುತ್ತೇನೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವನ್ನು ಈ ಸಂವಿಧಾನದಲ್ಲಿ ಕಾಣಬೇಕಾದರೆ, ನಾವು ಈ ಆದರ್ಶವನ್ನು ಈ ಸಂವಿಧಾನದ ಮೂಲಕ ನಾವು ಪಡೆಯಬಹುದಾದರೆ, ಸಂವಿಧಾನ ಉತ್ತಮ ಎಂಬುದನ್ನು ದೃಢೀಕರಿಸುತ್ತೇನೆ. ಪೀಠಿಕೆಯಲ್ಲಿ ಒಳಗೊಂಡಿರುವ ಈ ನಾಲ್ಕು ವಿಷಯಗಳು ಕಡಮೆಯಾಗಿರುವುದಾದರೆ ನಾನು ಸಂವಿಧಾನವು ಲೋಪವುಳ್ಳದ್ದೆಂದು ಹೇಳಲು ಬದ್ಧನಾಗುತ್ತೇನೆ. ಈ ದೃಷ್ಟಿಕೋನದಿಂದ ಸಂವಿಧಾನವನ್ನು ನಿರ್ಣಯಿಸಬಯಸುತ್ತೇನೆ. ಸಮಯ ತುಂಬ ಮಿತಿ ಇದೆ ಎಂದು ನಾನು ಬಲ್ಲೆ ಮತ್ತು ನಾನು ಪ್ರತಿಯೊಂದನ್ನೂ ಹೇಳಲಾಗದು. ಕೇವಲ ಮೂರು, ನಾಲ್ಕು ವಿಷಯಗಳನ್ನು ಕುರಿತು ಮಾತನಾಡುತ್ತೇನೆ.

ಮೊದಲು ನಾನು ಸದನದ ಗಮನವನ್ನು ಭಾಗ–೨ ಪೌರತ್ವದತ್ತ ಸೆಳೆಯಬಯಸುತ್ತೇನೆ. ಪಶ್ಚಿಮ ಪಾಕಿಸ್ತಾನ, ಸಿಂಧ್, ಬಲೂಚಿಸ್ತಾನ ಮತ್ತು ಪೂರ್ವಬಂಗಾಳದಿಂದ ಬಂದ ೬೦ ಲಕ್ಷ ಜನರಿಗೂ ಹೆಚ್ಚು ಇದ್ದಾರೆ. ಈ ಜನರು ಪರಕೀಯರಲ್ಲ. ತಾಂತ್ರಿಕವಾಗಿ ಅವರನ್ನು ಪರಕೀಯರೆಂದು ಭಾವಿಸಿದಲ್ಲಿ ಅದು ಒಂದು ಪಾಪ ಎಂದು ಭಾವಿಸುವೆ. ಏಕೆಂದರೆ, ವಿಭಜನೆಗೆ ಒಪ್ಪಿದ ಸರ್ಕಾರ ಈ ಸನ್ನಿವೇಶವನ್ನು ಸೃಷ್ಟಿಸಿದೆ. ಆದುದರಿಂದ, ಒಂದು ಕಾನೂನು ಮಾಡಲು ಅಂದರೆ "ಪ್ರತಿಯೊಬ್ಬರೂ ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ತಿಂಗಳಿಗೊಮ್ಮೆ ಹೋಗಿ ತಾನು ಭಾರತದ ಪೌರ ಎಂದು ಘೋಷಿಸುವುದು" ಕಷ್ಟ. ರೂಢಿಯಲ್ಲಿ, ಈ ೬೦ ಲಕ್ಷದಷ್ಟು ಜನ ಬಹುಮಂದಿ ಅನಕ್ಷರಸ್ಥರಿರುವುದರಿಂದ ಮತ್ತು ಸಂವಿಧಾನದಲ್ಲಿರುವ ಈ ಅವಕಾಶ ಕುರಿತು ಏನೊಂದೂ ತಿಳಿದಿಲ್ಲದಿರುವುದರಿಂದ ಇದು ಅಸಾಧ್ಯ ಎಂದು ನಾನು ಬಲ್ಲೆ. ಒಬ್ಬ ಅನಕ್ಷರಸ್ಥ ವ್ಯಕ್ತಿ ಈ ಅನುಚ್ಛೇದದಡಿ ತಾನೇ ಒಬ್ಬ ಪೌರ ಎಂದು ದಾಖಲು ಮಾಡಲು ವಿಫಲನಾದರೆ ಏನಾಗುತ್ತದೆ? ಆದುದರಿಂದ ಭಾಗ–೨ರಲ್ಲಿ ಇದು ಒಂದು ತುಂಬ ಗಂಭೀರವಾದ ದೋಷ ಎಂದು ನಾನು ಹೇಳುತ್ತೇನೆ.

ಈ ಸರ್ಕಾರ, ವಿಭಜನೆಗೆ ಒಪ್ಪಿದ ಪಾಕಿಸ್ತಾನದಿಂದ ಬಂದ ಈ ಎಲ್ಲ ವ್ಯಕ್ತಿಗಳು ತಾವೇ ತಾವಾಗಿ ತಮ್ಮ ಪಾಲಿನ ಯಾವುದೇ ಯತ್ನವಿಲ್ಲದೆ ಭಾರತದ ಪೌರರಾಗುವರು ಎಂಬುದನ್ನು ನಾವು ನಿರೀಕ್ಷಿಸಬೇಕು. ಅವರು ಒಂದು ಘೋಷಣೆ ಮಾಡುವ ಮೂಲಕ ತಾವೇ ರಕ್ಷಿಸಿಕೊಳ್ಳಬಯಸಿದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ಈ ಉಪಬಂಧವನ್ನು ಅವರು ಪಾಲಿಸಲು ವಿಫಲವಾದರೆ, ಕೇವಲ ಶಾಶ್ವತನಿವಾಸ ಕಲ್ಪಿಸುವ ಉಪಬಂಧದಿಂದ ಅವರು ಪೂರ್ಣ ಪೌರತ್ವ ಹಕ್ಕುಗಳಿಗೆ ಅರ್ಹರಾಗುತ್ತಾರೆ. ಅವರು ಜಿಲ್ಲಾ ಮ್ಯಾಜಿಸ್ಟ್ರೇಟರ ಬಳಿ ಹೋಗಿ, ಭಾರತದ ಪೌರರಾಗಬೇಕೆಂದು ಘೋಷಣೆ ಸಲ್ಲಿಸಿದರೆ ಮಾತ್ರ ಪೌರರಾಗಬಹುದು ಎಂದು ಒತ್ತಾಯ ಹೇರಿದರೆ ಅದು ದೌರ್ಜನ್ಯ ಅದು ಅವರ ಮೇಲಿನ ದಬ್ಬಾಳಿಕೆಯ ವರ್ತನೆ.

ಆದುದರಿಂದ ಆ ೬೦ ಲಕ್ಷ ಜನರು ತಮ್ಮ ಪಾಲಿಗೆ ಯಾವುದೇ ವಿಶೇಷ ಪ್ರಯತ್ನವಿಲ್ಲದೆ ಭಾರತದ ಪೌರರಾಗಬಹುದು ಎಂಬ ರೀತಿಯಲ್ಲಿ ಈ ಖಂಡವನ್ನು ತಿದ್ದುಪಡಿ ಮಾಡಬೇಕು ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ.

ಎರಡನೆಯದಾಗಿ ಅಲ್ಪಸಂಖ್ಯಾತರ ಪ್ರಶ್ನೆ ಕುರಿತಂತೆ, ತಾವು ಅಲ್ಪಸಂಖ್ಯಾತ ಸಮಿತಿಯಲ್ಲಿ ನಿಮ್ಮ ನಿಲುವು ಹಾಗೂ ನಿಮ್ಮ ಹಾಗೆ ಯೋಚಿಸುವ ಇತರರಿಗೆ ಒಂದು ವಿಧದ ದಾರಿದೀಪ ಬೆಳಕು ಎಂದು ನಾನು ಹೇಳಲೇಬೇಕು. ಈ ಪ್ರಶ್ನೆ ಕುರಿತಂತೆ ಪೀಠಿಕೆಯ ಮೂರನೆಯ ಖಂಡದ ಅಡಿಯಲ್ಲಿ ಸ್ಥಾನಮಾನದ ಮತ್ತು ಸ್ವಾತಂತ್ರ್ಯದ ಸಮಾನತೆಯನ್ನು ಎಲ್ಲರಿಗೂ ಕೊಡಬೇಕು ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ.

ಮಾನ್ಯರೆ, ಬಹುಸಂಖ್ಯಾತ ಸಮುದಾಯದ ವಿಷಯವಾಗಿ, ಜಂಟಿಮತದಾರ ಕ್ಷೇತ್ರ ಅಥವಾ ಬಹುಮತದಾರರ ಕ್ಷೇತ್ರಗಳು ಇರಬೇಕು. ಜಂಟಿಮತದಾರ ಕ್ಷೇತ್ರ ಕುರಿತಂತೆ ನನ್ನ ನಿವೇದನೆ ಎಂದರೆ, ಅಲ್ಪಸಂಖ್ಯಾತ ಸಮುದಾಯದ ಒಬ್ಬ ಸದಸ್ಯ ಆ ಮತದಾರರ ಕ್ಷೇತ್ರಗಳಿಗೆ ಸ್ಪರ್ಧಿಸಿದರೆ ಬಹುಸಂಖ್ಯಾತ ಸಮುದಾಯದ ಸದಸ್ಯರು ನಿಲ್ಲಲು ಅವಕಾಶ ನೀಡಲಾಗುವುದಿಲ್ಲ. ಅಂದರೆ, ಬಹುಸಂಖ್ಯಾತ ಸಮುದಾಯದ ಸದಸ್ಯರ ಮತದಾರರ ಹಕ್ಕು ಅಲ್ಪಸಂಖ್ಯಾತ ಮತದಾರರ ಸಂಖ್ಯೆಗೆ ಸಮ ಇರುವುದಿಲ್ಲ. ಮತ್ತೆ ಅವರು ಬಹು ಮತದಾರರ ಕ್ಷೇತ್ರಗಳನ್ನು ಹೊಂದಿದ್ದರೆ ಆಗ ಕೂಡ, ಯಾವುದೇ ವ್ಯಕ್ತಿ ನಿಂತು ಅತಿ ಹೆಚ್ಚು ಸಂಖ್ಯೆಯ ಮತಗಳನ್ನು ಗಳಿಸಿದ ಬಳಿಕ ಅಲ್ಪಸಂಖ್ಯಾತ ಸಮುದಾಯದ ಇನ್ನೋರ್ವ ವ್ಯಕ್ತಿ ಆ ಮತದಾರರ ಕ್ಷೇತ್ರವನ್ನು ಪ್ರತಿನಿಧಿಸುತ್ತಾನೆ, ಎಂದೂ ಅತಿ ಹೆಚ್ಚಿ ಸಂಖ್ಯೆಯ ಮತಗಳನ್ನು ಗಳಿಸಿದವನಲ್ಲ ಎಂದೂ ಜಯ ಗಳಿಸಿದವನಿಗೆ ಹೇಳುವುದು ತುಂಬ ಅವಮಾನಕರ. ಅದು ತೀವ್ರ ತೇಜೋವಧೆ ಮಾಡಿದಂತೆ ಮತ್ತು ಮತದಾರರ ಹಕ್ಕು ವಿಷಯವಾಗಿ ಅಲ್ಪಸಂಖ್ಯಾತ ಸಮುದಾಯ ಮತ್ತು ಬಹುಸಂಖ್ಯಾತ ಸಮುದಾಯಗಳ ಈರ್ವರಲ್ಲಿ ಪರಿಪೂರ್ಣ ಸಮಾನತೆ ಇರಬೇಕು.

ಮಾನ್ಯರೆ, ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕಾಗಿ ನನ್ನ ಜೀವನಪೂರ್ತಿ ನಾನು ಕಾರ್ಯಕರ್ತನಾಗಿ ದುಡಿದಿದ್ದೇನೆ. ಕಳೆದ ೩೫ ವರ್ಷಗಳಿಂದ ನಾನು ಕಾರ್ಯಕರ್ತನಾಗಿದ್ದೇನೆ. ಹುದ್ದೆಗಳು, ನೆಲ, ಹಣ, ಆಸ್ತಿ ಇವು ಕುರಿತು ಈ ಸದನದಲ್ಲಿ ಬಜೆಟ್ ಸಂದರ್ಭದಲ್ಲಿ ನಾನೆಂದೂ ಒಂದು ಭಾಷಣಮಾಡಿಲ್ಲ ಎಂಬುದು ಅಲ್ಪಸಂಖ್ಯಾತರಿಗೆಲ್ಲರಿಗೂ ಗೊತ್ತು. ಅನುಸೂಚಿತ ಜಾತಿಗಳ ಸದಸ್ಯರಿಗೆ ಪ್ರಾಮುಖ್ಯ ಮತ್ತು ಆದ್ಯತೆ ಕೊಡಬೇಕು. ಅವರ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ ಅಂತಹ ಕ್ರಮಗಳನ್ನು ಅಂಗೀಕರಿಸುವುದು ಆವಶ್ಯಕ ಎಂದು ನಾನು ಪ್ರತಿಪಾದಿಸುತ್ತೇನೆ.

ಅವರಿಗೆ ಸಾಕಷ್ಟು ಸುರಕ್ಷತೆಗಳನ್ನೊದಗಿಸುವ ೨೯೬ ಮತ್ತು ೩೦೦ನೇ ಖಂಡಗಳ ಬಗ್ಗೆ ನನಗೆ ಒಲವಿದೆ. ಆದರೆ ಸ್ಥಾನಗಳ ಮೀಸಲಾತಿ ವಿಷಯ ಕುರಿತಂತೆ, ನಾನು ಅದಕ್ಕೆ ಬದ್ಧ ವಿರೋಧಿ. ಆಂಗ್ಲೋ-ಇಂಡಿಯನ್ನರಿಗೆ ಹೆಚ್ಚಿನ ಸೌಲಭ್ಯ ಕೊಡಬೇಕೆಂದಾಗ ನಾವು ಈ ಆದ್ಯತೆ ಪ್ರಶ್ನೆ ನಮ್ಮ ಸಂವಿಧಾನದಲ್ಲಿರಬಾರದೆಂಬುದಕ್ಕೆ ಪ್ರಯತ್ನಿಸಿದೆವು ಮತ್ತು ಕಡೆಗೆ ಯಶಸ್ವಿಯಾದೆವು ಹಾಗೂ ಅಲ್ಪಸಂಖ್ಯಾತ

ಆಂಗ್ಲೋ–ಇಂಡಿಯನ್ನರ ಯಾವುದೇ ಕೊರತೆಯನ್ನು ನಾಮನಿರ್ದೇಶನದಿಂದ ತುಂಬಬೇಕೆಂದು ನಿರೀಕ್ಷಿಸಲಾಯಿತು. ಹಾಗಾಗಿ ಅನುಚ್ಛೇದ ೨೯೩ ಮತ್ತಿತರ ಅನುಚ್ಛೇದಗಳನ್ನು ನಾವು ಪಡೆದವು. ಅಲ್ಲಿ ನಾಮ ನಿರ್ದೇಶನವನ್ನು ಯಾವುದೇ ಕೊರತೆಗಳನ್ನು ಸರಿಪಡಿಸಲು ಮನಗಾಣಿಸಲಾಗಿದೆ. ಅಲ್ಲಿ ಯಾವುದೇ ಕೊರತೆಗಳನ್ನು ಸರಿಪಡಿಸಲು ನಾಮನಿರ್ದೇಶನಕ್ಕೆ ಪ್ರಾಮುಖ್ಯ ನೀಡಲಾಗಿದೆ. ಮಾನ್ಯರೆ, ಈಗ, ಮಹಮ್ಮದೀಯರು ಮತ್ತು ಸಿಖ್ಖರು ಹಾಗೂ ಕ್ರೈಸ್ತರನ್ನು ಕುರಿತಂತೆ ಮೀಸಲಾತಿಗೆ ಯಾವ ಸಂದರ್ಭ ಉದ್ಭವಿಸುವುದೇ ಇಲ್ಲ ಮತ್ತು ಇಡೀ ಜನಸಂಖ್ಯೆಯು ಸಿರಿ, ಸಾಮಾಜಿಕ ಪ್ರಭಾವ ಮತ್ತು ಸ್ಥಾನಮಾನ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಬಹುತೇಕ ಏಕರೂಪದ್ದಾಗಿದೆ. ಹಾಗೆ ನೋಡಿದರೆ ಈ ಕೆಲವು ಸಮುದಾಯಗಳು ಬಹುಸಂಖ್ಯಾತ ಸಮುದಾಯಕ್ಕಿಂತ ಬಹುಶಃ ಉತ್ತಮ. ಹರಿಜನರನ್ನು ಕುರಿತಂತೆ ಅನುಸೂಚಿತ ಸದಸ್ಯರು ಸಿರಿ, ಸಾಮಾಜಿಕ ಪ್ರಭಾವ ಮತ್ತು ಸಾಮಾಜಿಕ ಸ್ಥಾನಮಾನಗಳ ವಿಷಯದಲ್ಲಿ ಕೆಳದರ್ಜೆಯವರು ಎಂದು ಹೇಳಬಹುದು. ನಾನು ಅವರ ಸ್ಥಿತಿಯನ್ನು, ಸ್ಥಾನಗಳ ಮೀಸಲಾತಿಗಿಂತ ಇತರೆ ರೀತಿಯಲ್ಲಿ ಮೇಲ್ಮಟ್ಟಕ್ಕೆ ತರಬೇಕು ಎಂದು ಬಯಸುತ್ತೇನೆ. ಈ ಹಕ್ಕಿಗೆ ಸಂಬಂಧಿಸಿದಂತೆ ಕೂಡ ಅನುಚ್ಛೇದಕ್ಕನುಗುಣವಾಗಿ ಯಾವುದೇ ಪ್ರಕರಣ ೬೭ರ ಪ್ರಕಾರ ಸಂಖ್ಯೆಯಲ್ಲಿ ಯಾವುದೇ ಕೊರತೆ ಇದ್ದರೆ ನಾನು ಒಪ್ಪುತ್ತೇನೆ. ಆಗ ನಾವು ನಾಮನಿರ್ದೇಶನದ ಆಲಂಬನ ಹೊಂದಿರುತ್ತೇವೆ ಮತ್ತು ನಾಮನಿರ್ದೇಶನದಿಂದ, ಈ ಸದನವು ಅವರ ಹಕ್ಕನ್ನು ಕಾಪಾಡಬೇಕು ಎಂದು ಆಲೋಚಿಸಿದರೆ ತುಂಬಬಹುದು. ಮೀಸಲಾತಿಯನ್ನು ಹೊಂದಿರಲು ಯಾವ ಸಂದರ್ಭವೂ ಇಲ್ಲ. ಆದರೆ ಯಾವುದೇ ಆವಶ್ಯಕವಿರುವುದಾದರೆ ಮೀಸಲಾತಿಯ ಈ ವಿಧಾನ ಬಹುಸಂಖ್ಯಾತ ಸಮುದಾಯಕ್ಕೆ ತುಂಬ ಅಪಮಾನಕರವಿರುತ್ತದೆ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ತುಂಬಾ ಹಾನಿಕರ. ನಿನ್ನೆ ಗೌರವಾನ್ವಿತ ಶ್ರೀ ಕರೀಮುದ್ದೀನ್ ಸದನದಲ್ಲಿ ತುಂಬ ಒಳ್ಳೆ ಕಾರಣಗಳನ್ನು ಕೊಟ್ಟರು. ಶಾಸನಸಭೆಯಲ್ಲಿ ಸರ್ದಾರ್ ಗುರುಮುಖ್‌ಸಿಂಗ್‌ರವರು ಸಿಖ್ಖರ ಪರವಾಗಿ ತಾವು ಮೀಸಲಾತಿಗಳನ್ನು ಬಯಸಿಲ್ಲ ಎಂದು ಹೇಳಿದರು. ೧೯೪೭ರ ಆಗಸ್ಟ್‌ನಿಂದ ಸನ್ನಿವೇಶ ಬದಲಾಗಿದೆ ಮತ್ತು ನನ್ನ ಮುಸ್ಲಿಮ್ ಮಿತ್ರರು ಮತ್ತು ಸಿಖ್ ಮಿತ್ರರು ಅವರಿಗೆ ಮೀಸಲಾತಿ ಉಪಯುಕ್ತವಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಿದ್ದಾರೆ ಎಂದು ನಾನು ಬಲ್ಲೆ. ಅವರಲ್ಲಿ ಹಲವರು ತಮ್ಮ ಮನಸ್ಸಿನಲ್ಲಿದ್ದುದನ್ನು ವ್ಯಕ್ತಪಡಿಸಿದರು ಎಂದು ನಾನು ತಿಳಿದಿದ್ದೇನೆ. ಆದುದರಿಂದ, ಮೀಸಲಾತಿಗಳನ್ನು ಕುರಿತಂತೆ ಈ ಸದನದಲ್ಲಿ ಅದು ಅವಶ್ಯ ಎಂದು ಆಲೋಚಿಸಲ್ಪಟ್ಟಿದೆ. ಮೀಸಲಾತಿಯನ್ನು ನಾಮನಿರ್ದೇಶನದಿಂದ ಮಾತ್ರ ಮಾಡಬೇಕು: ಹೇಗೆ ಅಧಿಕಾರಶಾಹಿ ಈ ನಾಮನಿರ್ದೇಶನದ ಅಧಿಕಾರವನ್ನು ಉಪಯೋಗಿಸಿತು ಎಂದು ನಾವು ಬಲ್ಲೆವು. ಆದರೆ ರಾಷ್ಟ್ರಪತಿಯ ಬಗ್ಗೆ ಆಲೋಚಿಸಿ ಅವರು ಜನರಿಂದ ಚುನಾಯಿತರಾಗುತ್ತಾರೆಯಾಗಿ, ಅಂತಹ ತಪ್ಪು ತಿಳಿವಳಿಕೆ ಅಥವಾ ಅಂತಹ ಒಂದು ಸನ್ನಿವೇಶ ಉದ್ಭವಿಸಬಹುದು ಎಂದು ನಾನು ತಿಳಿದಿಲ್ಲ. ಮೀಸಲಾತಿಗಳ ವಿಷಯದಲ್ಲಿ, ಸ್ಥಾನಮಾನದ ಸಮಾನತೆಯ ಪ್ರಶ್ನೆ ಬರುತ್ತದೆ ಮತ್ತು ಅದೇ ಕಾಲಕ್ಕೆ ಅಂತಹ ಒಂದು ವ್ಯವಸ್ಥೆ ಪ್ರತ್ಯೇಕತೆಯ ಭಾವನೆಯನ್ನು ಸ್ಥಿರಗೊಳಿಸುವತ್ತ ವಾಲುತ್ತದೆ ಮತ್ತು ಬಹುಸಂಖ್ಯಾತ ಸಮುದಾಯ ಆ ಮೀಸಲಾತಿ ಜಾರಿಯಲ್ಲಿರುವುದರಿಂದ ತಾವು ಮುಂದೆ ಯಾವುದಕ್ಕೂ ಬದ್ಧರಾಗುವುದಿಲ್ಲ ಹಾಗೂ ಭ್ರಾತೃತ್ವ ಶಬ್ದವನ್ನು ಯಾವ ಕಡೆಯ ವಾಕ್ಯದಲ್ಲಿ ಡಾ. ಅಂಬೇಡ್ಕರ್ ಸೇರಿಸಿದ್ದಾರೆಯೋ ಅದು ತನ್ನ ಔಚಿತ್ಯವನ್ನು ಕಳೆದುಕೊಳ್ಳುತ್ತಿದೆ. ನಾನು ನಾವು ನಮ್ಮ ವರ್ತನೆಯಿಂದ ಪ್ರತ್ಯೇಕತೆಯ ಪರಿಜ್ಞಾನವನ್ನು ಉತ್ತೇಜಿಸಬಾರದು. ಆದುದರಿಂದ, ಮಾನ್ಯರೆ, ಮೀಸಲಾತಿ ವಿಷಯದಲ್ಲಿ ನಾನು ಈ ಸದನಕ್ಕೆ ಪ್ರವೇಶಿಸಿದ ದಿನವೇ ಪ್ರತಿಪಾದಿಸುತ್ತ ಬಂದಿರುವುದನ್ನು ಸದನವು ಸಮ್ಮತಿಸುತ್ತದೆ ಎಂಬ ಭರವಸೆ ಹೊತ್ತು ಇದನ್ನು ಶಿಫಾರಸು ಮಾಡುತ್ತಿದ್ದೇನೆ.

ಈ ಸದನದಲ್ಲಿ ಸಂವಿಧಾನದ ಸ್ವರೂಪ ಸಾಮಾಜಿಕ ಮತ್ತು ಆರ್ಥಿಕಕ್ಕಿಂತ ಹೆಚ್ಚು ರಾಜಕೀಯವಾಗಿದೆ ಎಂದು ತುಸು ಟೀಕೆ ಮಾಡಲಾಗಿದೆ. ಪ್ರೊ. ಕೆ.ಟಿ ಷಾ ನಿನ್ನೆ ತಮ್ಮ ಭಾವನೆಗಳನ್ನು ಹೊರಗೆಡವಿದರು ಮತ್ತು

ನಾನು ಅವರು ಹೇಳಿದ ಮಾತನ್ನೂ ಗೌರವಿಸುತ್ತೇನೆ. ಆದರೆ ಈ ಸಂವಿಧಾನದಲ್ಲಿ. ಸಾಮಾಜಿಕ ಮತ್ತು ಆರ್ಥಿಕ ವಿಷಯದೊಂದಿಗೆ ವ್ಯವಹರಿಸುವ ೩೨, ೩೩, ೩೮ ಪ್ರಕರಣಗಳನ್ನು ಹೊಂದಿದ್ದೇವೆ ಎಂದು ವಿನೀತವಾಗಿ ನಿವೇದಿಸಿಕೊಳ್ಳಲೇ? ಮಾನ್ಯರೆ, ನಾವು ಕಾರ್ಯಗತಮಾಡಲು ಸಾಮರ್ಥ್ಯವಿಲ್ಲದ ಸಂವಿಧಾನವನ್ನು ಹೊಂದಬೇಕೆಂದು ನಾನು ಬಯಸುವುದಿಲ್ಲ. ಈ ಸಂವಿಧಾನವು ಇಡೀ ರಾಷ್ಟ್ರಕ್ಕೆ ಉದ್ಯೋಗ ಮತ್ತು ಸೌಕರ್ಯಗಳನ್ನು ಒದಗಿಸುತ್ತದೆ ಮತ್ತು ನಿರ್ದೇಶಕ ತತ್ತ್ವಗಳಲ್ಲಿ ಕೊಡಲಾಗಿರುವ ಈ ಹಕ್ಕುಗಳು ಕೂಡ ನ್ಯಾಯಾಲಯದಲ್ಲಿ ಪ್ರಶ್ನಿಸುವಂಥವು ಎಂದಾಗ ನಮ್ಮ ಉತ್ಸಾಹ ತಂತಾನೆ ಕುಗ್ಗುತ್ತದೆ. ಪ್ರಸ್ತುತ ನಾವು ಮಾಡಲು ಅಸಮರ್ಥರಿರುವುದನ್ನು ಮಾಡುವುದಕ್ಕೆ ವಾಗ್ದಾನಮಾಡುತ್ತಿದ್ದೇವೆ. ಏಕೆಂದರೆ ಪ್ರಸ್ತುತ ಭಾರತ ಸರ್ಕಾರ ಯೂರೋಪಿನ ಇತರ ದೇಶಗಳು ಮಾಡಬಹುದಾದುದನ್ನು ಮಾಡಲು ಸಮರ್ಥ ಎಂದು ನಾನು ತಿಳಿದಿಲ್ಲ. ಈ ಸಂವಿಧಾನ ತುಂಬ ನಮ್ರತೆಯಿಂದ ನಾವೇನು ಮಾಡಬೇಕೆಂದು ಅಪೇಕ್ಷಿಸಲಾಗಿದೆಯೋ ಅದನ್ನು ಮಾಡಲು ನಮ್ಮ ಶಕ್ತ್ಯನುಸಾರ ಪ್ರಯತ್ನಪಡುತ್ತೇವೆ ಎಂದು ಹೇಳುತ್ತದೆ. ಈ ನಿರ್ದೇಶಕ ತತ್ತ್ವಗಳನ್ನು ಕೆಲವು ಸದಸ್ಯರು ಗೌಣವೆಂದು ಪರಿಗಣಿಸಿ ಮಾತನಾಡಿದ್ದಾರೆ. ನಾನು ಈ ನಿರ್ದೇಶಕ ತತ್ತ್ವಗಳನ್ನು ಸಂವಿಧಾನದ ಸಾರ ಎಂದು ಗೌರವಿಸುತ್ತೇನೆ. ಅವು ನಮಗೆ ಒಂದು ಗುರಿಯನ್ನು ಕೊಡುತ್ತವೆ. ಅವು ನಮ್ಮ ಮುಂದೆ ನಮ್ಮ ಗುರಿಯನ್ನು ನಿರ್ದೇಶಿಸುತ್ತವೆ. ಮತ್ತು ನಾವು ಈ ಗುರಿಯನ್ನು ತಲಪಲು ನಮ್ಮಿಂದಾದುದನ್ನು ಮಾಡಬೇಕು. ಈ ಸಂಬಂಧವಾಗಿ ಪ್ರಕರಣಗಳು ೩೨, ೩೩ ಮತ್ತು ಕೆಲವು ಇತರ ಭಾಗಗಳು ನಮ್ಮ ಅಭಿವೃದ್ಧಿಗೆ ಸಾಮಾಜಿಕ ಮತ್ತು ಆರ್ಥಿಕ ಆಧಾರ ಒದಗಿಸುತ್ತವೆ. ಭಾಗ ೩೮ ಸಂಬಂಧವಾಗಿ ಅದು ಜೀವನಮಟ್ಟವನ್ನು ಹೆಚ್ಚಿಸತಕ್ಕದ್ದು ಎಂದು ಹೇಳುತ್ತದೆ. ಆದರೆ ಜೀವನದ ಮಟ್ಟವನ್ನು ಹೇಗೆ ಹೆಚ್ಚಿಸುವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಒಂದು ಬಡದೇಶ ಭಾರತದಲ್ಲಿ ಒಬ್ಬ ಮನುಷ್ಯನ ಸರಾಸರಿಗೆ ಜಗತ್ತಿನ ಇತರ ದೇಶಗಳಿಗೆ ಹೋಲಿಸಿದರೆ ವಾರಕ್ಕೆ ಕೇವಲ ಐದು ಷಿಲಿಂಗ್‌ಗಳು. ಅದೇ ಇತರ ದೇಶಗಳಲ್ಲಿ ಕಡೇ ಪಕ್ಷ ಇಪ್ಪತ್ತು ಪಟ್ಟು ಹೆಚ್ಚು. ಈ ಸಮಸ್ಯೆಯನ್ನು ಹೇಗೆ ಎದುರಿಸಬೇಕು ಎಂದು ಅವು ತಿಳಿದಿಲ್ಲ. ನಾವು ಹಳ್ಳಿಗಳಿಗೆ ಹೋದರೆ ಕುಡಿಯುವ ನೀರು ಕೂಡ ಸುಲಭವಾಗಿ ಲಭ್ಯವಿಲ್ಲ. ಉಡುಪಿನ ವಿಷಯಕ್ಕೆ ಬಂದರೆ, ನಾನು ವರ್ಣಿಸುವುದಕ್ಕಿಂತ ಹೆಚ್ಚು ನಿಮಗೆ ಚೆನ್ನಾಗಿ ಗೊತ್ತು. ಈ ವಿಷಯಗಳನ್ನು ಕುರಿತು, ನಾವು ಸರ್ಕಾರದ ಮೇಲೆ ಹೊಣೆಯನ್ನು ಹೇರಲು ಬಯಸಿದರೆ, ಅದನ್ನು ಸ್ಪಷ್ಟಪಡಿಸಬೇಕು. ಸರ್ಕಾರ, ಸಂಪೂರ್ಣ ಅಸ್ತಿತ್ವಕ್ಕೆ ಬಂದಾಗ ನದಿಗಳನ್ನು ಒಳಸಿ ನೀರಾವರಿ ಮತ್ತು ಜಲವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು, ಅಣೆಕಟ್ಟುಗಳ ನಿರ್ಮಾಣವಾಗುವುದು ಮತ್ತು ಆಹಾರ ಮತ್ತು ಮೇವು ಉತ್ಪಾದನೆ ಹೆಚ್ಚಿಸಲು ಇತರ ಮಾರ್ಗಗಳನ್ನು ಅಳವಡಿಸುವುದು ಇತ್ಯಾದಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು. ಹಾಗೆಯೇ ನಾವು ದೇಶದಲ್ಲಿ ಸರ್ಕಾರ ಉತ್ತಮ ಕುಡಿಯುವ ನೀರು ಒದಗಿಸಬೇಕು ಎಂದು ಖಂಡಿತವಾಗಿ ಹೇಳಬಹುದು. ನೀವು ದೇಶದಲ್ಲಿ ಹಾಲು ಮತ್ತು ಜೇನಿನ ನದಿಗಳು ಹರಿಯಬೇಕೆಂದು ಇಚ್ಛಿಸಿದರೆ ನಾವು ಸರ್ಕಾರ ದನಗಳ ಉಪಯುಕ್ತ ತಳಿಗಳನ್ನು ಕಾಯ್ದುಕೊಂಡು, ರಕ್ಷಿಸಿ ಸುಧಾರಿಸಬೇಕು ಎಂದು ಕೂಡ ಹೇಳಬೇಕು. ಜತೆಗೆ ಉಪಯುಕ್ತ ದನಗಳ ಹತ್ಯೆ ಅದರಲ್ಲಿಯೂ ವಿಶೇಷವಾಗಿ ಹಾಲು ಕರೆಯುವ ಹಸುಗಳು ಮತ್ತು ಎಳೆಯ ಕರುಗಳ ಹತ್ಯೆ ನಿಷೇಧಿಸುವಂತೆಯೂ ಆಗ್ರಹಪಡಿಸಬೇಕು. ವಿನಮ್ರ ನಿವೇದನೆಯೆಂದರೆ ಕಾಂಗ್ರೆಸ್ ಪಕ್ಷ ಅದರ ಸಭೆಯಲ್ಲಿ ನನ್ನ ಈ ಪ್ರತಿಪಾದನೆಯನ್ನು ಸರ್ವಾನುಮತದಿಂದ ಒಪ್ಪಿಕೊಂಡುದನ್ನು ನಾನು ಬಲ್ಲೆ. ಆದರೆ ನನ್ನ ದುರದೃಷ್ಟ ಈ ವಿಷಯವನ್ನು ಈ ಸದನಲ್ಲಿ ಚರ್ಚಿಸಲಾಗಲಿಲ್ಲ ಮತ್ತು ಸಂದರ್ಭ ಬಂದಾಗ, ಸದನವನ್ನು ಮುಂದೂಡಲಾಯಿತು. ಜನ ಉತ್ತಮ ಆಹಾರ, ಉತ್ತಮ ಕುಡಿಯುವ ನೀರು ಮತ್ತು ಹಾಲು ಪಡೆಯುವುದನ್ನು ಕಾಣಲು ಏನಾದರೂ ಕ್ರಮಗಳನ್ನು ಈ ದೇಶದಲ್ಲಿ ತೆಗೆದುಕೊಳ್ಳಬೇಕು ಎಂಬುದಕ್ಕೆ ಭಾರೀ ಬೇಡಿಕೆ ಇದೆ. ನಾನು "ದನಗಳ ಉಪಯುಕ್ತ ತಳಿಗಳು ಮತ್ತು ಉಪಯುಕ್ತ ದನ" ಎಂಬ ಶಬ್ದಗಳನ್ನು ಉಪಯೋಗಿಸುತ್ತಿದ್ದೇನೆ. ಭಾರತದಲ್ಲಿ ಪ್ರತಿ

ಸರ್ಕಾರವೂ, ಮುಸ್ಲಿಮ್ ದೊರೆಗಳು, ಆಫ್ಘಾನಿಸ್ತಾನ ಸರ್ಕಾರ ಮತ್ತು ಈಗ ಬರ್ಮಾ ಕೂಡ ಈ ವಿಷಯವನ್ನು ಕಾನೂನಿನಿಂದ ಎಲ್ಲ ಕಾಲಕ್ಕೂ ಇತ್ಯರ್ಥಗೊಳಿಸಿವೆ. ಬರ್ಮಾದಲ್ಲಿ ಇಂದು, ನಮ್ಮಲ್ಲಿರುವಂತೆ ಯಾವ ಧರ್ಮವನ್ನೂ ಹೊಂದಿಲ್ಲ. ಹಸುವನ್ನು ಪವಿತ್ರ ಎಂದು ಗೌರವಿಸುವುದಿಲ್ಲ. ಅವರು ಹಸುಗಳ ಹತ್ಯೆಯನ್ನು ನಿಷೇಧಿಸಬೇಕು ಎಂದು ಜಾರಿಗೆ ತಂದಿದ್ದಾರೆ. ನಾನು ಅದನ್ನು ಬಯಸುವುದಿಲ್ಲ. ನಾನು ಬಯಸುವುದು, ಉಪಯುಕ್ತ ದನಗಳ ಹತ್ಯೆ ನಿಷೇಧಿಸಬೇಕು ಎಂದು. ಅದೇ ಕಾಲಕ್ಕೆ ಒಂದು ವಿಭಿನ್ನ ಉದ್ದೇಶದಿಂದ, ಈ ಪ್ರಶ್ನೆಯನ್ನು ಪರಿಗಣಿಸುವ ಕೋಟ್ಯಂತರ ಜನರಿಗೆ ತೃಪ್ತಿ ತಂದುಕೊಡುತ್ತದೆ.

ಸದನಕ್ಕೆ ನಾನು ಇನ್ನೊಂದು ಅಹವಾಲು ಸಲ್ಲಿಸುವುದಿದೆ. ನಾವು ಗ್ರಾಮಪಂಚಾಯಿತಿಗಳ ಕುರಿತು ತುಂಬ ಕೇಳಿದ್ದೇವೆ. ಈ ಗ್ರಾಮಪಂಚಾಯಿತಿಗಳು ಹೇಗೆ ಕೆಲಸಮಾಡುತ್ತವೆ ಎಂಬುದು ನಾನು ತಿಳಿದಿಲ್ಲ. ನಾವು ಒಂದು ಪರಿಕಲ್ಪನೆ ಹೊಂದಿದ್ದೇವೆ. ಆ ಪರಿಕಲ್ಪನೆಯನ್ನು ನಾವು ರೂಢಿಯಲ್ಲಿ ತರಲು ಪ್ರಯತ್ನಿಸುತ್ತಿದ್ದೇವೆ. ಹೊಸ ಸಂವಿಧಾನದಡಿ ಮತದಾರರ ಕ್ಷೇತ್ರಗಳನ್ನು ರೂಪಿಸಬೇಕಾದ ಅವರು ರಾಜ್ಯ ಕ್ಷೇತ್ರಗಳ ಮತದಾರರ ಕ್ಷೇತ್ರಗಳನ್ನೂ ಮಾಡಬೇಕು. ನಗರಗಳ ಮತದಾರರ ಕ್ಷೇತ್ರಗಳನ್ನು ಮಾತ್ರ ಮಾಡಬಾರದು ಮತ್ತು ಗ್ರಾಮ ಮತದಾರರ ಕ್ಷೇತ್ರಗಳನ್ನು ಮಾತ್ರ ಮಾಡಬಾರದು ಎಂಬುದನ್ನು ನಿವೇದಿಸಲು ಇಷ್ಟಪಡುತ್ತೇನೆ. ಯಾವ ವ್ಯವಸ್ಥೆಯನ್ನು ಪ್ರಕಟಿಸಬೇಕೆಂದರೆ ಅದರಿಂದ ಗ್ರಾಮೀಣ ಮತ್ತು ನಗರ ಜನರ ನಡುವಿನ ವ್ಯತ್ಯಾಸ, ತುಂಬ ಎಂದರೆ ಉಳ್ಳವರು ಮತ್ತು ಕಡಮೆ ಉಳ್ಳವರ ನಡುವಣ ವ್ಯತ್ಯಾಸವನ್ನು ಎಲ್ಲ ಕಾಲಕ್ಕೂ ತೆಗೆದುಹಾಕಬೇಕು; ಹಾಗಾಗಿ ನಾವು ಒಂದು ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ. ಈಗಷ್ಟೆ ನನ್ನ ಇಂಗ್ಲೆಂಡಿನ ಭೇಟಿಯಲ್ಲಿ, ಒಂದು ಹೊಸ ಕಾರ್ಖಾನೆಯನ್ನು ಆರಂಭಿಸಲು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದಾಗ, ಅವರು "ಹಳ್ಳಿಗಳಿಗೆ ಹೋಗಿ, ನಾವು ಲಂಡನ್ನಿನಲ್ಲಿ ಇನ್ನಾವುದೇ ಕಾರ್ಖಾನೆಗಳಿಗೆ ಅವಕಾಶ ಕೊಡುವುದಿಲ್ಲ" ಎಂದು ಹೇಳುವುದನ್ನು ಕಂಡೆ. ಭಾರತದಲ್ಲಿ ಸ್ಥಾಪಿಸಲಾದ ಎಲ್ಲ ಕಾರ್ಖಾನೆಗಳು ಹೇಗೆ ಇರಬೇಕೆಂದರೆ ಹಳ್ಳಿಗಳಿಗೆ ಅಥವಾ ಹಳ್ಳಿಗಳ ಸಮೂಹಗಳಿಗೆ ಯಾವುದಾದರೂ ವಿಧದ ಉದ್ಯೋಗ ಒದಗಿಸಬೇಕು ಎಂದು ನಾನು ಬಯಸುತ್ತೇನೆ. ಆಡಳಿತ ಎಷ್ಟೆಷ್ಟು ವಿಕೇಂದ್ರೀಕರಿಸಬೇಕೋ ಅಷ್ಟೂ ಕೈಗಾರಿಕೆಗಳನ್ನು ವಿಕೇಂದ್ರೀಕರಿಸಬೇಕು. ಗ್ರಾಮೀಣ ಜನ ಮತ್ತು ನಗರದ ಜನರ ಜೀವನ ವಿಧಾನದ ನಡುವಿನ ಅಸಮತೆಯನ್ನು ನಾವು ನಿರ್ಮೂಲನಮಾಡಬೇಕು. ಪ್ರಸಕ್ತ ಸಮಯದಲ್ಲಿ ನಾವು ಏನು ಕಾಣುತ್ತೇವೆ? ನಗರದ ಜನ ಮತ್ತು ಗ್ರಾಮೀಣ ಜನ ತಮ್ಮ ಜೀವನ ವಿಧಾನದಲ್ಲಿ ಮತ್ತು ಜೀವನದ ದೃಷ್ಟಿಕೋನದಲ್ಲಿ ಪರಸ್ಪರ ಬಲು ದೂರ. ನಗರದ ಜನ ಹಳ್ಳಿಗಳಿಗೆ ಹೋಗಲು ಇಷ್ಟಪಡುವುದಿಲ್ಲ. ಕಾಂಗ್ರೆಸ್ ಹಳ್ಳಿಗಳನ್ನು ತಲುಪಿದೆ ಎಂದು ನಾನು ಬಲ್ಲೆ. ಕಾಂಗ್ರೆಸ್ಸಿಗೆ ಎಲ್ಲ ಗೌರವ. ಆದರೆ, ಕಾಂಗ್ರೆಸ್ಸಿನಲ್ಲಿ ಹಳ್ಳಿಗಳಿಗೆ ಹೋಗಲು ಬಯಸದೆ ಇರುವ ಬಹಳಷ್ಟು ಜನ ಇದ್ದಾರೆ; ಅವರು ಹೋಗಲಾರರು, ಏಕೆಂದರೆ ಅವರ ಜೀವನವಿಧಾನ ವಿಭಿನ್ನ. ನೀವು ಎಂತಹ ಮತದಾರರ ಕ್ಷೇತ್ರಗಳನ್ನು ಸೃಷ್ಟಿಸಬೇಕೆಂದರೆ ಅಲ್ಲಿ ನಗರಗಳು ಮತ್ತು ಹಳ್ಳಿಗಳು ಯಾವುದೇ ಭೇದವಿಲ್ಲದೆ ಒಳಬರುವಂತಿರಬೇಕು; ಜನಸಂಖ್ಯೆಯ ಒಂದು ಲಕ್ಷಕ್ಕೆ ಒಂದು ಮತದಾರರ ಕ್ಷೇತ್ರವಿದ್ದರೆ ನಗರಗಳು ಮತ್ತು ಗ್ರಾಮಗಳನ್ನು ಒಂದು ಮತದಾರರ ಕ್ಷೇತ್ರದಲ್ಲಿ ಸೇರಿಸಬೇಕು. ಕೆಲವು ಗ್ರಾಮೀಣ ಜನ ತಾವೇ ನಗರದ ಒಳಬರುವುದನ್ನು ಇಚ್ಛಿಸದಿರಬಹುದು, ತಮ್ಮ ಸುರಕ್ಷತೆಯ ಮೇಲೆ ದುರಾಕ್ರಮಣವಾಗುತ್ತಿದೆ ಎಂದು ಭಾವಿಸಬಹುದು. ಆದರೆ ಈ ಪ್ರಸ್ತಾವ ಮಾಡುವಲ್ಲಿ ನಾನು ನನ್ನ ಮುಂದೆ ಇಡಿಯಾಗಿ ದೇಶದ ಅತ್ಯುತ್ತಮ ಹಿತಾಸಕ್ತಿಗಳನ್ನು ಹೊಂದಿದ್ದೇನೆ. ನಗರದಲ್ಲಿ ಹಾಗೂ ಹಳ್ಳಿಯಲ್ಲಿ ಎಲ್ಲೆಲ್ಲಿಯೂ ಜೀವನದ ಸೌಕರ್ಯಗಳು ಒಂದೇ ಇರಬಹುದು ಮತ್ತು ಭವಿಷ್ಯದಲ್ಲಿ ಹಳ್ಳಿಯನ್ನು ನಗರದೊಂದಿಗೆ ಸಮನಾಗಿ ತರುವಲ್ಲಿ ಎಲ್ಲ ಪ್ರಯತ್ನಗಳನ್ನೂ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಮಾಡಬೇಕು. ಈ ಪ್ರಶ್ನೆಯನ್ನು ಕುರಿತು ನೀವು ಪರ್ಯಾಲೋಚಿಸುವುದಾದರೆ, ಈ ಸಂವಿಧಾನವನ್ನು ದೇಶದ ಪ್ರಜೆಗಳ ಉತ್ತಮ ಜೀವನ ಮತ್ತು ಉತ್ತಮ ಸೌಖ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಸ್ಫೂರ್ತಿಯುತವಾಗಿ ರೂಪಿಸುವುದನ್ನು ನೀವು ಒಪ್ಪುತ್ತೀರಿ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಒಂದು ಕ್ರಿಯಾಲೋಪ ಮಾನ್ಯರೆ, ಈ ಪ್ರಸ್ತಾವ ಮಂಡಿಸಿದವರು ಮತ್ತು ಚರ್ಚೆಗೆ ಉತ್ತರಿಸಬೇಕಾದವರು ಅಂದರೆ ಡಾ.ಅಂಬೇಡ್ಕರ್ ಸದನದಿಂದ ಗೈರು ಆಗಿರುವುದು ಈ ಸದನಕ್ಕೆ ಚೆನ್ನವೇ ಎಂದು ನಾನು ಕೇಳಬಹುದೆ? ಅವರಿಗೆಂದು ಇಲ್ಲಿ ಯಾರನ್ನಾದರೂ ನಿಯೋಜಿಸಲಾಗಿದೆಯೇ?

**ಮಾನ್ಯ ಉಪಸಭಾಧ್ಯಕ್ಷರು** : ಹೌದು

**ಶ್ರೀ ಅಲಘುರಾಯ್ ಶಾಸ್ತ್ರಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಉಪಸಭಾಧ್ಯಕ್ಷರೆ, ಇದೀಗ ತಾನೆ ಶ್ರೀ ಕಾಮತ್ ಬೊಟ್ಟು ಮಾಡಿದ ವಿಷಯ ತುಸುಗಟ್ಟಿ ಎಂದು ತೋರುತ್ತದೆ. ಎಂದರೆ ಪ್ರಭಾರಿ ಸದಸ್ಯ ಇಲ್ಲಿ ಮಾಡಲಾದ ಭಾಷಣಗಳಿಂದ ಲಾಭಪಡೆಯದಿದ್ದರೆ ಮತ್ತು ಸದನದಲ್ಲಿ ಮಾತನಾಡಿದುದಕ್ಕೆ ಕಿವಿಗೊಡದಿದ್ದರೆ ಚರ್ಚೆ ಮಾಡುವುದು ವ್ಯರ್ಥ. ಆದುದರಿಂದ ಇಲ್ಲಿ ಅವರು ಹಾಜರಿರಲು ಸಾಧ್ಯವಿಲ್ಲದಿರುವವರೆಗೆ ಚರ್ಚೆಯನ್ನು ಮುಂದೂಡಬೇಕೆಂದು ನಾನು ಕೋರುತ್ತೇನೆ. ಹೇಗೇ ಇರಲಿ, ಇಲ್ಲಿ ಹೇಳಲಾದುದನ್ನು ಗುರುತು ಹಾಕಿಕೊಂಡು ಅನಂತರ ಅವರಿಗೆ ನೆರವಾಗಲು ಯಾರನ್ನಾದರೂ ನಿಯೋಜಿಸಿದ್ದರೆ ಏನೂ ಹಾನಿ ಇಲ್ಲ. ಇಲ್ಲದಿದ್ದರೆ, ಇಡೀ ಚರ್ಚೆ ವ್ಯರ್ಥವೆಂದು ತೋರುತ್ತದೆ ಹಾಗೂ ಸಂವಿಧಾನದ ತಿದ್ದುಪಡಿ ಮಾಡುವಲ್ಲಿ ಯಾವುದೇ ಉಪಯೋಗವಿರುವುದಿಲ್ಲ.

ಆದುದರಿಂದ ತಾವು ಕರಡು ಮಾರ್ಗದರ್ಶನ ಮಾಡುವ ಪ್ರಭಾರಿ ಸದಸ್ಯ ಇಲ್ಲಿ ಹಾಜರಿರಬೇಕು ಅಥವಾ ಅವರ ಯಾರಾದರೂ ಪ್ರತಿನಿಧಿ ಇಲ್ಲಿರಬೇಕು ಎಂದು ಸ್ಪಷ್ಟ ಆದೇಶ ಕೊಡಬೇಕು. ಎಲ್ಲಿಯವರೆಗೆ ಈ ಏರ್ಪಾಟು ಇಲ್ಲವೋ ಅಲ್ಲಿಯವರೆಗೆ ಚರ್ಚೆ ಮುಂದೂಡಬೇಕು.

**ಶ್ರೀ ಸತ್ಯನಾರಾಯಣ ಸಿನ್ಹಾ** (ಬಿಹಾರ್ : ಸಾಮಾನ್ಯ) : ಶ್ರೀ ಸಾದುಲ್ಲ ಕರಡು ರಚನಾಸಮಿತಿಯಲ್ಲಿದ್ದವರು ಡಾ.ಅಂಬೇಡ್ಕರರನ್ನು ಪ್ರತಿನಿಧಿಸುವರು.

**ಮಾನ್ಯ ಉಪಸಭಾಧ್ಯಕ್ಷರು** : ಇಲ್ಲಿ ಕರಡು ರಚನಾಸಮಿತಿ ಸದಸ್ಯರು ಇದ್ದು ಗೌರವಾನ್ವಿತ ಡಾ. ಅಂಬೇಡ್ಕರರಿಗೆ ಪ್ರತಿನಿಯೋಜಿಸಲ್ಪಟ್ಟವರು. ನಮ್ಮ ಅಗತ್ಯ ಚೆನ್ನಾಗಿ ಪೂರೈಕೆಯಾಗಿದೆ ಎಂದು ನಾನು ತಿಳಿಯುತ್ತೇನೆ.

**ಶ್ರೀ ಲಾಲಾ ರಾಜ್ ಕನ್ವರ್** (ಒರಿಸ್ಸಾ ಸಂಸ್ಥಾನಗಳು) ಮಾನ್ಯರೆ, ಹಿಂದಿನ ಕುರ್ಚಿಯಲ್ಲಿ ಕುಳಿತ ಮತ್ತು ಈ ಸದನದ ಒಬ್ಬ ಸಾಮಾನ್ಯವಾಗಿದ್ದ ಸ್ತಬ್ಧ ಸದಸ್ಯನಾಗಿ ನಾನು ಮೌಲ್ಯಯುತವೆಂದು ಕೆಲವು ಅಭಿಪ್ರಾಯಗಳನ್ನು ತಿಳಿಸಲು ತಮ್ಮ ಮತ್ತು ಸದನದ ಸಮ್ಮತಿ ಕೋರುತ್ತೇನೆ. ನನ್ನ ಅಭಿಪ್ರಾಯಗಳು, ಕೇವಲ ಒಂದು ವಿಷಯಕ್ಕೆ ಸೀಮಿತ ಆದರೂ ಅದು ಒಂದು ಬಹು ಮುಖ್ಯ ವಿಷಯ, ನಾವು ಎದುರಿಸಬೇಕಾಗಿರುವ ಸಮಸ್ಯೆ, ಅದು ರಾಷ್ಟ್ರಭಾಷೆಯ ಪ್ರಶ್ನೆ.

**ಮಾನ್ಯ ಉಪಸಭಾಧ್ಯಕ್ಷರು** : ಈಗ ಅದರ ವಿವರಣಾತ್ಮಕ ಪರಿಶೀಲನೆ ಆವಶ್ಯಕವೇ ಎಂಬುದನ್ನು ಪರಿಗಣಿಸುವುದು ನಿಮಗೇ ಬಿಟ್ಟಿದ್ದು.

**ಶ್ರೀ ಲಾಲಾ ರಾಜ್ ಕನ್ವರ್** : ನಾನು ವಿವರಗಳಿಗೆ ಹೋಗುವುದಿಲ್ಲ. ನಾನು ಸಾಮಾನ್ಯ ಅಭಿಪ್ರಾಯಗಳಿಗೆ ಸೀಮಿತಗೊಳಿಸುತ್ತೇನೆ. ಸಂವಿಧಾನ ಜನರ ಇಚ್ಛೆ ಮತ್ತು ಜನರ ಧ್ವನಿಯನ್ನು ಬಿಂಬಿಸಲು ಬದ್ಧ ಆದುದರಿಂದ ಲ್ಯಾಟಿನ್ ಹೇಳಿಕೆ "ಜನಾಭಿಪ್ರಾಯವೇ ದೇವರ ಅಭಿಪ್ರಾಯ" ಎಂಬಂತೆ ನಾನು ದೇವ ಧ್ವನಿಯನ್ನು ನಂಬುತ್ತೇನೆ. ಹಾಗೆಂದರೆ, ಸಂವಿಧಾನದ ಭಾಷೆಯ ಪ್ರಶ್ನೆಯಲ್ಲ. ಆದರೆ ರಾಷ್ಟ್ರದ ಭಾಷೆ ಮತ್ತು ವಿಶಾಲವಾದ ದೇಶದ ಭಾಷೆ. ಮಾನ್ಯರೆ, ಸಾಂದ್ರೀಕೃತ ಜ್ಞಾನ ಮತ್ತು ದೈವಿಕ ಜ್ಞಾನ ಇವುಗಳ ಆಗರವಾಗಿರುವ ಮಹಾನ್ ಜರ್ಮನ್ ತತ್ತ್ವಜ್ಞಾನಿ ಷೋಪನ್‌ಹಾವ್ "ಇಡೀ ಜಗತ್ತಿನಲ್ಲಿ ಉಪನಿಷತ್ತುಗಳಂತೆ ಉನ್ನತಕ್ಕೆ ಒಯ್ಯುವ ಅಧ್ಯಯನ ಬೇರೊಂದಿಲ್ಲ. ಅವು ನನ್ನ ಜೀವನಕ್ಕೆ ನೆಮ್ಮದಿ ತಂದಿವೆ ಹಾಗೂ ನನ್ನ ಸಾವಿನ ಸಾಂತ್ವನ ಆಗಿವೆ" ಎಂದು ಹೇಳುತ್ತಾರೆ. ಆ ಉಪನಿಷತ್ತುಗಳಲ್ಲಿ ಹೀಗೆ ಬರೆದಿದೆ:

ಒಬ್ಬ ವ್ಯಕ್ತಿಯ ಬೌದ್ಧಿಕಚಿಂತನೆ, ವಾಕ್‌ರೂಪದಲ್ಲಿ ಅಭಿವ್ಯಕ್ತಿ ಪಡೆಯುತ್ತದೆ.
ಮಾತು, ಕೃತಿರೂಪ ಹೇಳುತ್ತದೆ.
ಅವನ ಕೃತಿಯಂತೆ ಅವನ
ವ್ಯಕ್ತಿತ್ವ ಎದ್ದು ತೋರುತ್ತದೆ ಎಂದರೆ ಕೃತಿ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಭಾಷೆ ನಮ್ಮ ಅತ್ಯಂತ ಒಳ ಆಲೋಚನೆಗಳ ಬಾಹ್ಯ ಅಭಿವ್ಯಕ್ತಿ ಮತ್ತು ಒಂದು ಸಾಮಾನ್ಯ ಭಾಷೆಯ ಅಗತ್ಯ ಏಕೆಂದರೆ ಅದು ಯಾವುದೇ ಇತರ ಒಂದು ಸಾಧನ ಮಾಡದ ರೀತಿಯಲ್ಲಿ ಏಕತೆ ಮತ್ತು ಸಾಂಗತ್ಯವನ್ನು ಉಂಟುಮಾಡುತ್ತದೆ. ಪ್ರಾಂತೀಯ ಗಡಿಗಳ ಪುನರ್ವಿಂಗಡಣೆಯ ಸಂದರ್ಭದಲ್ಲಿಯಂತೆ, ಶ್ರೇಷ್ಠತೆಗೆ ಹೋರಾಡುತ್ತಿರುವ ಕೆಲವು ಪ್ರಾಂತೀಯಭಾಷೆಗಳ ಒಲವಿನಲ್ಲಿ ಒಂದು ಕೂಗಾಟ ಇದೆ. ಇದು ಕೇವಲ ಸ್ವಾಭಾವಿಕ. ಆದರೆ ಒಂದು ಭಾಷೆ ಮತ್ತು ಇನ್ನೊಂದರ ನಡುವೆ ವಿರೋಧ ಇರಲಿ ಪ್ರಾಂತ್ಯಗಳನ್ನು ಭಾಷಾವಾರು ಆಧಾರದ ಮೇಲೆ ಅಥವಾ ಇತರ ಯಾವುದೇ ಆಧಾರದ ಮೇಲೆ ರೂಪಿಸಬೇಕೋ ಇಲ್ಲವೇ ಅಂತೆಯೇ ಬಿಡಬೇಕೋ ಎಂಬುದು ರಾಷ್ಟ್ರಭಾಷೆಯ ಪ್ರಶ್ನೆಯೊಂದಿಗೆ ಏನೊಂದೂ ತಾಕಲಾಟ ತರುವುದಿಲ್ಲ. ಪ್ರಸ್ತುತ ಸರ್ಕಾರ ಈ ವಿಷಯದಲ್ಲಿ ಒಂದು ಬೃಹತ್ ಮಾರ್ಗದರ್ಶನ ಕೊಡಬಹುದು. ಇಂಗ್ಲಿಷ್‌ಭಾಷೆ ನಮ್ಮ ಹಳೆಯ ವಿದೇಶೀ ಯಜಮಾನರ ಪ್ರಾಬಲ್ಯದಡಿ ಕಾರ್ಯಸಾಧ್ಯವಾಗಿ ಈ ದೊಡ್ಡ ದೇಶದ ಉದ್ದಗಲಕ್ಕೂ ಸಾಮಾನ್ಯ ಭಾಷೆಯಾಯಿತು. ಆದರೆ ರಾಷ್ಟ್ರ ಭಾಷೆಯಾಗಿರುವಲ್ಲಿ, ಅದು ಬುದ್ಧಿವಂತರ ಭಾಷೆ ಮಾತ್ರ ಆಗಿರದೆ ಸಾಮಾನ್ಯ ಜನರ ಭಾಷೆಯೂ ಆಗಿರಬೇಕು. ಅದು ಎಲ್ಲ ವರ್ಗದ ಜನರ ಅವರಲ್ಲೂ ಬಹು ಜನರು ಮಾತನಾಡುವ ಭಾಷೆ ಮತ್ತು ಅರ್ಥಮಾಡಿಕೊಳ್ಳುವ ಭಾಷೆ ಆಗಿರಬೇಕು. ಭಾರತದ ಭಾವಿ ಜನಸಂಖ್ಯೆಯನ್ನು ಪರಿಗಣಿಸಿದಲ್ಲಿ ನಾವು ಬಂಗಾಳಿ, ಮರಾಠಿ, ಗುಜರಾತಿ, ಪಂಜಾಬಿ, ತೆಲುಗು ಅಥವಾ ಒರಿಯಾಗಳಂಥ ಪ್ರಾಂತೀಯಭಾಷೆಗಳನ್ನು ಕಾಣುತ್ತೇವೆ. ಅವುಗಳಲ್ಲಿ ಯಾವುದನ್ನೂ ಭಾರತದ ಬಹುಸಂಖ್ಯಾತ ಜನ ಮಾತನಾಡುವುದಿಲ್ಲ ಅಥವಾ ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ಈ ಸ್ಥಿತಿಯಲ್ಲಿ ಬಹುಮಟ್ಟಿಗೆ ಹಕ್ಕು ಗಳಿಸಿಕೊಳ್ಳಬಹುದಾದ ಒಂದೇ ಭಾಷೆ ಎಂದರೆ ಹಿಂದಿ. ಅದನ್ನು ಉತ್ತರಭಾರತದಲ್ಲಿ ಮಾತ್ರವಲ್ಲದೆ ಮಧ್ಯಪ್ರಾಂತ್ಯ, ರಜಪುತಾನ, ಬಿಹಾರ ಮತ್ತಿತರ ಕಡೆಗಳಲ್ಲಿ ಮಾತನಾಡಲಾಗುತ್ತದೆ. ಆದರೆ ಮಾತನಾಡುವ ಹಿಂದಿಯು ವಿದ್ವಾಂಸರ ಮತ್ತು ಬುದ್ಧಿವಂತರ ಸಂಸ್ಕೃತೀಕರಿಸಿದ ಹಿಂದಿಯಲ್ಲಿ. ಹಾಗೆ ನೋಡಿದರೆ ದೇಶದ ಭಾರೀ ಜನಸಂಖ್ಯೆಯೊಂದಿಗೆ ಹೋಲಿಸಿದರೆ ಅವರ ಶೇಕಡಾವಾರು ಎಷ್ಟಿದ್ದೀತು. ಆದರೆ ಹಿಂದಿ ಪೂರಾ ಚಿಕ್ಕ, ಚೊಕ್ಕ ಮತ್ತು ಸರಳ ಶಬ್ದಗಳ, ಶುದ್ಧವಾದ, ನಿರ್ಮಲವಾದ ಮತ್ತು ಕಲಬೆರಕೆ ಇಲ್ಲದ ಹಿಂದಿ ಬಹುಸಂಖ್ಯೆಯ ಜನರಿಂದ ಮಾತನಾಡುವ ಭಾಷೆ. ಇದನ್ನು ಶಿಕ್ಷಣವಿಲ್ಲದವರೂ, ಮಹಿಳೆಯರು ಮತ್ತು ಮಕ್ಕಳು ಪೂರಾ ಉಪಯೋಗಿಸಿ ಮುಕ್ತವಾಗಿ, ಮುಗ್ಧವಾಗಿ ಮಾತನಾಡುತ್ತಾರೆ. ಸಂಸ್ಕೃತ ಭಾರತದ ಬಹುತೇಕ ಭಾಷೆಗಳ ತಾಯಿಯಾಗಿದ್ದರೂ, ಭಾರತೀಯಭಾಷೆಗಳಿಗೆ ಮಾತ್ರವಲ್ಲದೆ ವಿಶ್ವದ ಭಾಷೆಗಳ ತಾಯಿ ಕೂಡವಾದರೂ, ನಮ್ಮ ವೇದಗಳು, ಉಪನಿಷತ್ತುಗಳು, ಶಾಸ್ತ್ರಗಳು, ರಾಮಾಯಣ ಮತ್ತು ಮಹಾಭಾರತ ಹಾಗೂ ಗೀತೆ ಇವೆಲ್ಲವನ್ನು ಬರೆಯಲಾದ ಶ್ರೇಷ್ಠ ಭಾಷೆಯಾಗಿದ್ದರೂ ಮತ್ತು ಸರ್ ವಿಲಿಯಂ ಜೋನ್ಸ್ ಎಂಬ ಮಹತ್ತ್ವದ ಪೌರಸ್ತ್ಯ ತಜ್ಞನ ಮಾತುಗಳಲ್ಲಿ, "ಸಂಸ್ಕೃತವು ಗ್ರೀಕ್‌ಗಿಂತ ಹೆಚ್ಚು ಪರಿಪೂರ್ಣ, ಲ್ಯಾಟಿನ್ನಿಗಿಂತ ಹೆಚ್ಚು ಸಮೃದ್ಧಿಯಾಗಿರುವ ಮತ್ತು ಇಟಾಲಿಯನ್ನಿಗಿಂತ ಮಧುರ" ಎಂದಾದರೂ ಅದು ಸಾಮಾನ್ಯ ಜನರ ಭಾಷೆಯಲ್ಲಿ ಹಾಗೂ ಹಿಂದಿಯಲ್ಲಿ ನಮ್ಮ ದೈನಂದಿನ ಅಗತ್ಯಗಳಿಗೆ ನಾವು ಅದನ್ನವಲಂಬಿಸಬೇಕು ಎಂಬುದು ಅಪೇಕ್ಷಣೀಯವಲ್ಲ. ಅಲ್ಲದೆ ಸಂಸ್ಕೃತ, ಲ್ಯಾಟಿನ್, ಗ್ರೀಕ್ ಮತ್ತು ಹೀಬ್ರೂಗಳಂತೆ ಹಲವು ಶತಮಾನಗಳ ಕಾಲ ಮೃತಭಾಷೆಯಾಗಿದೆ ಮತ್ತು ಅದ್ಭುತಗಳ ಮತ್ತು ಅನುಸರಿಸಲಾಗದ ವಿಶ್ವದ ಮಹತ್ತ್ವದ ವ್ಯಾಕರಣಪಂಡಿತನಾದ ಪಾಣಿನಿಯ ಅಷ್ಟಾಧ್ಯಾಯಿ ಇದ್ದರೂ ಸಂಸ್ಕೃತ ಕಲಿಯಲು ಹೆಚ್ಚು ಕಷ್ಟ. ಒಂದು

ರಾಷ್ಟ್ರಭಾಷೆಯ ಪರೀಕ್ಷೆ ಅದರ ಸರಳತೆ ಮತ್ತು ದೇಶದಲ್ಲಿ ಪ್ರತಿಯೊಬ್ಬರೂ ಸುಲಭವಾಗಿ ಅರ್ಥಮಾಡಿಕೊಳ್ಳುವುದು ಆಗಿರಬೇಕು. ಈಗ ಯಾರೂ ವಿಶ್ವದಲ್ಲಿ ಸಂಸ್ಕೃತ ಅಕ್ಷರ ಹೆಚ್ಚು ಪರಿಪೂರ್ಣ ಮತ್ತು ವೈಜ್ಞಾನಿಕ ಹಾಗೂ ತುಂಬ ಸ್ವಾಭಾವಿಕ ಮತ್ತು ಇತರ ಭಾಷೆಗಳ ಅಕ್ಷಗಳಂತಲ್ಲ ಎಂಬುದನ್ನು ನಿರಾಕರಿಸುವುದಿಲ್ಲ. ಉದಾಹರಣೆಗೆ: ಅದರ ವರ್ಣಮಾಲೆಯ ಮೊದಲ ಅಕ್ಷರ 'ಅ' ಈ ಅಕ್ಷರ ನೀವು ಸಂಬೋಧಿಸಬೇಕಾದರೆ ಬಾಯಿ ತಾನೇ ತಾನಾಗಿ ತೆರೆಯುವುದು ಮತ್ತು ಅದರಿಂದ ಮೂಡುವ ಶಬ್ದ ಬಾಯಿ ತೆಗೆದಾಗ ಕೇಳುವುದು. ಅಂತೆಯೇ ಸಂಸ್ಕೃತ ವರ್ಣಮಾಲೆಯ ಕೊನೆ ಅಕ್ಷರ ಅಂದರೆ ಅಂ ಉಚ್ಚರಿಸಿದಾಗ ಬಾಯಿ ತಾನೆ ಮುಚ್ಚುವುದು. ಅಂದರೆ ಅದು ಒಂದ ಅರ್ಥದಲ್ಲಿ ದೇವನಾಗರಿ ವರ್ಣಮಾಲೆಯ ಕೊನೆ ಅಕ್ಷರವಲ್ಲ ಎಂಬುದನ್ನು ಮರೆಯುವುದಿಲ್ಲ ಏಕೆಂದರೆ ಅದರ ಅನಂತರ ಅನುಸರಿಸಿ ಬರುವ ಅಕ್ಷರಗಳು ಯ ರ ಲ ವ. ಆದರೆ ಅವು ಇತರ ಅಕ್ಷರಗಳ ಉಪಉತ್ಪನ್ನಗಳು. ಉದಾಹರಣೆಗೆ ಯ. ಇದು 'ಈ' ನಿಂದಲೂ ರ ರೀ ನಿಂದಲೂ ಲ ಲ್ರೀ ನಿಂದಲೂ ವ ಇದು **'OO'** ನಿಂದ ಭಿನ್ನವಾದ ಉತ್ಪನ್ನಗಳು. ಇದು ಸಂಸ್ಕೃತ ವರ್ಣಮಾಲೆಯ ಪರಿಪೂರ್ಣತೆಯ ಕಾರಣ ಈ ದೇಶದಲ್ಲಿ ಬಹುಸಂಖ್ಯೆಯ ಜನರಿಂದ ಮಾತನಾಡಲಾಗುವ ಹಿಂದಿ ಬರಹಕ್ಕೆ ಇಳಿಸಿದಾಗ ದೇವನಾಗರಿ ಲಿಪಿಯಲ್ಲಿ ಬರೆಯಬೇಕು. (ಹರ್ಷೋದ್ಗಾರ). ಸ್ವಲ್ಪಕಾಲದ ಹಿಂದೆ ಮೂಲ ಇಂಗ್ಲಿಷ್ ಎಂದು ಕಲಿಸಲು ಒಂದು ಚಳವಳಿ ನಡೆಯಿತು. ಹಿಂದಿ ಬಗೆಗೂ ಅಂತಹ ಕ್ರಮಗಳನ್ನು ತೆಗೆದುಕೊಂಡರೆ, ಯಾರು ಸದನದಲ್ಲಿ ಹಿಂದಿ ಮಾತನಾಡುವುದಿಲ್ಲವೋ ಬರೆಯುವುದಿಲ್ಲವೋ ಅವರು ಕನಿಷ್ಠ ಸಮಯದಲ್ಲಿ ಕಲಿಯಲು ಸುಲಭವಾಗುವುದು. ಇಲ್ಲಿಯವರೆಗಿನ ಸ್ಥಿತಿ ಮತ್ತು ಪ್ರಸಕ್ತ ಪರ್ಷಿಯನ್ ಲಿಪಿಯಲ್ಲಿ ಬರೆಯಲಾದ ಉರ್ದುವಿನ ಸ್ಥಿತಿಯ ದೃಷ್ಟಿಯಿಂದ ಹಾಗೂ ಈ ದೇಶದಲ್ಲಿ ಸುಮಾರು ೩೧/೩ ಅಥವಾ ೪ ಕೋಟಿಗಳಷ್ಟು ನಮ್ಮ ದೇಶದ ಉದ್ದಗಲ ಪೂರಾ ಚದುರಿರುವ ನಮ್ಮ ಮುಸ್ಲಿಮ್ ಸೋದರರು ಅದನ್ನು ಸಾಮಾನ್ಯವಾಗಿ ಉಪಯೋಗಿಸುವ ಭಾಷೆ ಎಂಬ ದೃಷ್ಟಿಯಿಂದ ಮತ್ತು ಅದರ ಲಿಪಿ ಒಂದು ವಿಧದ ಶೀಘ್ರಲಿಪಿ ಎಂಬ ಅದರ ಸ್ವಾಭಾವಿಕ ಅರ್ಹತೆ ದೃಷ್ಟಿಯಿಂದ ನಾವು ಉರ್ದುವಿಗೂ ಸ್ವಲ್ಪ ಗಮನ ಕೊಡಬೇಕಾದುದು ಅಪೇಕ್ಷಣೀಯ ಎಂದು ತಿಳಿಯುತ್ತೇನೆ. ಆದರೆ ಅದು ರಾಷ್ಟ್ರದ ಪ್ರಾಥಮಿಕಭಾಷೆ ಎಂದೂ ಆಗದು ಮತ್ತು ಅದು ಏಕೆ ಆಗಬೇಕು ಎಂಬುದಕ್ಕೂ ಕಾರಣವಿಲ್ಲ. ರಾಷ್ಟ್ರೀಯ ಮತ್ತು ಅಧಿಕೃತಭಾಷೆ ದೇವನಾಗರಿ ಲಿಪಿಯಲ್ಲಿ ಬರೆಯುವ ಹಿಂದಿಯೇ ಇರಬೇಕು. ಆದರೆ ನನ್ನ ಅಭಿಪ್ರಾಯದಲ್ಲಿ ಉರ್ದು ದ್ವಿತೀಯ ಭಾಷೆ ಇರಬೇಕು. ಏಕೆಂದರೆ ಅದು ಒಂದು ವಿಧದ ಶೀಘ್ರಲಿಪಿ ಮತ್ತು ಬರೆಯಲು ಕಡಮೆ ಸಮಯ ತೆಗೆದುಕೊಳ್ಳುತ್ತದೆ ಹಾಗೂ ಇತರ ಭಾಷೆಗಳಿಗಿಂತ ತುಂಬಾ ಕಡಿಮೆ ಜಾಗ ತೆಗೆದುಕೊಳ್ಳುತ್ತದೆ. ಉದಾಹರಣೆಗೆ: "ಮುಂತಾಜಿಮ್" ಎಂಬ ಶಬ್ದ ತೆಗೆದುಕೊಳ್ಳಿ. ಅದನ್ನು ಉರ್ದುವಿನಲ್ಲಿ ಒಂದು ಸಂಯುಕ್ತಾಕ್ಷರ ಎಂಬಂತೆ ಬರೆಯಲಾಗುತ್ತದೆ. ಆದರೆ ನೀವು ಅದನ್ನು ಹಿಂದಿಯಲ್ಲಿ ದೇವನಾಗರಿ ಲಿಪಿಯಲ್ಲಿ ರೋಮ್ ಇಂಗ್ಲೀಷ್‌ನಲ್ಲಿ ಬರೆದರೆ ಅದು ೭ ಅಥವಾ ೮ ಬೇರೆ ಅಕ್ಷರಗಳನ್ನು ಹೊಂದಿರುತ್ತದೆ. ಅಂಥದೇ ಉದಾಹರಣೆಗಳು 'ಮುಂತಾಜಿರ್', 'ಮುಂತಾಷಿರ್', 'ಮುಂತಾಕಿಬ್' ಮತ್ತು ಇತರ ಅಂತಹ ಸಂಯೋಜನೆಗಳು ನೂರಾರು. ಅವು ಪ್ರಸ್ತುತ ಏಕಾತ್ಮಕ ಶಬ್ದಗಳನ್ನು ಧ್ವನಿಸುತ್ತವೆ. ಆದುದರಿಂದ ದೇಶದಲ್ಲಿ ಗಮನಾರ್ಹ ಸಂಖ್ಯೆಯ ಜನರು ಪ್ರಸಕ್ತ ಮಾತನಾಡುವುದು ಉರ್ದು ಎಂಬ ಕಾರಣಕ್ಕಾಗಿ, ವಿಶೇಷವಾಗಿ ದೆಹಲಿ, ಆಗ್ರಾ, ಲಕ್ನೋ ಮತ್ತಿತರ ಸ್ಥಳಗಳಂತಹ ದೊಡ್ಡ ನಗರಗಳಲ್ಲಿ ಹಾಗೂ ದೆಹಲಿ ಸುತ್ತ ಹಳ್ಳಿಗಳಲ್ಲಿ, ಉತ್ತರ ಭಾರತದ ಜನಸಂಖ್ಯೆ ಇರುವ ದೊಡ್ಡ ಕೇಂದ್ರಗಳಲ್ಲಿ ಮಾತನಾಡುವುದು ಹಾಗೂ ಅದು ಒಂದು ವಿಧದ ಶೀಘ್ರಲಿಪಿಯಂತಿದ್ದು ಕೆಲವು ಅನುಕೂಲಗಳನ್ನು ಹೊಂದಿರುವುದರಿಂದ ನಾವು ಉರ್ದುವನ್ನು ದೇಶದ ದ್ವಿತೀಯ ಭಾಷೆಯಾಗಿ ನೋಡಬೇಕು ಎಂದು ನಾನು ನಿವೇದಿಸಿಕೊಳ್ಳುತ್ತೇನೆ. ಅದೂ ಅಲ್ಲದೆ, ನಾವು ಅದನ್ನು ದ್ವಿತೀಯ ಭಾಷೆಯಾಗಿ ಅಳವಡಿಸಿದರೆ, ಅದು ಮುಸ್ಲಿಮ್ ಜನದೊಡನೆ ಸೌಹಾರ್ದದ ಸಂಕೇತವಾಗುತ್ತದೆ. ಮೇಲಾಗಿ ನಾನೀಗಾಗಲೇ ಹೇಳಿದಂತೆ ಮುಸ್ಲಿಮ್ ಜನಸಂಖ್ಯೆ

೩⁰/₀ಯಿಂದ ೪ ಕೋಟಿಗಳಿಗೆ ಕಡಿಮೆ ಇಲ್ಲ ಮತ್ತು ಒಂದು ಜಾತ್ಯತೀತ ದೇಶದಲ್ಲಿ ಅಂತಹ ಒಂದು ಭಾವನೆಯನ್ನು ಮೂಡಿಸುವಲ್ಲಿ ಅದು ನಮಗೆ ಶ್ರೇಯಸ್ಕರವೆನಿಸುತ್ತೆ. ವಿಭಜನೆಯ ಪರಿಣಾಮಗಳು ಮತ್ತು ಅದರಿಂದಾದ ಹತ್ಯಾಕಾಂಡ ನಮ್ಮನ್ನು ಎಷ್ಟೇ ಬಾಧಿಸಿದರೂ ನಾವು ವಿಷಯಗಳ ವಾಸ್ತವ ದೃಷ್ಟಿ ತೆಗೆದುಕೊಳ್ಳಬೇಕು. ಏನೇ ಆಗಲಿ ನಾವು ಕೋಪ, ಪ್ರತೀಕಾರಗಳಿಂದ ಏನೂ ಸಾಧಿಸಲಾಗುವುದಿಲ್ಲ. ಈ ಸಮಯದಲ್ಲಿ ನಾನು ಭಾರತದ ಒಂದು ದೂರದ ಭಾಗವಾದ ಅಂದರೆ ಒರಿಸ್ಸಾ ಸಂಸ್ಥಾನಗಳನ್ನು ಪ್ರತಿನಿಧಿಸುತ್ತಿರುವೆನಾದರೂ, ನಾನು ಒಬ್ಬ ಪಂಜಾಬಿ. ಬಹಳಷ್ಟು ಪಂಜಾಬಿಗಳಂತೆ ವಿಭಜನೆಯ ಕಾರಣ ಹಲವು ಹತ್ತು ವಿಧಗಳಲ್ಲಿ ನೋವು ಅನುಭವಿಸಿದ್ದೇವೆ. ಆದರೆ ಅವು ದೇಶದ ಕಡೆಗೆ ನನ್ನನ್ನು ಕರ್ತವ್ಯವಿಮುಖನನ್ನಾಗಿ ಮಾಡಬಾರದು. ಹಾಗೆಯೇ ನಮ್ಮ ರಾಷ್ಟ್ರಪಿತ ತಮ್ಮ ಜೀವಿತ ಕಾಲದಲ್ಲಿ ಮುಕ್ತವಾಗಿ ತಾವೇ ಹಿಂದೂಸ್ಥಾನಿ ಪರವಾಗಿ ವ್ಯಕ್ತಪಡಿಸಿದರು ಮತ್ತು ಈ ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ಅವರು ಎಂದೂ ಖಿನ್ನರಾಗಲಿಲ್ಲ ಎಂಬುದನ್ನು ಮರೆಯಬಾರದು. ಇನ್ನೊಂದೆಡೆ ಅವರು ಯಾವಾಗಲೂ ಸನ್ನಿವೇಶದ ವಾಸ್ತವತೆಯೊಂದಿಗೆ ಆವಶ್ಯಕತೆ ಮತ್ತು ಋಜುತ್ವದಿಂದ ಪ್ರಭಾವಿತರಾಗಿದ್ದರು. ಇನ್ನೊಂದು ಸಲಹೆಯನ್ನು ಮಾಡಲಿಚ್ಛಿಸುವುದು ಎಂದರೆ ಸಂವಿಧಾನವನ್ನು ರೂಪಿಸುವಲ್ಲಿ ನಾವು ಪ್ರತಿಯೊಬ್ಬ ಗೃಹಸ್ಥ, ಯಾವುದೇ ದೊಡ್ಡ ಸಮಾರಂಭ ಅಥವಾ ಒಂದು ಮಹಾಯಜ್ಞವನ್ನು ನಡೆಸುವಾಗ ಮಾಡುವಂತೆ ದೇವರ ಆಶೀರ್ವಾದಗಳಿಗೆ ಪ್ರಾರ್ಥಿಸಬೇಕು. ಇಷ್ಟೊಂದು ವೇದನೆಯ ಅನಂತರ ಹುಟ್ಟಿದ ಭಾರತದಲ್ಲಿ ಏನು ಅಂಥ ಮಹಾಯಜ್ಞ ಇದಕ್ಕಿಂತ ಇರುತ್ತದೆ? ಆದುದರಿಂದ ಸಂವಿಧಾನದ ಆರಂಭದಲ್ಲಿ ನಾವು ಈ ಪವಿತ್ರ ಕೆಲಸದಲ್ಲಿ ದೇವರ ಆಶೀರ್ವಾದಗಳಿಗೆ ಪ್ರಾರ್ಥಿಸುತ್ತೇವೆ ಎಂದೂ ಮತ್ತು ಪೀಠಿಕೆಯ ಕೊನೆಯಲ್ಲಿ ಕೂಡ "ದೇವರೇ ನಮಗೆ ನೆರವಾಗು" ಇಂತಹ ಕೆಲವು ಪದಗಳು ಬಳಸಬೇಕು ಎಂದು ಸಲಹೆ ಮಾಡುತ್ತೇನೆ. ತನ್ನ ದೇಶ ಭಾರೀ ಪೀಡೆ ಎದುರಿಸುತ್ತಿದ್ದ ಸಮಯದಲ್ಲಿ ರುಡ್‌ಯಾರ್ಡ್ ಕಿಪ್ಲಿಂಗ್ ಭಕ್ತಿಪೂರ್ಣವಾಗಿ ಬರೆದದ್ದು:

*ದೇವರುಗಳ ದೇವ*
*ನಮ್ಮೊಂದಿಗಿರು*
*ನಾವು ಮಾಡಿದರೂ ನಾವು ಮರೆತರೂ*

*ನನ್ನ ಈ ಸಲಹೆಯನ್ನು ಈ ಗೌರವಾನ್ವಿತ ಸದನ ಪರಿಗಣಿಸುತ್ತದೆ ಎಂದು ನನ್ನ ವಿಶ್ವಾಸವಿದೆ.*

ನಾನು ನನ್ನ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕಿಂತ ಮೊದಲು ಕರಡು ರಚನಾಸಮಿತಿಯ ಅಧ್ಯಕ್ಷರೂ ಗೌರವಾನ್ವಿತ ಕಾನೂನುಸಚಿವರೂ ಆದ ಡಾ. ಅಂಬೇಡ್ಕರ್ ಕರಡು ಸಂವಿಧಾನವನ್ನು ಪರಿಗಣನೆಗಾಗಿ ಮಂಡಿಸುವಲ್ಲಿ ಮಾಡಿದ ಅತ್ಯುತ್ತಮ ಭಾಷಣಕ್ಕಾಗಿ ಒಟ್ಟಾರೆ ಹರಿದ ಪ್ರಶಂಸೆಯಧಾರೆಗೆ ನನ್ನ ಮೆಚ್ಚುಗೆಯನ್ನೂ ಸೇರಿಸಲು ಇಚ್ಛಿಸುತ್ತೇನೆ. ಅವರ ಪ್ರತಿಪಾದನೆಯ ಸರಳತೆ ಸ್ಪಷ್ಟತೆಗೆ ಮತ್ತು ಅಭಿವ್ಯಕ್ತಿ ಕೌಶಲ ಅನನ್ಯ. ಅವರು ಮತ್ತು ಅವರ ಸಹಾಯಕರು ಕರಡು ಸಂವಿಧಾನ ಸಿದ್ಧಪಡಿಸುವಲ್ಲಿ ಮಾಡಿರುವ ಈ ಶ್ರಮದಾಯಕ ಕೆಲಸಕ್ಕೆ, ನಮ್ಮ ಕೃತಜ್ಞತೆಗೆ ಪಾತ್ರರು. ಮಾನ್ಯರೆ, ನಾನು ನನ್ನ ನಿವೇದನೆ ಮಾಡಿಕೊಳ್ಳುವಲ್ಲಿ ಈ ಅವಕಾಶ ಕೊಟ್ಟುದಕ್ಕಾಗಿ ನಿಮಗೆ ವಂದಿಸುತ್ತೇನೆ.

**ಶ್ರೀ ಯುಧಿಷ್ಠಿರ ಮಿಶ್ರ** (ಒರಿಸ್ಸಾ ಸಂಸ್ಥಾನಗಳು) ಮಾನ್ಯ ಉಪಸಭಾಧ್ಯಕ್ಷರೆ, ಈ ಬೆಳಗಿನ ಅಧಿವೇಶನದ ಕೊನೆಯಲ್ಲಿ ನನ್ನನ್ನು ಮಾತನಾಡಲು ಕರೆಯಲಾಗಿದೆ ಮತ್ತು ಆದಷ್ಟು ಬೇಗ ಮುಗಿಸಲು ಯತ್ನಿಸುತ್ತೇನೆ. ಈ ಸಭೆಯ ಪರಿಗಣನೆಗೆ ಕೆಲವು ವಿಷಯಗಳನ್ನು ನಿವೇದಿಸಬಯಸುತ್ತೇನೆ. ಮೊದಲನೆಯದಾಗಿ, ಇಡೀ ಕರಡು ಸಂವಿಧಾನದಲ್ಲಿ ದೇಶದ ಆರ್ಥಿಕ ಸ್ವಾವಲಂಬನೆಗೆ ಯಾವ ಅವಕಾಶವೂ ಇರುವುದಿಲ್ಲ. ಈವರೆಗೆ ನಾವು ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೆವು ಮತ್ತು ಹಲವು ಬಾರಿ ನಮ್ಮ ನಾಯಕರು ಈ ದೇಶದಲ್ಲಿ ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೆ ಒದಗುವ ಒಂದು ಸಂವಿಧಾನವನ್ನು ಸ್ಥಾಪಿಸುತ್ತೇವೆ ಎಂದು

ಹೇಳಿದ್ದರು. ಆದರೆ ಅಂತಹುದ್ದೇನೂ ಮಾಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಿದೆ. ತಮ್ಮ ಭವಿಷ್ಯದ ಭದ್ರತೆಗೆ ಸಾಮಾನ್ಯ ಜನತೆಗೆ ಯಾವುದೂ ಇಲ್ಲ. ಈ ಕರಡು ಸಂವಿಧಾನದಲ್ಲಿ ಭವಿಷ್ಯದಲ್ಲಿ ಅವರ ಬೆಳವಣಿಗೆಗೆ ಪೂರ್ಣ ಅವಕಾಶಗಳನ್ನು ಒದಗಿಸುವಂಥದೇನೂ ಇಲ್ಲ. ಜನರ ಹಿತಾಸಕ್ತಿಗಳಲ್ಲಿ ಎಲ್ಲ ಭೂಮಿ, ಯಂತ್ರೋಪಕರಣಗಳು ಮತ್ತು ಉತ್ಪಾದನೆಯ ಇತರ ಮಾರ್ಗಗಳು ಮತ್ತು ಆ ಮೂಲದ ಉತ್ಪನ್ನಗಳು ರಾಜ್ಯದ ಸ್ವಾಮ್ಯದಲ್ಲಿದ್ದು ನಿಯಂತ್ರಿಸಲ್ಪಡುತ್ತವೆ ಎಂದು ಸಂವಿಧಾನ ಮೊದಲನೆಯದಾಗಿ ಉಪಬಂಧಿಸಬೇಕು.

ಎರಡನೆಯದಾಗಿ, ದೇಶವು ಪ್ರತಿ ಗಂಡಸಿಗೂ ಮತ್ತು ಹೆಂಗಸಿಗೂ ಅವನ ಅಥವಾ ಅವಳ ಶಕ್ತಿ ಮತ್ತು ಸಾಮರ್ಥ್ಯಗಳಿಗನುಗುಣವಾಗಿ ಕೆಲಸಮಾಡಲು ಮತ್ತು ಅವರ ಅಗತ್ಯಗಳಿಗನುಸಾರ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡಬೇಕು ಎಂದು ಸಂವಿಧಾನದಲ್ಲಿ ಉಪಬಂಧಿಸಬೇಕು.

ಮೂರನೆಯದಾಗಿ, ಸಾಮಗ್ರಿಗಳ ಉತ್ಪಾದನೆಯನ್ನು ಜನರ ಅಗತ್ಯಗಳಿಗೆ ಅನುಗುಣವಾಗಿ ನಿರ್ಧರಿಸಬೇಕು ಮತ್ತು ನಿಯಂತ್ರಿಸಬೇಕು. ಕರಡು ಸಂವಿಧಾನ ಐಶ್ವರ್ಯದ ರಾಷ್ಟ್ರೀಕರಣಕ್ಕೆ ಯಾವುದೇ ಭರವಸೆ ಕೊಡುವುದಿಲ್ಲ ಮತ್ತು ಅದು ಎಲ್ಲಿಯೂ ಪ್ರತಿ ಗಂಡಸು ಮತ್ತು ಹೆಂಗಸಿಗೂ ದೇಶದಲ್ಲಿ ಕೆಲಸ ಒದಗಿಸಬೇಕು ಎಂದು ಹೇಳುವುದಿಲ್ಲ.

ನಾನು ಮಾಡಬಯಸುವ ಎರಡನೇ ನಿವೇದನೆಯೆಂದರೆ, ಪೌರಸ್ವಾತಂತ್ರ್ಯವನ್ನು ಕುರಿತದ್ದಾಗಿದೆ. ಕರಡು ಸಂವಿಧಾನದಲ್ಲಿ ದೇಶದ ಹಿತಾಸಕ್ತಿಗಾಗಿ ಒಬ್ಬ ವ್ಯಕ್ತಿಯನ್ನು ಯಾವುದೇ ವಿಚಾರಣೆ ಇಲ್ಲದೆ ಸೆರೆಮನೆಯಲ್ಲಿಡಬಹುದು ತಿಳಿಸಲಾಗಿದೆ. "ದೇಶದ ಹಿತಾಸಕ್ತಿ" ಎಂದರೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಕೆಲವು ತಿಂಗಳುಗಳಲ್ಲಿ, ಅಂದರೆ ಜನವರಿಯಿಂದ ಈಚೆಗೆ ವಿಚಾರಣೆಯಿಲ್ಲದೆ ಸೆರೆವಾಸ ಎಂದರೇನು ಎಂಬುದನ್ನು ನೀವು ನೋಡಿದ್ದೀರಿ. ಹಲವು ಉಚ್ಚನ್ಯಾಯಾಲಯಗಳಲ್ಲಿ ಹಲವು ಪ್ರಾಂತೀಯ ಸರ್ಕಾರಗಳಿಂದ ಆದೇಶವಾಗಿರುವ ಸೆರೆವಾಸ ಕೆಲವು ಸಂದರ್ಭಗಳಲ್ಲಿ ಕಾನೂನುಬಾಹಿರ ಎಂದು ತಡೆಹಿಡಿಯಲಾಗಿದೆ. ವಿಭಿನ್ನ ವ್ಯಕ್ತಿಗಳಿಗೆ ಅನ್ವಯಿಸಬೇಕಾದ ನೆಲದ ಕಾನೂನು ಇರುವಾಗ ವಿಚಾರಣೆ ಇಲ್ಲದೆ ಸೆರೆವಾಸಕ್ಕೆ ಯಾವುದೇ ಉಪಬಂಧ ಏಕಿರಬೇಕು ಎಂದು ನನಗೆ ತಿಳಿಯುತ್ತಿಲ್ಲ. ನಾವು ಬ್ರಿಟಿಷ್ ಸರ್ಕಾರದ ಕಾಲದಲ್ಲಿ ಇದರ ವಿರುದ್ಧ ಹೋರಾಡಿದೆವು. ಈಗ ಕೂಡ ಇದೇ ಉಪಬಂಧವನ್ನು ಏಕೆ ಉಳಿಸಿಕೊಳ್ಳಬೇಕು ಎನ್ನುವುದರಲ್ಲಿ ನನಗೆ ಯಾವುದೇ ಕಾರಣ ಕಾಣುತ್ತಿಲ್ಲ. ಹಾಗೆ ನೋಡಿದರೆ ಸಂವಿಧಾನಕ್ಕಾಗಿ ಸಿದ್ಧಾಂತಗಳನ್ನು ಅಳವಡಿಸುವಾಗ ಈ ಸಭೆಯಿಂದ ಈ ಸಿದ್ಧಾಂತ ಒಪ್ಪಲಾಗಿದೆ. ಆದರೆ ಈ ಅಭಿಪ್ರಾಯವನ್ನು ಬದಲಾಯಿಸಬೇಕು ಮತ್ತು ಕರಡುಸಂವಿಧಾನದಲ್ಲಿ ಸ್ಥಾನ ಕೊಡಲಾಗಿರುವ ಉಪಬಂಧದ ತಿದ್ದುಪಡಿ ಮಾಡಬೇಕು ಎಂದು ನಾನು ನಿವೇದಿಸುತ್ತೇನೆ.

ನನ್ನ ಮೂರನೆಯ ಅಹವಾಲು ಸಂಸ್ಥಾನಗಳನ್ನು ಕುರಿತು ಇದೆ. ಅವುಗಳ ಆಡಳಿತಗಾರರು ತಮ್ಮ ಆಡಳಿತವ್ಯಾಪ್ತಿಯನ್ನು ಮತ್ತು ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿರುವರು. ಕರಡು ಸಂವಿಧಾನದಲ್ಲಿ ಮಾಡಲಾಗಿರುವ ಉಪಬಂಧ ಕರಡುಸಮಿತಿಗೆ ಕೊಟ್ಟಿರುವ ಪರಿಶೀಲನಾಂಶಗಳನ್ನು ಮೀರಿದೆ. ಕರಡು ಸಮಿತಿ ಏಕೆ ಉಪಬಂಧಗಳನ್ನು ಮೀರಿದೆ ಎಂದು ನನಗೆ ತಿಳಿಯುತ್ತಿಲ್ಲ ಮತ್ತು ಅದು ಭಾರತದ ಸರ್ಕಾರದ ಆಡಳಿತದಡಿ ಬಂದಿರುವ ಸಂಸ್ಥಾನಗಳ ಜನರ ಆಶಯಗಳಾಚೆ ಹೋಗಿದೆ ಮತ್ತು ಸಂಸ್ಥಾನಗಳ ಜನರಿಂದ ಬೇಡಿಕೆ ಇರದ ಇಷ್ಟವೇ ಇಲ್ಲದ ಸಂವಿಧಾನವೊಂದನ್ನು ಅಳವಡಿಸಲಾಗಿದೆ. ಆದುದರಿಂದ ಪ್ರಾಂತ್ಯಗಳೊಂದಿಗೆ ವಿಲೀನವಾದ ಸಂಸ್ಥಾನಗಳ ವಿಷಯದಲ್ಲಿ ಕೂಡ ಅನ್ವಯಿಸಲಾಗಿರುವ ಅನುಚ್ಛೇದ ೨೧೨ನ್ನು ತಿದ್ದುಪಡಿ ಮಾಡಬೇಕು ಮತ್ತು ಜನರ ಆಶಯಗಳನ್ನು ಗೌರವಿಸಬೇಕು ಎಂದು ನಾನು ಹೇಳುತ್ತೇನೆ. ಅದೂ ಅಲ್ಲದೆ, ಸಕಾಲದಲ್ಲಿ ತಿದ್ದುಪಡಿಗಳನ್ನು ಮಂಡಿಸಲಾಗುತ್ತದೆ ಮತ್ತು ಸದನ ಅವನ್ನು ಅಂಗೀಕರಿಸುತ್ತದೆ ಎಂದು ನಾನು ಆಶಿಸುತ್ತೇನೆ.

ಈ ಮಾತುಗಳೊಂದಿಗೆ, ಮಾನ್ಯರೆ, ನಾನು ಸದನದ ಪರಿಗಣನೆಗೆ ಕರಡು ಸಂವಿಧಾನವನ್ನು ಶಿಫಾರಸು ಮಾಡುತ್ತೇನೆ.

**ಮಾನ್ಯ ಉಪಭಾಧ್ಯಕ್ಷರು** : ಮಾನ್ಯ ಸಭಾಧ್ಯಕ್ಷರು ಸದನದ ಆಶಯಗಳಿಗೆ ಮನ್ನಣೆ ನೀಡಿ ನಾವು ಸಾಮಾನ್ಯ ಚರ್ಚೆಯನ್ನು ಇನ್ನೊಂದು ದಿನ ಅಂದರೆ ಸೋಮವಾರ ಇಟ್ಟುಕೊಳ್ಳೋಣವೆಂಬುದನ್ನು ಒಪ್ಪಿರುವರು ಎಂದು ಗೌರವಾನ್ವಿತ ಸದಸ್ಯರಿಗೆ ತಿಳಿಸಲು ನಾನು ಹರ್ಷಿಸುತ್ತೇನೆ.

ಸಭೆಯನ್ನು ಭೋಜನಕ್ಕಾಗಿ ಮೂರು ಗಂಟೆಯವರೆಗೆ ಮುಂದೂಡಲಾಯಿತು.

ಸಭೆ ಭೋಜನದ ಅನಂತರ ಮೂರು ಗಂಟೆಗೆ ಮಾನ್ಯ ಉಪಸಭಾಧ್ಯಕ್ಷರ (ಡಾ. ಎಚ್.ಸಿ. ಮುಖರ್ಜಿ) ಅಧ್ಯಕ್ಷತೆಯಲ್ಲಿ ಸಭೆ ಮತ್ತೆ ಸೇರಿತು.

**ಶ್ರೀ ಎಚ್.ವಿ. ಕಾಮತ್** : ತಾವು ದಯಮಾಡಿ ನಿರ್ದೇಶಿಸುವಿರಾ...

**ಮಾನ್ಯ ಉಪಸಭಾಧ್ಯಕ್ಷರು** (ಡಾ. ಎಚ್.ಸಿ. ಮುಖರ್ಜಿ) : ದಯಮಾಡಿ ಗೌರವಾನ್ವಿತ ಸದಸ್ಯರು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವರೆ?

ಪ್ರಮಾಣ ಸ್ವೀಕರಿಸುವುದು ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಹಾಕುವುದು:

ಕೆಳಗಿನ ಸದಸ್ಯರು ಪ್ರಮಾಣಮಾಡಿ ದಾಖಲೆ ಪುಸ್ತಕದಲ್ಲಿ ಸಹಿ ಹಾಕಿದರು.

**ಶ್ರೀ ರತ್ನ ಲಾಲ್ ಮಾಳವೀಯ** (ಸಿ.ಪಿ. ಮತ್ತು ಬೇರಾರ್ ಸಂಸ್ಥಾನಗಳು)

## ಕರಡು ಸಂವಿಧಾನ ಕುರಿತು ಪ್ರಸ್ತಾವ (ಮುಂದುವರಿದುದು)

**ಮಾನ್ಯ ಉಪಸಭಾಧ್ಯಕ್ಷರು** : ನಾವು ಈಗ ಚರ್ಚೆ ಮುಂದುವರಿಸೋಣ.

**ಶ್ರೀ ಎಚ್.ವಿ. ಕಾಮತ್** : ತಾವು ಕರಡು ಸಂವಿಧಾನ ಪರಿಚಯಿಸುವ ಡಾ. ಅಂಬೇಡ್ಕರ್ ಭಾಷಣದ ಒಂದು ಪ್ರತಿಯನ್ನು ಸಾಧ್ಯವಾದಷ್ಟೂ ಅತ್ಯಂತ ಕಡಿಮೆ ಸಾಧ್ಯ ಸಮಯದಲ್ಲಿ ಪ್ರತಿ ಗೌರವಾನ್ವಿತ ಸದಸ್ಯರಿಗೂ ಒದಗಿಸುವುದಕ್ಕೆ ನಿರ್ದೇಶಿಸುವ ಕೃಪೆ ಮಾಡುವಿರಾ?

**ಮಾನ್ಯ ಉಪಸಭಾಧ್ಯಕ್ಷರು** : ಗೌರವಾನ್ವಿತ ಡಾ. ಅಂಬೇಡ್ಕರ್ ಭಾಷಣದ ನಕಲು ಪ್ರತಿಗಳನ್ನು ತೆಗೆಸಬೇಕೆಂದು ನಾನು ತಿಳಿದಿದ್ದೇನೆ. ಇದನ್ನು ಆದಷ್ಟು ಶೀಘ್ರ ಮಾಡಲಾಗುತ್ತದೆ ಮತ್ತು ಈ ಸಾಯಂಕಾಲ ಅಥವಾ ನಾಳೆ ಬೆಳಗ್ಗೆ ಸದಸ್ಯರಿಗೆ ಪ್ರತಿಗಳು ಲಭ್ಯವಾಗುವಂತೆ ಮಾಡಲಾಗುತ್ತದೆ.

ನಾವು ಈಗ ಚರ್ಚೆ ಮುಂದುವರಿಸೋಣ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ...

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಈ ಪ್ರಸ್ತಾವದ ಮೇಲೆ ಎರಡು ಬಾರಿ ಮಾತನಾಡಲು ತಮಗೆ ಅವಕಾಶ ನೀಡಲಾಗಿದೆಯೇ?

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಇಲ್ಲ, ಈ ಮೊದಲು ನಾನು ಸೇಠ್ ದಾಮೋದರ್ ಸ್ವರೂಪ್ ಅವರ ತಿದ್ದುಪಡಿ ಕುರಿತು ಮಾತನಾಡಿದೆ. ನಾನಿನ್ನೂ ಡಾ. ಅಂಬೇಡ್ಕರ್ ಮಂಡಿಸಿದ ಪ್ರಸ್ತಾವ ಕುರಿತು ಮಾತನಾಡಿಲ್ಲ.

ಮಾನ್ಯ ಉಪಸಭಾಧ್ಯಕ್ಷರೆ, ನಮ್ಮ ಕರಡು ಸಂವಿಧಾನಕ್ಕೆ ಆಧಾರವಿರುವ ಸಿದ್ಧಾಂತಗಳ ಬಗ್ಗೆ ಚರ್ಚಿಸಲು ಇಂದು ಇಲ್ಲಿ ನಮ್ಮನ್ನು ಕರೆಯಲಾಗಿದೆ. ಆರಂಭದಲ್ಲಿ ನಾನು ನಮ್ಮ ಮುಂದೆ ಪ್ರಸ್ತಾವ ಮಂಡಿಸಿರುವ ಸುಶಿಕ್ಷಿತ ಡಾಕ್ಟರ್ ಅವರನ್ನು ಅಭಿನಂದಿಸಬೇಕು. ನಾನು ಅವರು ಮಾಡಿದ ಭಾಷಣವನ್ನು ಹಲವು ಬಾರಿ ಓದಿದ್ದೇನೆ ಮತ್ತು ಅದು ನಮ್ಮ ಸಂವಿಧಾನದ ಸರಳ ಪ್ರತಿಪಾದನೆಯ ಒಂದು ಅತ್ಯುತ್ತಮ ರಚನೆ. ಕರಡು ಸಂವಿಧಾನಕ್ಕೆ ಇದಕ್ಕಿಂತ ಸಮರ್ಥ ವ್ಯಾಖ್ಯಾನ ಬೇರೆ ಇದ್ದಿರಲಾರರು ಎಂದು ನಾನು ಖಚಿತವಾಗಿ ತಿಳಿಸಿದ್ದೇನೆ. ಆದರೆ ಸಂವಿಧಾನದಲ್ಲಿ ಸೇರಿಸಲಾಗಿರುವ ಸಿದ್ಧಾಂತಗಳ ಕುರಿತು ಒಂದಿಷ್ಟು ಏನೋ ಹೇಳಲು ಇಚ್ಛಿಸುತ್ತೇನೆ.

ಮಾನ್ಯರೆ, ಈ ಕರಡು ಸಂವಿಧಾನ: ಅವರೇ ಹೇಳಿದಂತೆ, ಮಾದರಿಯಾಗಿ ಇಂಗ್ಲೆಂಡಿನ ಪ್ರಜಾಪ್ರಭುತ್ವ ಸರ್ಕಾರವನ್ನು ಒಪ್ಪಿದೆ; ಅಮೆರಿಕನ್ ವ್ಯವಸ್ಥೆಯ ಸರ್ಕಾರವನ್ನು ತಿರಸ್ಕರಿಸಿದೆ ನಾನು ವೈಯಕ್ತಿಕವಾಗಿ ಎರಡನ್ನೂ

ತುಲನೆ ಮಾಡಿ ಯಾವುದು ಅತ್ಯುತ್ತಮ ಎಂದು ತೂಗಿ ನೋಡಿದ್ದೇನೆ. ನಾನು ವೈಯಕ್ತಿಕವಾಗಿ ಪ್ರಸಕ್ತ ನಮ್ಮ ದೇಶದ ಅಗತ್ಯ ಒಂದು ಸ್ಥಿರ ಸರ್ಕಾರ ಎಂದು ತಿಳಿದಿದ್ದೇನೆ. ಆದುದರಿಂದ ಅಮೆರಿಕದಲ್ಲಿ ಇದ್ದ ವ್ಯವಸ್ಥೆಯನ್ನು ನಾವು ಅನುಕರಿಸಬೇಕಾಗಿತ್ತು ಎಂದು ನನಗೆನಿಸುತ್ತದೆ. ವಯಸ್ಕರ ಮತದಾನದಿಂದ ಆಯ್ಕೆಯಾದ ಒಬ್ಬ ಅಧ್ಯಕ್ಷ ರಾಷ್ಟ್ರದ ಅಧಿಕಾರದಲ್ಲಿರಬೇಕು ಮತ್ತು ಅವರು ಆಡಳಿತ ನಡೆಸಲು ತನ್ನ ಕಾರ್ಯಾಂಗವನ್ನು ಆಯ್ಕೆಮಾಡುವ ಹಕ್ಕು ಹೊಂದಿರಬೇಕು ಮತ್ತು ನ್ಯಾಯಾಂಗವು ಕಾರ್ಯಾಂಗದಿಂದ ಸ್ವತಂತ್ರವಾಗಿರಬೇಕು. ವೈಯಕ್ತಿಕವಾಗಿ ನಾನು ಇಂದು ರಾಷ್ಟ್ರದ ಆದ್ಯ ಅಗತ್ಯ ಸರ್ಕಾರದ ಸ್ಥಿರತೆ ಎಂದು ತಿಳಿಯುತ್ತೇನೆ. ಈಗಾಗಲೆ ಒಡೆದು ಬೇರೆಯಾಗುವ ಪ್ರವೃತ್ತಿಗಳಿವೆ. ಭಾಷಾವಾರು ಪ್ರಾಂತ್ಯಗಳಿಗೆ ಬೇಡಿಕೆ ಇದೆ ಮತ್ತು ಪ್ರಾಂತ್ಯಗಳ ಪುನರ್ವಿಂಗಡಣೆಗೆ ಬೇಡಿಕೆ ಇದೆ. ನಾವು ಘಟಕಗಳು ಮತ್ತು ಕೇಂದ್ರದ ನಡುವೆ ಅಧಿಕಾರಿಗಳ ವಿಭಜನೆ ಕುರಿತು ಜಗಳಗಳನ್ನು ನೋಡಿದ್ದೇವೆ. ಈ ಎಲ್ಲ ಪ್ರವೃತ್ತಿಗಳು ಸ್ವಾಭಾವಿಕ. ಆದರೆ ನಾವು ನಮ್ಮ ಸಂವಿಧಾನಕ್ಕೆ ಅಮೆರಿಕ ಸರ್ಕಾರವನ್ನು ಮಾದರಿಯಾಗಿ ಹೊಂದಿದ್ದರೆ ಮತ್ತು ಅವರ ಚುನಾವಣಾ ಪದ್ಧತಿ ಅಳವಡಿಸಿದ್ದಿದ್ದರೆ, ನಮ್ಮ ಅಗತ್ಯಗಳಲ್ಲಿ ಅದು ಪೂರೈಸುತ್ತಿತ್ತು ಎಂದು ನಾನು ತಿಳಿಯುತ್ತೇನೆ. ಆದುದರಿಂದ, ಒಂದು ಮೂಲಭೂತ ವಿಷಯದಲ್ಲಿ ನಾನು ಬ್ರಿಟಿಷ್ ಮಾದರಿಗೆ ಒಲವು ತೋರಿದ ಡಾ. ಅಂಬೇಡ್ಕರರಿಂದ ವಿಭಿನ್ನವಿರಲು ಬಯಸುತ್ತೇನೆ. ಬ್ರಿಟಿಷ್ ಪದ್ಧತಿ ಪ್ರಶಂಸನೀಯವಾಗಿ ಕೆಲಸಮಾಡುತ್ತದೆ. ಆದರೆ ಅದು ಏಳುನೂರು ವರ್ಷಗಳ ಅನುಭವ ಮತ್ತು ತರಬೇತಿಯ ಫಲ. ಜತೆಗೆ, ಬ್ರಿಟಿಷ್ ಜೀವನದ ಎರಡು ವಿಶೇಷ ಅಂಶಗಳಿದ್ದು, ಅವರ ಪದ್ಧತಿ ಸ್ಥಿರವಾಗಿರುವುದಕ್ಕೆ ಅವು ಕಾರಣವಾಗಿರುತ್ತವೆ. ಅಲ್ಲಿ ಒಡೆದು ಬೇರೆಯಾಗಿರುವ ಪ್ರವೃತ್ತಿಗಳಿಲ್ಲ ಮತ್ತು ಒಬ್ಬ ರಾಜನಿಗೆ ವಿಧೇಯ ಆಗಿರುವುದೇ ಬಲಿಷ್ಠ ಬಂಧನಬಲ. ಎರಡನೆಯದಾಗಿ, ಪ್ರತಿ ಇಂಗ್ಲಿಷ್ ಮನುಷ್ಯನಲ್ಲಿ ಅವನ ಸಂವಿಧಾನಕ್ಕೆ ಗೌರವ ಸದೃಢ. ನಮ್ಮ ದೇಶದಲ್ಲಿ, ವೈಯಕ್ತಿಕವಾಗಿ ನಾನು ಅಮೆರಿಕ ಪದ್ಧತಿ ಅತ್ಯುತ್ತಮ ಎಂದು ತಿಳಿದಿದ್ದೇನೆ. ಆ ಪದ್ಧತಿಯನ್ನು ಅನುಸರಿಸಿದರೆ, ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಮತ್ತು ನಮ್ಮಲ್ಲಿ ಶಿಫಾರಸುಮಾಡಿದ ವ್ಯವಸ್ಥೆಗಿಂತ ಉತ್ತಮವಾಗಿ ನಿರ್ವಹಿಸಬಹುದು.

ಬಳಿಕ, ಮಾನ್ಯರೆ, ಡಾ. ಅಂಬೇಡ್ಕರ್ ಭಾರತದಲ್ಲಿ ಹಿಂದೆ ಇದ್ದ ಮತ್ತು ನಮ್ಮ ಸಂವಿಧಾನಕ್ಕೆ ಒಂದು ಆದರ್ಶ ಆಧಾರವಾಗಿರಲು ನಮ್ಮ ಹಿರಿಯರು ಆಲೋಚಿಸಿದ ಗ್ರಾಮಪಂಚಾಯಿತಿಗಳ ಪದ್ಧತಿಯನ್ನು ಟೀಕಿಸಿದ್ದಾರೆ. ನಾನು ಈಗಷ್ಟೆ, ಮಹಾತ್ಮ ಗಾಂಧಿಯವರು ೧೯೩೧ರಲ್ಲಿ ಲಂಡನ್ನಿನ ದುಂಡುಮೇಜಿನ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಓದುತ್ತಿದ್ದೆ. ಅವರು, ಸಂಯುಕ್ತ ಶಾಸನಸಭೆಗೆ ಚುನಾವಣಾ ವಿಧಾನ ಕುರಿತು ಮಾತನಾಡುತ್ತಿದ್ದರು. ಅಲ್ಲಿ ಅವರು ಹಳ್ಳಿಗಳನ್ನು ಮತದಾರರ ಸಮುದಾಯ ಘಟಕಗಳಾಗಿರಲು ಶಿಫಾರಸು ಮಾಡಿದ್ದಾರೆ. ಅವರು ಗ್ರಾಮ ಗಣರಾಜ್ಯಗಳಿಗೆ ಮೂಲ ಮಹತ್ತ್ವ ಕೊಟ್ಟರು. ಅವರು ಭಾರತದ ಆತ್ಮ ಹಳ್ಳಿಗಳಲ್ಲಿ ವಾಸಿಸಿದೆ ಎಂದು ಹೇಳಿದರು. ಡಾ.ಅಂಬೇಡ್ಕರ್ ಗ್ರಾಮಪಂಚಾಯಿತಿಗಳ ಬಗ್ಗೆ ಅಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ನನಗೆ ವಿಷಾದವಾಗಿದೆ. ಅವರ ಅಭಿಪ್ರಾಯಗಳು ಈ ಸದನದ ಯಾವುದೇ ಇತರ ಸದಸ್ಯರ ಅಭಿಪ್ರಾಯಗಳಲ್ಲ. ಈ ಗ್ರಾಮಪಂಚಾಯಿತಿಗಳನ್ನು ಕುರಿತು ಡಾ.ಅಂಬೇಡ್ಕರ್ ಏನು ಹೇಳಿದ್ದಾರೆ ನೋಡೋಣ.

"ದೇಶದ ಹಣೆ ಬರಹದಲ್ಲಿ ಅವರ ಪಾತ್ರವನ್ನು ಮೆಟ್‌ಕಾಫ್ ಅವರೇ ಚೆನ್ನಾಗಿ ವಿವರಿಸಿರುವರು. ಅವರು ಹೇಳುತ್ತಾರೆ: 'ವಂಶದ ಅನಂತರ ವಂಶ ಉರುಳಿ ಬೀಳುತ್ತದೆ. ಕ್ರಾಂತಿಕ್ರಾಂತಿಗೆ ಯಶಸ್ಸು ಉಂಟಾಗುತ್ತದೆ. ಹಿಂದೂ, ಪಠಾಣ, ಮೊಗಲರು, ಮಹಾರಾಷ್ಟ್ರ, ಸಿಖ್, ಇಂಗ್ಲಿಷ್ ಎಲ್ಲರೂ ಸರದಿಯಲ್ಲಿ ಯಜಮಾನರೇ. ಆದರೆ ಗ್ರಾಮಸಮುದಾಯಗಳು ಅದೇ ಆಗಿ ಉಳಿದಿವೆ. ತೊಂದರೆಯ ಸಮಯಗಳಲ್ಲಿ ಅವರು ಶಸ್ತ್ರ ಹಿಡಿದು ತಾವೇ ಬಲವರ್ಧಿಸುತ್ತಾರೆ. ಯಾವುದೇ ಪ್ರತಿಕೂಲ ಸೈನ್ಯ ದೇಶದ ಮೂಲಕ ಹಾದುಬಂದರೂ ಗ್ರಾಮಸಮುದಾಯಗಳು ತಮ್ಮ ಗೋಡೆಗಳ ಒಳಗೇ ತಮ್ಮ ದನಗಳನ್ನು ಸಂಗ್ರಹಿಸುತ್ತಾರೆ ಮತ್ತು ಆ ಶತ್ರು ಕೆಣಕಲ್ಪಡದೆ ಹಾದುಹೋಗಲು ಬಿಡುತ್ತವೆ.'"

ನಮ್ಮ ದೇಶದ ಇತಿಹಾಸದಲ್ಲಿ ಗ್ರಾಮಸಮುದಾಯಗಳು ವಹಿಸಿರುವ ಪಾತ್ರ ಹೀಗಿದೆ. ಇದನ್ನು ತಿಳಿದು ಅವರು ಏನು ಹೆಮ್ಮೆಪಡಬಹುದು? ಅವರು ಎಲ್ಲ ಪ್ರತಿಕೂಲ ಸನ್ನಿವೇಶಗಳ ನಡುವೆಯೂ ಉಳಿದಿದ್ದಾರೆ ಎಂಬುದು ನಿಜಾಂಶವಿರಬಹುದು. ಆದರೆ ಕೇವಲ ಉಳಿದುಕೊಳ್ಳುವುದರಿಂದ ಯಾವ ಮೌಲ್ಯವೂ ಇಲ್ಲ. ಪ್ರಶ್ನೆ ಎಂದರೆ ಯಾವ ಸ್ತರದಲ್ಲಿ ಅವರು ಉಳಿದರು ಎಂಬುದೇ ಆಗಿದೆ. ಖಂಡಿತವಾಗಿ ಒಂದು ಕೀಳು ಸ್ವಾರ್ಥಮಟ್ಟದ ಮೇಲಷ್ಟೆ ಈ ಹಳ್ಳಿ ಗಣರಾಜ್ಯಗಳು ಭಾರತದ ವಿನಾಶಕ್ಕಾಗಿವೆ ಎಂದು ನಾನು ಎತ್ತಿ ಹಿಡಿಯುತ್ತೇನೆ. ಯಾರು ಪ್ರಾಂತೀಯತೆ ಮತ್ತು ಜಾತೀಯತೆಯನ್ನು ಖಂಡಿಸುತ್ತಾರೋ ಅವರೇ ಗ್ರಾಮಗಳ ರೂವಾರಿಗಳಾಗಿ ಮುಂದೆ ಬಂದಿರುವುದು ನನಗೆ ಅಚ್ಚರಿ ತಂದಿದೆ. ಗ್ರಾಮ ಎಂದರೇನು? ಕೇವಲ ಒಂದು ಸ್ಥಳೀಯತೆಯ ತೋಡು ಮತ್ತು ಅಜ್ಞಾನದ ಸಂಕುಚಿತ ಮನೋಭಾವ ಮತ್ತು ಮತೀಯತೆಯ ಗವಿ. ಸಂವಿಧಾನ ಗ್ರಾಮವನ್ನು ನಿರ್ಲಕ್ಷಿಸುವುದಕ್ಕೆ ಮತ್ತು ವ್ಯಕ್ತಿಯನ್ನು ಅದರ ಘಟಕವಾಗಿ ಅಳವಡಿಸುವುದಕ್ಕೆ ನಾನು ಹರ್ಷಿಸುತ್ತೇನೆ."

ಸದನದ ಬಹ್ವಂಶ ಸದಸ್ಯರು ಗ್ರಾಮ ಗಣರಾಜ್ಯಗಳ ಈ ಅಭಿಪ್ರಾಯದೊಂದಿಗೆ ಒಪ್ಪುವುದಿಲ್ಲ ಎಂದು ನನಗೆ ಖಚಿತವಿದೆ. ಯಾರು ಗ್ರಾಮಗಳಲ್ಲಿ ಕೆಲಸ ಮಾಡಿದ್ದಾರೆಯೋ ಮತ್ತು ಕಳೆದ ಇಪ್ಪತ್ತೈದು ವರ್ಷಗಳು ಕಾಂಗ್ರೆಸ್ ಗ್ರಾಮಪಂಚಾಯಿತಿಗಳ ಕೆಲಸದ ಅನುಭವ ಹೊಂದಿದ್ದಾರೆಯೋ, ಅವರು ಈ ಚಿತ್ರ ಶುದ್ಧ ಕಾಲ್ಪನಿಕ ಎಂದು ಹೇಳಬಹುದು. ಅದು ಇಡಿಯಾಗಿ ಒಂದು ತಪ್ಪು ಚಿತ್ರ. ವೈಯಕ್ತಿಕವಾಗಿ ದೇಶವನ್ನು ಸಂಘಟಿಸುವ ಎಲ್ಲ ಬೆಳಕು ಮತ್ತು ಎಲ್ಲ ಜ್ಞಾನ ತರುವಲ್ಲಿ ಅವು ದೇಶವನ್ನು ಒಟ್ಟಿಗೆ ಹಿಡಿದಿಡಲು ಮತ್ತು ರಾಮರಾಜ್ಯ ಆದರ್ಶದತ್ತ ಒಯ್ಯಲು ಅತ್ಯಂತ ಬಲಶಾಲಿಗಳಾಗಿರುತ್ತವೆ, ಎಂದು ನಾನು ಭಾವಿಸುತ್ತೇನೆ. ಹಾಗೆ ನೋಡಿದರೆ, ಸೋವಿಯತ್ ಸಂವಿಧಾನ ಗ್ರಾಮಘಟಕಗಳನ್ನಾಧರಿಸಿದೆ. ಅವನ್ನು ಗ್ರಾಮ ಸೋವಿಯತ್‌ಗಳೆನ್ನುವರು ರಷ್ಯನ್ ಗ್ರಾಮ ಸೋವಿಯತ್‌ಗಳಂತೆ ಈ ಗ್ರಾಮಗಣರಾಜ್ಯಗಳು ಉತ್ತಮ ಸ್ವಯಂ ನಿರ್ಧಾರಕ್ಕೆ ಮಾದರಿಗಳಾಗುತ್ತವೆ. ಸಂವಿಧಾನ ಗ್ರಾಮಗಣರಾಜ್ಯಗಳ ಸ್ಥಾಪನೆಗೆ ಅವಕಾಶ ಒದಗಿಸಬೇಕು ಎಂದು ನಾನು ತಿಳಿದಿದ್ದೇನೆ.

ಈ ಕರಡು ಸಂವಿಧಾನದಡಿ ಮೇಲ್ಮನೆಗೆ ಪ್ರಾಂತೀಯ ಶಾಸನಸಭೆಗಳಿಂದ ಪರೋಕ್ಷವಾಗಿ ಆಯ್ಕೆಯಾಗಬೇಕಿದೆ. ಅದು ವಿಶಾಲವಾದ ಮತದಾನದ ಆಧಾರದ ಮೇಲೆ ಆಯ್ಕೆಯಾಗಬೇಕು ಮತ್ತು ಗ್ರಾಮಪಂಚಾಯಿತಿಗಳು ಮೇಲ್ಮನೆಗೆ ಚುನಾಯಿಸಲು ನೆರವಾಗಬೇಕು. ಪ್ರಾಂತೀಯ ಶಾಸನಸಭೆಗಳಿಂದ ಮೇಲ್ಮನೆಗೆ ಆಯ್ಕೆ ಮಾಡುವ ಸಲಹೆ ನೀಡಿದ ವಿಧಾನ ಒಂದು ತುಂಬ ತಪ್ಪು. ಗ್ರಾಮಪಂಚಾಯಿತಿಗಳಿಗೆ, ಮೇಲ್ಮನೆಗೆ ಚುನಾಯಿಸಲು ಅವಕಾಶ ನೀಡಿದರೆ, ನಾವು ಹೆಚ್ಚು ಪ್ರಾತಿನಿಧಿಕ ಮೇಲ್ಮನೆ ಹೊಂದುತ್ತೇವೆ. ವೈಯಕ್ತಿಕವಾಗಿ ನಾನಾ ಹಳ್ಳಿಗಳಿಗೆ ಹೆಚ್ಚು ಜವಾಬ್ದಾರಿ ಕೊಡದೆ ನಾವು ನಿಜವಾಗಿ ಅವರ ಸಮಸ್ಯೆಗಳನ್ನು ಪರಿಹರಿಸಲಾಗುವುದಿಲ್ಲ.

ಮೂರನೆಯ ಅಂಶ ನಾನು ರಾಜ್ಯಗಳ ಸಂಸ್ಥಾನಗಳನ್ನು ಕುರಿತು ಹೇಳುತ್ತೇನೆ. ಭಾರತೀಯ ರಾಜ್ಯಗಳಿಗೆ ಒಂದು ಮತ್ತು ಪ್ರಾಂತ್ಯಗಳಿಗೆ ಒಂದು ಎಂದು ಎರಡು ವಿಧಗಳ ಸಂವಿಧಾನಗಳನ್ನು ಹೊಂದುವ ವಿರುದ್ಧ ಡಾ. ಅಂಬೇಡ್ಕರ್ ಮಾಡಿರುವ ಟೀಕೆಗೆ ನಾನು ಪೂರಾ ಒಪ್ಪುತ್ತೇನೆ. ರಾಜ್ಯಗಳು ಪ್ರಾಂತ್ಯಗಳೊಂದಿಗೆ ಸಮಾನವಾಗಿ ಇರುವಂತಾಗಬೇಕು ಎಂದು ನಾನು ಭಾವಿಸುತ್ತೇನೆ. ಇಲ್ಲಿ ರಾಜ್ಯಗಳ ಪ್ರತಿನಿಧಿಗಳು ಪ್ರಾಂತ್ಯಗಳಿಗೆ ಇರುವಂತೆ ರಾಜ್ಯಗಳಿಗೆ ಸಂವಿಧಾನಗಳನ್ನು ಹೊಂದುವುದು ಹೆಚ್ಚು ಅನುಕೂಲಕರ ಎಂದು ನೋಡುತ್ತಾರೆ ಎಂದು ನಾನು ಆಶಿಸುತ್ತೇನೆ. ರಾಜ್ಯಪಾಲರ ಬದಲು ಅವರು ಸಾಂವಿಧಾನಿಕ ಮುಖ್ಯಸ್ಥರಾಗಿ ರಾಜರನ್ನು ಹೊಂದಬಹುದು. ಬಹುತೇಕ ಸಣ್ಣ ಸಂಸ್ಥಾನಗಳು ಈಗಾಗಲೇ ದೊಡ್ಡ ಘಟಕಗಳೊಂದಿಗೆ ತಾವೇ ವಿಲೀನಗೊಂಡಿವೆ. ಅವು ಎಲ್ಲಿ ತುಂಬ ಸಣ್ಣ ಇವೆಯೋ ಅವು ಈಗಾಗಲೇ ಪ್ರಾಂತ್ಯಗಳೊಂದಿಗೆ ತಾವೇ ವಿಲೀನಗೊಂಡಿವೆ. ಸಂವಿಧಾನ ಒಂದು ಉಪಬಂಧ ತರಬೇಕು. ಅದೆಂದರೆ ಯಾವುದೇ ರಾಜ್ಯ ಪ್ರಾಂತ್ಯಗಳೊಂದಿಗೆ ಸಮನಾಗಿ ಇರಲು ಆಶಿಸುವುದೋ, ಪ್ರಾಂತೀಯ ಸಂವಿಧಾನ ಆ ರಾಜ್ಯಕ್ಕೂ ಕೂಡ ಅನ್ವಯಿಸತಕ್ಕದ್ದು

ಎಂದು ನಾನು ಭಾವಿಸುತ್ತೇನೆ. ಸಂವಿಧಾನ ಅಂಗೀಕಾರವಾಗುವ ಹೊತ್ತಿಗೆ ಬಹುತೇಕ ರಾಜ್ಯಗಳು ಪ್ರಾಂತ್ಯಗಳೊಂದಿಗೆ ಸಮನಾಗಿ ಇರುವಲ್ಲಿ ಒಪ್ಪಬೇಕು ಎಂದು ನಿರೀಕ್ಷಿಸುತ್ತೇನೆ.

ಮೂಲಭೂತ ಹಕ್ಕುಗಳನ್ನು ಕುರಿತು, ಡಾ.ಅಂಬೇಡ್ಕರ್ ವಿಶ್ವದಲ್ಲಿ ಎಲ್ಲಿಯೂ ಮೂಲಭೂತ ಹಕ್ಕುಗಳು ಸಂಪೂರ್ಣವಾದವಲ್ಲ ಎಂದು ಹೇಳಿದರು. ವೈಯಕ್ತಿಕವಾಗಿ ನಾನು ಮೂಲಭೂತ ಹಕ್ಕುಗಳು ಹೆಚ್ಚು ಸ್ಪಷ್ಟರೂಪದಲ್ಲಿರಬೇಕು ಎಂದು ಭಾವಿಸುತ್ತೇನೆ. ಈ ಮೂಲಭೂತ ಹಕ್ಕುಗಳ ನಿಬಂಧನೆಗಳು ಸಂವಿಧಾನವು ಮಂಜೂರು ಮಾಡಿರುವ ಎಷ್ಟೋ ಹಕ್ಕುಗಳನ್ನು ಕಸಿದುಕೊಂಡು ಬಿಡುತ್ತವೆ ಎಂಬ ವಾದದಲ್ಲಿ ತುಂಬ ಬಲವಿದೆ ಎಂದು ನಾನು ತಿಳಿದಿದ್ದೇನೆ. ಈ ಅನುಚ್ಛೇದಗಳನ್ನು ಮಾರ್ಪಡಿಸಬೇಕೆಂದು ನಾನು ಬಯಸುತ್ತೇನೆ.

ನಮ್ಮ ರಾಷ್ಟ್ರಭಾಷೆ ಕುರಿತು ಒಂದು ಮಾತು. ಐರಿಷ್ ಸಂವಿಧಾನದ ಮಾದರಿಯಲ್ಲಿ ಒಂದು ರಾಷ್ಟ್ರಭಾಷೆಯನ್ನು ಖಚಿತವಾಗಿ ಹೇಳುವ ಒಂದು ಪ್ರತ್ಯೇಕ ಖಂಡ ಇರಬೇಕು ಎಂದು ನನಗೆನಿಸುತ್ತದೆ. ಅದು ದೇವನಾಗರಿ ಲಿಪಿಯಲ್ಲಿ ಹಿಂದಿ ಆಗಿರಬೇಕು ಇದು ನನ್ನ ವೈಯಕ್ತಿಕ ಅನಿಸಿಕೆ. ಹಾಗೆಯೇ ಧ್ವಜದ ರೂಪವೂ ಕೂಡ ನಮ್ಮ ಸಂವಿಧಾನದಲ್ಲಿ ನಿರ್ದಿಷ್ಟವಾಗಬೇಕು. ಅದು ಯಾವ ಬಣ್ಣದ್ದಿರಬೇಕು ಮತ್ತು ಅದರ ಅಳತೆಗಳು ಏನಿರಬೇಕು ಇವನ್ನೆಲ್ಲ ಸಂವಿಧಾನದಲ್ಲಿ ಘೋಷಿಸಬೇಕು. ಸೇಠ್ ಗೋವಿಂದ ದಾಸ್ ಗೋಹತ್ಯೆಯನ್ನು ಭಾರತೀಯ ಒಕ್ಕೂಟದಲ್ಲಿ ನಿಷೇಧಿಸಬೇಕು ಎಂದು ಹೇಳಿದುದನ್ನು ನಾನು ಕೂಡ ಒಪ್ಪುತ್ತೇನೆ. ಜನಸಂಖ್ಯೆಯ ಮೂವತ್ತು ಕೋಟಿಗಳ ಭಾವನೆಯನ್ನು ಗೌರವಿಸಬೇಕು ಎಂದು ನಾನು ಆಗ್ರಹಪಡಿಸುತ್ತೇನೆ. ಹಾಗೆ ನೋಡಿದರೆ ನಾವು ಜನರನ್ನು ಯಥಾ ರೂಪದಲ್ಲಿ ಭಾವಿಸಬೇಕು ಮತ್ತು ನಾವು ಅವರ ಭಾವನೆಗಳನ್ನು ಕೂಡ ಗೌರವಿಸಬೇಕು. ಆದುದರಿಂದ ಈ ಸಂವಿಧಾನ ನಮ್ಮ ನಮ್ಮ ಅಗತ್ಯಗಳು ಮತ್ತು ಕೋರಿಕೆಗಳಿಗೆ ಸ್ಪಂದಿಸಲು ತಿದ್ದುಪಡಿ ಮಾಡಬೇಕು ಎಂದು ಭಾವಿಸುತ್ತೇನೆ.

ಕಡೆಯದಾಗಿ, ಮಾನ್ಯರೆ, ಕರಡು ರಚನಾಸಮಿತಿ ನಮಗೆ ಒಂದು ತುಂಬ ಸೊಗಸಾದ ಸಂವಿಧಾನವನ್ನು ಒದಗಿಸಿದುದಕ್ಕಾಗಿ ನಾನು ವಂದಿಸುತ್ತೇನೆ. ನಾನು ಮಾಡಿರುವ ಸಲಹೆಗಳನ್ನು ತಿದ್ದುಪಡಿ ಹಂತದಲ್ಲಿ ಚರ್ಚಿಸಲಾಗುತ್ತದೆ ಮತ್ತು ಅಂತಿಮವಾಗಿ ನಮ್ಮ ದೇಶದ ಸಂವಿಧಾನದಲ್ಲಿ ಒಂದು ಸ್ಥಾನ ಕಂಡುಕೊಳ್ಳುತ್ತದೆ ಎಂದುಕೊಳ್ಳುತ್ತೇನೆ. ಮಾನ್ಯರೆ, ಈ ಮಾತುಗಳೊಂದಿಗೆ ನಾನು ಸದನಕ್ಕೆ ಪ್ರಸ್ತಾವವನ್ನು ಶಿಫಾರಸು ಮಾಡುತ್ತೇನೆ.

**ಶ್ರೀ ಸಾರಂಗಧರ ದಾಸ್** (ಒರಿಸ್ಸಾ ಸಂಸ್ಥಾನಗಳು) : ಮಾನ್ಯ ಉಪಸಭಾಧ್ಯಕ್ಷರೆ, ಎಲ್ಲ ಹಿಂದಿನ ಭಾಷಣಕಾರರಂತೆ ಸಂವಿಧಾನ ರಚನಾಸಮಿತಿಯನ್ನು ಮತ್ತು ವಿಶೇಷವಾಗಿ ಅದರ ಅಧ್ಯಕ್ಷ ಡಾ. ಅಂಬೇಡ್ಕರರನ್ನು ಅವರ ಪರಿಶ್ರಮಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ ಅದೇ ಸಮಯಕ್ಕೆ ನಾನು ಅವರ ಭಾಷಣದಲ್ಲಿನ ಕೆಲವು ವಿಷಯಗಳನ್ನು ಒಪ್ಪಲಾರೆ. ಅವರು, "ಹಳ್ಳಿ ಎಂದರೇನು ಸ್ಥಳೀಯತೆಯ ಒಂದು ತೋಡು ಮತ್ತು ಅಜ್ಞಾನ, ಸಂಕುಚಿತ ಮನೋಭಾವ ಮತ್ತು ಮತೀಯತೆಗಳ ಒಂದು ಗವಿ" ಎಂದು ಹೇಳಿದಾಗ ನಾನು ಈ ಸದನದ ಗೌರವಾನ್ವಿತ ಸದಸ್ಯ ಮತ್ತು ಹಾಗೂ ರಾಷ್ಟ್ರೀಯ ಸರ್ಕಾರದ ಒಬ್ಬ ಸಚಿವ ಕೂಡ ನಮ್ಮ ಹಳ್ಳಿಗಳ ಕುರಿತು ಇಂತಹ ಕಲ್ಪನೆ ಹೊಂದಿರುವುದಕ್ಕೆ ಚಕಿತನಾದೆ. ನಮ್ಮ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಪಾಶ್ಚಾತ್ಯ ಶಿಕ್ಷಣ ಹರವಿನೊಂದಿಗೆ ನಾವು ಹಳ್ಳಿಗಳೊಡನೆ ಸಂಪರ್ಕ ಕಳೆದುಕೊಂಡಿದ್ದೇವೆ. ನಮ್ಮ ನಾಯಕ ಮಹಾತ್ಮ ಗಾಂಧಿಯವರು ಮೂವತ್ತು ವರ್ಷಗಳ ಹಿಂದೆ ಬುದ್ಧಿವಂತರನ್ನು ಹಳ್ಳಿಗಳಿಗೆ ಹಿಂತಿರುಗಿ ಎಂದು ಸಲಹೆ ಮಾಡಿದುದನ್ನು ನಾನು ಇಲ್ಲಿ ಹೇಳಲೇಬೇಕು. ಕಳೆದ ಮೂವತ್ತು ವರ್ಷಗಳು ನಾವು ಹಳ್ಳಿಗಳಿಗೆ ಹೋಗುತ್ತಿದ್ದೇವೆ ಮತ್ತು ಗ್ರಾಮೀಣರೊಂದಿಗೆ ನಾವು ನಾವೇ ಒಂದಾಗಿದ್ದೇವೆ ಮತ್ತು ಡಾ. ಅಂಬೇಡ್ಕರರ ಆರೋಪಕ್ಕೆ ಉತ್ತರವಾಗಿ ನಾನು ಹಳ್ಳಿಗಳಲ್ಲಿ ಯಾವ ಸ್ಥಳೀಯ ಸಂಕುಚಿತತೆ ಇಲ್ಲ ಎಂದು ಹೇಳುವೆ. ಅಜ್ಞಾನ ಇದೆ... ಹೌದು, ಇಂಗ್ಲಿಷ್ ಭಾಷೆಯ ಮತ್ತು ಹಾಗೂ ನಮ್ಮ ಹಲವು ಲಿಖಿತ ಭಾಷೆಗಳನ್ನು ಕುರಿತು ಅಜ್ಞಾನ ಇದೆ ಮತ್ತು ಆ ಸನ್ನಿವೇಶ ನಾವು ಹೊಂದಿದ್ದ ಸರ್ಕಾರದ ವಿಧದ ಕಾರಣಗಳಿಂದಾದ್ದು. ಆ ಸರ್ಕಾರ ನಮ್ಮ ಶೈಕ್ಷಣಿಕ

ಪದ್ಧತಿಯನ್ನು ನಾಶ ಮಾಡಿತು. ಶಾಸ್ತ್ರಗಳು ಮತ್ತು ಪುರಾಣಗಳಿಂದ ಸಂಗ್ರಹಿಸಿದ ಪ್ರಕೃತಿ ಮತ್ತು ವಿವೇಕದ ಜ್ಞಾನ ಕುರಿತಂತೆ ನಮ್ಮ ಆಧುನಿಕ ನಗರಗಳಲ್ಲಿ ಇಂತಹ ಹಳ್ಳಿಗಳಲ್ಲಿ ಹೆಚ್ಚು ವಿವೇಕ ಮತ್ತು ಹೆಚ್ಚು ಜ್ಞಾನ ಇದೆ ಎಂದು ನಾನು ಹೇಳುತ್ತೇನೆ.

ನಾನು ನಗರಗಳ ದ್ವೇಷಿಯಲ್ಲ. ನಾನು ಎರಡು ಖಂಡಗಳಲ್ಲಿನ ನಗರಗಳಲ್ಲಿ ವಾಸಿಸಿದ್ದೇನೆ. ಆದರೆ ದುರದೃಷ್ಟವಶಾತ್ ಭಾರತದಲ್ಲಿ ನಮ್ಮ ನಗರಗಳು ಇತರ ದೇಶಗಳ ನಗರಗಳಿಗಿಂತ ಸಂಪೂರ್ಣ ವಿಭಿನ್ನ. ನಮ್ಮ ಜನ ನಗರಗಳಲ್ಲಿ ವಾಸಿಸುವವರು ಗ್ರಾಮಗಳಿಂದ, ಅವರ ಜೀವನದಿಂದ ತುಂಬ ದೂರ ಇದ್ದಾರೆ. ಆದುದರಿಂದಲೇ ನಾವು ಹಳ್ಳಿಗಳಲ್ಲಿ ಏನೂ ಅಂಥ ಉತ್ತಮವಾದುದಿಲ್ಲ ಎನ್ನುವ ಹಂತ ತಲಪಿದ್ದೇವೆ. ಈಗ ಈ ಕಲ್ಪನೆ ಬದಲಾಗುತ್ತಿದೆ, ಅದು ಕಾಂಗ್ರೆಸ್ ವರ್ತುಲದ ಆಚೆ ಬದಲಾಗುತ್ತಿದೆಯಾದರೆ ನನಗೆ ತಿಳಿದಿಲ್ಲ. ನಾನು ಸಕಾರಾತ್ಮಕವಾಗಿ ಹೇಳುವುದಾದರೆ. ಕಾಂಗ್ರೆಸ್ ವಲಯಗಳಲ್ಲಿ, ಹಳ್ಳಿಗಳ ಕಲ್ಪನೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಬೇರೂರಿದೆ. ಆದುದರಿಂದ ಡಾ. ಅಂಬೇಡ್ಕರ್ ಈ ವಿಷಯವನ್ನು ಪುನಃ ಪರಿಗಣಿಸಬೇಕು ಮತ್ತು ಹಳ್ಳಿಗಳಿಗೆ ಸಿಗಬೇಕಾದುದನ್ನು ಕೊಡಬೇಕು ಎಂದು ಮನವಿ ಮಾಡುತ್ತೇನೆ. ಏಕೆಂದರೆ ಗ್ರಾಮಗಳು ಇಷ್ಟರಲ್ಲೆ ತಮ್ಮ ನೆಲೆಯನ್ನು ಕಂಡುಕೊಳ್ಳುತ್ತವೆ.

ಈಗ ನಾವು ಕರಡು ಸಂವಿಧಾನಕ್ಕೆ ಬಂದರೆ, ಕೇಂದ್ರಕ್ಕೆ ಹೆಚ್ಚು ಅಧಿಕಾರದ ವಿಷಯದಲ್ಲಿ ನಾನು ಡಾ. ಅಂಬೇಡ್ಕರ್ ಅವರೊಂದಿಗೆ ಸಹಮತ ಹೊಂದಿದ್ದೇನೆ. ಈಗ ನಮಗೆ ಒಂದು ಬಲಿಷ್ಠವಾದ ಕೇಂದ್ರದ ತೀವ್ರ ಅಗತ್ಯವಿದೆ. ವಿವಿಧ ಪ್ರಾಂತ್ಯಗಳ ಜನರ ಮೂಲ ಸಂಸ್ಕೃತಿ ಒಂದೇ ಎಂದು ಏನೇ ಹೇಳಲಿ ನಾವು ವಿಭಿನ್ನ ಸಂಸ್ಕೃತಿಯ ಜನ. ಬ್ರಿಟಿಷರ ನಿರ್ಗಮನದ ಅನುಕೂಲ ಪಡೆದು ಎಲ್ಲ ಬಗೆಯ ವಿಚ್ಛಿದ್ರಕಾರಿ ಶಕ್ತಿಗಳು ಹೆಡೆಯೆತ್ತುತ್ತಿವೆ. ಆದುದರಿಂದ ಕೇಂದ್ರ ಬಲಿಷ್ಠವಾಗಿರಬೇಕು ಎಂಬುವುದು ಅಗತ್ಯ. ಹಾಗಾಗಿ ದೇಶದ ಎಲ್ಲ ವಿಭಿನ್ನ ಜನಗಳನ್ನು ಒಂದು ರಾಷ್ಟ್ರದೊಳಕ್ಕೆ ಒಟ್ಟಿಗೆ ಬೆಸೆಯಬಹುದು. ಈ ಸಂಬಂಧವಾಗಿ, ನಾನು ತಮ್ಮನ್ನು ಈ ಭಾಷಾವಾರು ಪ್ರಾಂತ್ಯಗಳ ಪರಿಕಲ್ಪನೆಯನ್ನು ಅಮಾನತ್ತಿನಲ್ಲಿಡಬೇಕೆಂದು ಕೋರುತ್ತೇನೆ. ಇದು ಐದು ಅಥವಾ ಹತ್ತು ವರ್ಷಗಳ ಕಾಲ. ಏಕೆಂದರೆ ನಾನು ಕೂಡ, ನಮ್ಮ ಪ್ರಾಂತ್ಯಕ್ಕೆ ಅನ್ಯಾಯಮಾಡಲಾಗಿದೆ ಎಂದು ಆಲೋಚಿಸುವ ಪ್ರಾಂತ್ಯದಿಂದ ಬಂದಿರುವೆನಾದರೂ, ಕಳೆದ ಒಂದು ವರ್ಷದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ಕಲ್ಪನೆಯಿಂದ ನೆರೆಯ ಪ್ರಾಂತ್ಯಗಳ ಜನರಿಗೆ ಒಳ್ಳೆಯದಕ್ಕಿಂತ ಕೆಡುಕೇ ಆಗಿದೆ. ಇದು ಕಹಿ ನೆನಪಿಗೆ ಕಾಲವಲ್ಲ, ನೆರೆಯ ಪ್ರಾಂತ್ಯಗಳ ನಡುವೆ ನಾವು ಹೊಂದಾಣಿಕೆ ಬಯಸುತ್ತೇವೆ. ಆದುದರಿಂದಲೇ ನಾನು ಕಡೇಪಕ್ಷ ಐದು ವರ್ಷಗಳ ಕಾಲ ಭಾಷಾವಾರು ಪ್ರಾಂತ್ಯಗಳ ಕಲ್ಪನೆಯನ್ನು ತಡೆಹಿಡಿಯಬೇಕೆಂದು ಪ್ರಬಲವಾಗಿ ಕೋರುತ್ತೇನೆ. ಯಾವುದೇ ದೇಶದಲ್ಲಿ ಸ್ವಾತಂತ್ರ್ಯ ಪ್ರೀತಿಸುವ ಪ್ರತಿಯೊಬ್ಬ ಮನುಷ್ಯ ಒಂದು ರಾಷ್ಟ್ರಭಾಷೆ ಇರಬೇಕೆಂದು ತಿಳಿದಿದ್ದಾನೆ. ನಾವು ಪ್ರಾಂತೀಯ ಭಾಷೆಗಳನ್ನು ಹೊಂದಿದ್ದೇವೆ. ಅವುಗಳಲ್ಲಿ ಕೆಲವು ತುಂಬ ಅಭಿವೃದ್ಧಿಯಾಗಿವೆ ಮತ್ತು ತುಂಬ ಅತ್ಯುನ್ನತ ಕ್ರಮದ್ದೂ ಆಗಿವೆ. ಆದರೆ ಇತರೆ ಕೆಲವು ಭಾಷೆಗಳು ಹಿಂದೆಬಿದ್ದಿವೆ. ಆದ್ದರಿಂದ ವಿವಿಧ ಪ್ರಾಂತೀಯ ಭಾಷೆಗಳ ನಡುವೆ ಒಂದು ಸ್ಪರ್ಧೆ ಇದೆ. ಆದರೆ, ಬಹುಸಂಖ್ಯೆಯ ಜನ ಮಾತನಾಡುವ ಅಥವಾ ಅರ್ಥಮಾಡಿಕೊಳ್ಳುವ ಒಂದು ಭಾಷೆಯನ್ನು ನಾವು ಉಪಯೋಗಿಸಬೇಕು ಎಂಬುದನ್ನು ನಾವು ನೆನಪಿಡಬೇಕು. ಈ ಪರೀಕ್ಷೆಗೆ ನಿಲ್ಲಬಹುದಾದುದು ಹಿಂದಿ ಬಿಟ್ಟರೆ ಬೇರೆ ಭಾಷೆ ಇಲ್ಲ. ಹಿಂದಿ, ಸಂಸ್ಕೃತವನ್ನು ಆಧರಿಸಿದ ಒಂದು ಭಾಷೆ ಏಕೆಂದರೆ ವಿವಿಧ ಪ್ರಾಂತ್ಯಗಳಲ್ಲಿ ನಾವು ಕೆಲ ಮಟ್ಟಿಗೆ ಸಂಸ್ಕೃತವನ್ನು ಹಿಂದಿನ ಜನಾಂಗಗಳಂತೆ ಪೂರ್ಣವಾಗಿ ಅಲ್ಲವಾದರೂ ಸ್ವಲ್ಪಮಟ್ಟಿಗಾದರು ಓದುತ್ತೇವೆ. ನಮ್ಮ ಪ್ರಾದೇಶಿಕಭಾಷೆಗಳು ಕೂಡ ಸಂಸ್ಕೃತವನ್ನು ಆಧರಿಸಿ ಇವೆ. ನಮ್ಮ ಸಾಧು ಭಾಷೆ ಎಂದು ನನ್ನ ಪ್ರಾಂತ್ಯದಲ್ಲಿ ಇದಕ್ಕೆ ಹೇಳುತ್ತೇವೆ. ಅಂದರೆ ವಿದ್ವತ್ಪೂರ್ಣ ಭಾಷೆ. ಒರಿಸ್ಸಾದಲ್ಲಿ ಮಾತನಾಡುವ ಈ ವಿದ್ವತ್ಪೂರ್ಣ ಭಾಷೆಯನ್ನು ಹಿಂದಿ ಜನರು ಅರ್ಥಮಾಡಿಕೊಳ್ಳುವರು ಅಥವಾ ಪಂಜಾಬಿನ ಜನ ಕೂಡ

ಅರ್ಥಮಾಡಿಕೊಳ್ಳುವರು. ಆದುದರಿಂದ ಕೂಡ ಒರಿಯಾ ಜನ ಹಿಂದಿಯನ್ನು ಮಾತನಾಡಲು ಸಮರ್ಥರಿಲ್ಲದಿದ್ದರೂ ಅರ್ಥಮಾಡಿಕೊಳ್ಳುವರು. ಇದೇ ಸನ್ನಿವೇಶ ಬಂಗಾಳ, ಮಹಾರಾಷ್ಟ್ರ ಮೊದಲಾದೆಡೆಗಳಲ್ಲಿ ಸಹ ಇದೆ. ನಾವು ಆ ದೃಷ್ಟಿಯಿಂದ, ಅದರತ್ತ ನೋಡಿದಾಗ, ಇತರ ಹಿಂದೀತರ ಭಾಷೆ ಮಾತನಾಡುವ ಗೆಳೆಯರು, ವಿಶಿಷ್ಟವಾಗಿ ದಕ್ಷಿಣಭಾರತದಲ್ಲಿ ಹಿಂದಿಯನ್ನು ನಮ್ಮ ರಾಷ್ಟ್ರಭಾಷೆಯಾಗಿ ಅಳವಡಿಸುವ ಬೇಡಿಕೆಯನ್ನು "ಭಾಷೆಯ ಸಾರ್ವಭೌಮತೆ" ಎಂದು ಪರಿಗಣಿಸುವುದು ನನಗೆ ಅಚ್ಚರಿ ಉಂಟುಮಾಡಿದೆ. ಭಾಷೆಯ ಸಾರ್ವಭೌಮತೆ ಎಲ್ಲಿದೆ ಎಂದು ನಾನು ನೋಡಿಲ್ಲ. ದಕ್ಷಿಣಭಾರತೀಯರು ಇಂಗ್ಲಿಷಿಗಿಂತ ಬೇರೆ ಯಾವ ಭಾಷೆಯಲ್ಲಿ ಮಾತನಾಡಲಾರದವರಾದರೆ, ಮದ್ರಾಸ್ ಪ್ರಾಂತ್ಯದಲ್ಲಿ ವಾಸಿಸುವ ಲಕ್ಷಾಂತರ ಜನರು ಇಂಗ್ಲಿಷ್ ಅರ್ಥಮಾಡಿಕೊಳ್ಳುವರು ಎಂದು ಅವರ ಅರ್ಥವೇ? ಎಲ್ಲೋ ಕೆಲವರು ಮತ್ತು ನಗರಗಳಲ್ಲಿ ಅವಿದ್ಯಾವಂತ ಜನರಲ್ಲಿ ಕೆಲವರು ಕೂಡ ಇಂಗ್ಲಿಷ್ ಅರ್ಥಮಾಡಿಕೊಳ್ಳುವರು; ಆದರೆ ಹಳ್ಳಿಗಳಲ್ಲಿಯಲ್ಲ. ನಾವು ಇಂಗ್ಲಿಷನ್ನು ನಿಷೇಧಿಸಬೇಕು. ಆದರೆ ಅದೇ ಕಾಲಕ್ಕೆ ಹಿಂದಿಯ ಪರ ವಕಾಲತ್ತು ವಹಿಸುವವರಿಗೆ ನಾನು, ಅದನ್ನು ತತ್‌ಕ್ಷಣವೇ ಮಾಡಲು ಆಗುವುದಿಲ್ಲ ಎಂದು ಹೇಳುವೆ. ದಕ್ಷಿಣಭಾರತದ ಜನರಿಗೆ ಮತ್ತು ಇತರೆ ಹಿಂದಿಯೇತರ ಭಾಷೆ ಮಾತನಾಡುವ ಪ್ರಾಂತ್ಯಗಳಿಗೆ ಸ್ವಲ್ಪ ಸಮಯ ಕೊಡಬೇಕು. ಹಿಂದಿ ಭಾಷೆಯೊಂದಿಗೆ ಚೆನ್ನಾಗಿ ಪಳಗಲು ಮತ್ತು ರಾಷ್ಟ್ರಭಾಷೆಯಲ್ಲಿ ಉತ್ತರಭಾರತ ಮತ್ತು ಪಶ್ಚಿಮ ಭಾರತದೊಂದಿಗೆ ತಮ್ಮ ಸಂಪರ್ಕಗಳು ಕಲ್ಪಿಸಲು ಇದು ಅಗತ್ಯ.

ಮುಂದಿನ ವಿಷಯ ನಾನು ಹೇಳಬಯಸುವುದು ಭಾರತೀಯ ರಾಜ್ಯಗಳನ್ನು ಕುರಿತು. ನಾವು ಸಂವಿಧಾನದ ಸಿದ್ಧಾಂತ ಸೂತ್ರಗಳನ್ನು ಮೊದಲು ಪರಿಗಣಿಸಿದಾಗ ಅದೂ ಹತ್ತು ತಿಂಗಳುಗಳ ಹಿಂದೆ, ಭಾರತೀಯ ರಾಜ್ಯಗಳು ಒಂದು ವಿಭಿನ್ನ ಸ್ಥಿತಿಯಲ್ಲಿದ್ದವು. ಆಗಿನಿಂದ ವಿಷಯಗಳು ಬದಲಾಗಿವೆ. ನಾವು ಹೇಗೆ ಭಾರತೀಯ ಪ್ರಾಂತ್ಯಗಳ ಘಟಕಗಳನ್ನು ಹೊಂದುತ್ತೇವೆಯೋ, ಎಂದು ಅವೆಲ್ಲವನ್ನು ಘಟಕಗಳು ಎಂದು ಕರೆಯುತ್ತೇವೆಯೋ ಕಾಣಲಾರೆ. ಆದರೂ ಭಾರತೀಯ ರಾಜ್ಯಗಳು ಪ್ರಾಂತ್ಯಗಳೊಂದಿಗೆ ಸರಿಸಮವಾಗಿಲ್ಲ. ವಿಶಿಷ್ಟವಾಗಿ, ಭಾರತೀಯ ರಾಜ್ಯಗಳ ಉಚ್ಚನ್ಯಾಯಾಲಯಗಳು ಸರ್ವೋಚ್ಚನ್ಯಾಯಾಲಯದ ಆಡಳಿತಾಧಿಕಾರದಡಿ ಇರುವುದಿಲ್ಲ ಎಂಬುದನ್ನು ನಾನು ಮನಗಾಣುತ್ತಿದ್ದೇನೆ. ಮೂಲಭೂತ ಹಕ್ಕುಗಳನ್ನು ಕುರಿತ ಅಧ್ಯಾಯದಲ್ಲಿ ಈ ಹಕ್ಕುಗಳು ಭಾರತದ ಪ್ರತಿಯೊಬ್ಬ ಪೌರನಿಗೂ ದೊರೆಯುವ ಖಾತರಿ ಇದೆ ಎಂದು ಹೇಳಲಾಗಿದೆ. ಒಬ್ಬ ವ್ಯಕ್ತಿ–ಗಂಡಸಿರಲಿ ಅಥವಾ ಹೆಂಗಸಿರಲಿ, ಭಾರತೀಯ ರಾಜ್ಯದಲ್ಲಿರಲಿ, ಅಥವಾ ಕಳೆದ ಕೆಲವು ತಿಂಗಳುಗಳ ಅವಧಿಯಲ್ಲಿ ರೂಪಿಸಿದಂತೆ ರಾಜ್ಯಗಳ ಒಂದು ಒಕ್ಕೂಟದಲ್ಲಿರಲಿ ಭಾರತದ ಒಬ್ಬ ಪೌರ ಮತ್ತು ಅವನ ಮೂಲಭೂತ ಹಕ್ಕುಗಳನ್ನು ಅಲ್ಲಿ ಸರ್ಕಾರದಿಂದ ಮೊಟಕುಗೊಳಿಸಿದಲ್ಲಿ ಉಚ್ಚನ್ಯಾಯಾಲಯಕ್ಕೆ ಒಂದು ಮನವಿ ಸಲ್ಲಿಸಬಹುದು ಮತ್ತು ಅದೇ ಅಂತಿಮ ತೀರ್ಪು. ಅದೇ ಪ್ರಾಂತ್ಯಗಳಲ್ಲಿ ವಿಷಯ ಸರ್ವೋಚ್ಚನ್ಯಾಯಾಲಯಗಳವರೆಗೆ ಹೋಗಬಹುದು ಎಂದು ನಾನು ತಿಳಿಯುತ್ತೇನೆ. ರಾಜ್ಯದಲ್ಲಿರುವ ಪುರುಷನಾಗಲಿ, ಮಹಿಳೆಯಾಗಲಿ ಸಂಸ್ಥಾನಕ್ಕೆ ಸೇರಿದ ಸ್ತ್ರೀಪುರುಷರಿಗೆ ಸಮನಾಗುವರೋ ತಿಳಿಯದು.

ಹಲವು ರಾಜ್ಯಗಳಿಗೆ ಸಂಬಂಧಿಸಿದಂತೆ ಇತರ ವಿಷಯಗಳಿವೆ. ವಿಶೇಷವಾಗಿ ರಜಪುತಾನ ಮತ್ತು ಮಧ್ಯಭಾರತ. ಅಲ್ಲಿ ಜಾಗೀರುದಾರರು ಇದ್ದಾರೆ. ಇವರು ಜಯಪುರ, ಜೋಧಪುರ ಮತ್ತು ಬಿಕಾನೇರ್‌ಗಳ ಮಹಾರಾಜರ ಅಧೀನದಲ್ಲಿರುವ ನೆಲದ ಶೇಕಡಾ ೭೫ರಿಂದ ೯೦ರಷ್ಟರ ಒಡೆಯರು. ಉತ್ಪಾದಕನಿಂದ ಜಾಗೀರುದಾರ ಒಳನಾಡು ಸುಂಕ, ಸಂಗ್ರಹಿಸುವ ಪದ್ಧತಿ ಇದೆ. ಬಳಿಕ ಮಹಾರಾಜರ ಸರ್ಕಾರದಿಂದ ಪುನಃ ಉಪಯೋಗಿ ಸಾಮಗ್ರಿಗಳನ್ನು ಸರಕುಗಳನ್ನು ನೆರೆರಾಜ್ಯಕ್ಕೆ ರಫ್ತು ಮಾಡಿದಾಗ, ಆ ರಾಜ್ಯ ಕೂಡ ಒಂದು ಆಮದು ಸುಂಕ ಹಾಕುತ್ತದೆ. ನಾನು ಜಯಪುರದಲ್ಲಿ ಬೆಳೆದ ಹತ್ತಿಯ ಒಂದು ವಿಶಿಷ್ಟ ನಿದರ್ಶನ ಕೊಡಬಲ್ಲೆ. ಎರಡು ಸುಂಕಗಳನ್ನು ಜಾಗೀರುದಾರ ಪ್ರದೇಶದಲ್ಲಿ ಪಾವತಿಸಲಾಗುತ್ತದೆ. ಜಯಪುರದಿಂದ ಹೊರಗೆ ಹೋಗುವಾಗ

ಬಿಕಾನೇರ್‌ನಲ್ಲಿ ಇನ್ನೊಂದು ಆಮದು ಸುಂಕವನ್ನು ಹತ್ತಿ ಬೆಳೆಯದ ಬಿಕಾನೇರಿಗೆ ರಫ್ತಾದಾಗ ಪಾವತಿಸಲಾಗುತ್ತದೆ. ಈ ಪದ್ಧತಿಯನ್ನು ಬದಲಾಯಿಸಬೇಕು ಮತ್ತು ಎಷ್ಟು ಬೇಗ ಅವನ್ನು ಬದಲಾಯಿಸುತ್ತದೋ ಅಷ್ಟು ಬೇಗ ಪ್ರಾಥಮಿಕ ಉತ್ಪಾದಕನಿಗೆ ಹಾಗೂ ಗ್ರಾಹಕನಿಗೆ ಮತ್ತು ವ್ಯಾಪಾರ–ವಾಣಿಜ್ಯದ ವಿಸ್ತರಣೆಗೂ ಉತ್ತಮವಿರುತ್ತದೆ.

ಕೊನೆಯದಾಗಿ ನಾನು ಒತ್ತಿ ಹೇಳಲಿರುವ ವಿಷಯವೊಂದಿದೆ. ಅದು ಪ್ರಾಂತ್ಯಗಳೊಳಗೆ ಬಂದಿರುವ ಹಲವು ರಾಜ್ಯಗಳಲ್ಲಿನ ಬುಡಕಟ್ಟು ಜನಸಂಖ್ಯೆ, ವಿಶೇಷವಾಗಿ ಒರಿಸ್ಸಾ ಮತ್ತು ಮಧ್ಯಪ್ರಾಂತ್ಯಗಳಲ್ಲಿ ಕೇಂದ್ರ ಸರ್ಕಾರ ಅವರ ಜೀವನದ ಮಟ್ಟವನ್ನು ಸುಧಾರಿಸಬೇಕು ಮತ್ತು ಎಲ್ಲ ಜನರಿಗೂ ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಕೊಡಬೇಕಾದುದು ಅದರ ಕರ್ತವ್ಯವಾಗಿದೆ. ಈ ಬುಡಕಟ್ಟು ಜನ, ದುರದೃಷ್ಟವಶಾತ್, ಶಿಕ್ಷಣ, ನೈರ್ಮಲ್ಯ ಮತ್ತು ಆರ್ಥಿಕ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ತುಂಬ ಹಿಂದುಳಿದ ಸ್ಥಿತಿಯಲ್ಲಿದ್ದರು. ಒರಿಸ್ಸಾದಲ್ಲಿ ಸುಮಾರು ಇಪ್ಪತ್ತು ಲಕ್ಷದಷ್ಟು ಬುಡಕಟ್ಟು ಜನ ಇದ್ದರೆ ಮಧ್ಯಪ್ರಾಂತ್ಯಗಳಲ್ಲಿ ಸುಮಾರು ೧೫ ಲಕ್ಷ ಇದ್ದಾರೆ. ನಮ್ಮ ಈ ಸಹಪೌರರ ಶೀಘ್ರ ಮುನ್ನಡೆಗೆ ಕೇಂದ್ರದಿಂದ ದೊಡ್ಡ ಮೊತ್ತದ ಹಣವನ್ನು ಹಂಚಿಕೆ ಮಾಡುವುದು ಆವಶ್ಯಕ. ಏಕೆಂದರೆ ಪ್ರಾಂತ್ಯಗಳು ಅಂತಹ ಭಾರಿ ಹೊರೆಯನ್ನು ಭರಿಸಲಾಗದು. ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಹಣಕಾಸು ಏರ್ಪಾಡುಗಳ ವಿಷಯದಲ್ಲಿ, ಯಾವುದೇ ತಲಾ ಹಂಚಿಕೆ ಆಧಾರದಲ್ಲಿದ್ದಂತೆ, ಬುಡಕಟ್ಟು ಜನರ ಉದ್ದೇಶಗಳಿಗೆ, ಹಣವು ಇತರ ಜನರಿಗೆ ಇರತಕ್ಕ ಸಾಧಾರಣ ಹಂಚಿಕೆಯ ನಾಲ್ಕು ಅಥವಾ ಐದುಪಟ್ಟು ಇರಬೇಕು. ಇದು ಆವಶ್ಯಕ. ನಾನು ಈ ಅಂಶವನ್ನು ವಿಶಿಷ್ಟವಾಗಿ ಒತ್ತಿ ಹೇಳುವುದು ಏಕೆಂದರೆ ನಾವು ಅತ್ಯಂತ ಶೀಘ್ರವಾಗಿ ಅವರ ಸ್ಥಾನಮಾನ ಸುಧಾರಿಸಬೇಕಿದ್ದಲ್ಲಿ, ಅಗತ್ಯವಿದ್ದಾಗ ಮತ್ತು ಎಲ್ಲೆಲ್ಲಿ ಜನ ಹಿಂದುಳಿದಿರುವರೋ ಅಲ್ಲಿ ಹೆಚ್ಚು ಹಣವನ್ನು ಖರ್ಚುಮಾಡುವುದು ಆವಶ್ಯಕ.

**ಚೌಧುರಿ ರಣಬೀರ್ ಸಿಂಗ್** (ಪೂರ್ವ ಪಂಜಾಬ್ : ಸಾಮಾನ್ಯ) : *[ಮಾನ್ಯ ಉಪಸಭಾಧ್ಯಕ್ಷರೆ, ಡಾ. ಅಂಬೇಡ್ಕರರ ಪ್ರಸ್ತಾವವನ್ನು ಬೆಂಬಲಿಸುವಲ್ಲಿ ನಾನು ಈ ಸದನಕ್ಕೆ ಕೆಲವು ವಿಷಯಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಆರಂಭದಲ್ಲೆ ನಾವು ರಾಷ್ಟ್ರಗೀತೆ, ರಾಷ್ಟ್ರಧ್ವಜ ಮತ್ತು ರಾಷ್ಟ್ರಭಾಷೆ ಕುರಿತಂತೆ ನಿರ್ಧರಿಸಿದ್ದರೆ ಉತ್ತಮವಿರುತ್ತಿತ್ತು ಎಂದು ಸೇಠ್ ಗೋವಿಂದ ದಾಸ್ ಹೇಳಿದ ಮಾತಿಗೆ ನನ್ನ ಸಹಮತವಿದೆ. ನನ್ನೆ ಶ್ರೀ ಮೈತ್ರಾಜಿ ಹೇಳುವುದಕ್ಕೆ ಸಂಬಂಧಿಸಿದಂತೆ, ನಮ್ಮ ದಕ್ಷಿಣದ ಮಿತ್ರರು ಹಿಂದಿಯಲ್ಲಿ ಮಾತನಾಡಲು ಮತ್ತು ಒಮ್ಮೆಲೇ ಮನೆಯ ವ್ಯವಹಾರಗಳಿಗೆ ಉಪಯೋಗಿಸುವುದನ್ನು ನಾವು ನಿರೀಕ್ಷಿಸಲಾಗುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ರಾಷ್ಟ್ರಭಾಷೆಯ ಸಮಸ್ಯೆಯನ್ನು ಮೊದಲೇ ಇತ್ಯರ್ಥಗೊಳಿಸಿದ್ದಿದ್ದರೆ ಒಂದು ಅನುಕೂಲವಿರುತ್ತಿತ್ತು ಮತ್ತು ಈಗಲೂ ಕೂಡ ಅನುಕೂಲ ಪ್ರಾಪ್ತವಾಗುತ್ತದೆ. ಅದು ಹೇಗೆಂದರೆ ಆ ವೇಳೆಗೆ ಯಾವ ಭಾಷೆ ರಾಷ್ಟ್ರಭಾಷೆಯಾಗಬೇಕು ಮತ್ತು ತಾವು ಯಾವ ಭಾಷೆಯನ್ನು ಕಲಿಯಬೇಕೆನ್ನುವುದು ಜನರಿಗೆ ತಿಳಿಯುತ್ತಿತ್ತು.

ಅಧಿಕಾರದ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣದ ಸಮಸ್ಯೆಯನ್ನು ಆಳವಾಗಿ ಚರ್ಚಿಸುವುದಿಲ್ಲ. ಆದರೆ ನಾನು ಒಂದು ವಿಷಯಕ್ಕೆ ಸದನದ ಗಮನ ಸೆಳೆಯಲು ಪ್ರಯತ್ನಿಸುತ್ತೇನೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಯಾವಾಗಲೂ ನಮಗೆ ರಾಜಕೀಯ ಅಥವಾ ಆರ್ಥಿಕವಲಯದಲ್ಲಿ ವಿಕೇಂದ್ರೀಕರಣ ಅಧಿಕಾರದ ಇತರ ವಿಧಾನಗಳಿಗಿಂತ ಹೆಚ್ಚಿನದಾದ ಒಂದು ಅಧಿಕಾರವನ್ನು ಉಂಟುಮಾಡುತ್ತದೆ ಎಂದು ಕಲಿಸಿದರು. ಜೊತೆಗೆ ಈ ಅಭಿಪ್ರಾಯಕ್ಕೆ ಇತರ ಹಲವು ಕಾರಣಗಳೂ ಇವೆ. ನಾನೊಬ್ಬ ಹಳ್ಳಿಗ. ಒಬ್ಬ ರೈತನ ಮನೆಯಲ್ಲಿ ಹುಟ್ಟಿ ಬಂದವನು. ಸ್ವಾಭಾವಿಕವಾಗಿ ನಾನು ಅದರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದೇನೆ. ನಾನು ಅದನ್ನು ಪ್ರೀತಿಸುತ್ತೇನೆ. ಅದರೊಂದಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳು ನನ್ನ ದೇಶ ನಿರ್ಮಾಣದಲ್ಲಿ ಗ್ರಾಮೀಣರು ತಮ್ಮದಾದ ಪಾಲು ಪಡೆಯಬೇಕು ಮತ್ತು ಗ್ರಾಮೀಣರು ಪ್ರತಿ ವಲಯದಲ್ಲಿ ತಮ್ಮ ಪ್ರಭಾವ ಹೊಂದಿರಬೇಕು ಎಂದು ನಾನು ತಿಳಿಯುತ್ತೇನೆ. ಜತೆಗೆ ಇನ್ನೊಂದು ವಿಷಯವಿದೆ. ಅದರ ಬಗೆಗೆ ಇಂದು

ಬೆಳಗ್ಗೆ ಬಾಬು ಠಾಕುರ್ ದಾಸ್‌ಜೀ ಗಮನ ಸೆಳೆದಿರುವರು. ಗ್ರಾಮೀಣ ಮತ್ತು ನಗರಗಳ ನಡುವಿನ ಭೇದವನ್ನು ನಿರ್ಮೂಲನಮಾಡಬೇಕು. ಅದು ಗ್ರಾಮೀಣ ಪ್ರದೇಶಗಳಿಗೆ ಲಾಭಕರ ಎಂಬುದರಲ್ಲಿ ನನಗೆ ಅನುಮಾನವಿಲ್ಲ ಮತ್ತು ಭಾರತದಂತಹ ಪ್ರದೇಶದಲ್ಲಿ ಏಳು ಲಕ್ಷಗಳಷ್ಟು ಹಳ್ಳಿಗಳು ಕೆಲವೇ ನಗರಗಳು ಮಾತ್ರ ಇವೆ ಅಲ್ಲಿ ವಿಶೇಷವಾಗಿ ಈ ಭೇದನಿವಾರಣೆ ಸೂಕ್ತ. ಆದರೆ ನಾವು ಇಂದಿನ ಸ್ಥಿತಿಗಳನ್ನು ನಿರ್ಲಕ್ಷಿಸುವಂತಿಲ್ಲ. ಹೇಗೆಲ್ಲ ಕುಶಲತೆಯಿಂದ ನಾವು ನುಣುಚಿಕೊಳ್ಳುವ ವಾದಗಳು ಮತ್ತು ಸುಂದರ ಭಾವನೆಗಳಿಂದ ಅವರನ್ನು ವಂಚಿಸಲು ಪ್ರಯತ್ನಿಸಿದರೂ ಪತ್ರಿಕೆಯ ಪ್ರಭಾವ ಮತ್ತು ಬುದ್ಧಿವಂತಿಕೆ, ನಗರಗಳಲ್ಲಿ ಮಾತ್ರ ಕೇಂದ್ರೀಕರಿಸಿದೆ ಎಂಬ ಅಂಶವನ್ನು ಕಣ್‌ತಪ್ಪಿಸಲಾಗದು ಮತ್ತು ಹಳ್ಳಿಗರು ರಾಷ್ಟ್ರದ ವ್ಯವಹಾರಗಳಲ್ಲಿ ಹೇಳುವುದು ತುಂಬ ಕಡಿಮೆ ಎನ್ನಲಾಗದು. ಈ ವಾಸ್ತವತೆಯನ್ನು ಉಪೇಕ್ಷಿಸುವುದರಿಂದ ಯಾವ ಉಪಯೋಗವಿಲ್ಲ. ಇಂದು ನಮ್ಮ ದೇಶದಲ್ಲಿ ಗ್ರಾಮ ಮತ್ತು ನಗರ ಸ್ಥಾನಗಳ ನಡುವೆ ಒಂದು ಅಂತರವನ್ನು ಕಾಯ್ದುಕೊಳ್ಳಬೇಕಿದೆ. ಸ್ಥಾನಗಳ ಮೀಸಲಾತಿಯನ್ನು ಒದಗಿಸಬೇಕು ಮತ್ತು ಅದನ್ನು ಯಾರು ಹಿಂದುಳಿದಿರುವರೋ ಅವರಿಗೆ ಒದಗಿಸಬೇಕು. ನಮ್ಮ ಸಂವಿಧಾನದಲ್ಲಿ ಒದಗಿಸಿರುವ ಮೀಸಲಾತಿ ವಿಶಿಷ್ಟವಾಗಿದೆ. ನಾವು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಒತ್ತಿ ಹೇಳುತ್ತಿದ್ದುದನ್ನು ನೆನೆಪಿಡಬೇಕು. ಅದೆಂದರೆ ಒಂದು ಗುರಿ ಸಾಧಿಸಲು ಮಾರ್ಗವನ್ನು ಬಹುಜಾಗರೂಕತೆಯಿಂದ ಪರಿಶೀಲಿಸಬೇಕು. ಒಂದು ಜಾತ್ಯತೀತ ದೇಶವನ್ನು ನಿರ್ಮಿಸುವುದು ನಮ್ಮ ಗುರಿ. ಈ ಗುರಿಯನ್ನು ನಮ್ಮ ವಿಧಾನಗಳು ನಿಯಂತ್ರಿಸುತ್ತವೆ. ಆದುದರಿಂದ, ಅಲ್ಪಸಂಖ್ಯಾತರಿಗೂ, ಪಂಗಡಗಳಿಗೂ ಏಕಾದರೂ ಮೀಸಲಿಡಬೇಕು ಎಂಬುದಕ್ಕೆ ಕಾರಣ ತಿಳಿಯದು. ಆ ಕ್ರಮವನ್ನು ಅಳವಡಿಸಲು ಕಾರಣವಾದರೂ ಏನು? ಅದು ನಮ್ಮ ಗುರಿ ಸಾಧನೆಗೆ ಭಂಗ ತರುವುದಿಲ್ಲವೆ? ಒಂದು ಜಾತ್ಯತೀತ ರಾಷ್ಟ್ರವನ್ನು ಸ್ಥಾಪಿಸುವುದು ನಮ್ಮ ಗುರಿ. ಹಾಗಿರುವಾಗ ನಾವು ಮತದ ನೆಲೆಗಟ್ಟಿನ ಮೇಲೆ ರಕ್ಷಣೆ ಒದಗಿಸಲು ನಿರ್ಧರಿಸಿದರೆ ನಮ್ಮ ಕನಸು ಸಾಕಾರಗೊಳ್ಳುವುದಿಲ್ಲ. ಇಸ್ಲಾಮ್ ಧರ್ಮದ ಅನುಯಾಯಿಗಳು ಪಡೆಯುತ್ತಿರುವ ತರಬೇತಿ, ಶಿಕ್ಷಣಮಟ್ಟ ಮತ್ತು ಅವರ ಪ್ರಾಬಲ್ಯಕ್ಕೆ ನಮ್ಮ ದೇಶದಲ್ಲಿ ಒಂದು ಪ್ರಾತ್ಯಕ್ಷಿಕೆಯ ಅಗತ್ಯ ಬೀಳುವುದಿಲ್ಲ. ಅದರ ಬಗ್ಗೆ ನಾವು ಈಗಾಗಲೆ ಸಾಕಷ್ಟು ರುಜುವಾತುಗಳನ್ನು ಕಂಡಿದ್ದೇವೆ.

ಅವರ ಸಂಘದ ಬಲದಿಂದ ಮತ್ತು ವಿದೇಶಿ ಅಧಿಕಾರದ ನೆರವಿನೊಂದಿಗೆ ದೇಶದ ವಿಭಜನೆ ತಂದರು ಎಂಬುದನ್ನು ನಾವು ನೋಡಿದ್ದೇವೆ. ಈಗಾಗಲೇ ಉಲ್ಲೇಖಿತ ಇತರ ಅಲ್ಪಸಂಖ್ಯಾತರು ಕಡಿಮೆ ಶಕ್ತಿಯುಳ್ಳವರಲ್ಲ. ಯಾವುದೇ ದೃಷ್ಟಿಕೋನದಿಂದ ನಾವು ಅವರನ್ನು ಹಿಂದುಳಿದ ಸಮುದಾಯಗಳೆಂದು ಕರೆಯಲಾಗದು. ಬೇರಾವುದೇ ಸಮೂಹವನ್ನಾದರೂ ಆ ರೀತಿ ಕರೆಯಬಹುದು. ಹರಿಜನರು ಒಂದು ಹಿಂದುಳಿದ ವರ್ಗ ರಚಿಸುತ್ತಾರೆ ಎಂಬುದು ನಿಜ. ಅನುಮಾನವೇ ಇಲ್ಲ. ಅವರ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗಳೆರಡರಿಂದಲೂ ಅವರನ್ನು ಒಂದು ಹಿಂದುಳಿದ ವರ್ಗ ಎಂದು ಕರೆಯಬಹುದು. ಆದರೆ ಈ ವಿಷಯದಲ್ಲಿ ಕೂಡಾ ನಾವು ಇನ್ನೊಂದು ಪರಿಗಣನೆಯನ್ನು ದೃಷ್ಟಿಯಲ್ಲಿಡಬೇಕು. ಅದೆಂದರೆ ನಾವು ಹರಿಜನರಿಗೆ ರಕ್ಷಣೆಗಳನ್ನು ಸಂವಿಧಾನದಲ್ಲಿ ಒದಗಿಸಿದರೆ, "ಹರಿಜನರು" ಎಂಬ ಶಬ್ದ, ಅಂತಹ ಉದ್ದೇಶ ನಮ್ಮದಲ್ಲದೆ ಹೋದರೂ ಶಾಶ್ವತವಾಗಿಬಿಡುತ್ತದೆ. ನಾವು ದೇಶದಲ್ಲಿ ವರ್ಗರಹಿತ ಸಮಾಜವೊಂದನ್ನು ರೂಪಿಸಬಯಸುತ್ತೇನೆ. ಆದರೆ ಒಂದು ವರ್ಗರಹಿತ ಸಮಾಜವನ್ನು ಉಪಬಂಧ ಸ್ಥಾನಗಳ ಮೀಸಲಾತಿಗೆ ಮಾಡುವುದರಿಂದ ರೂಪಿಸಲಾಗುವುದಿಲ್ಲ. ಇದು ಕೇವಲ ಹರಿಜನ ಶಬ್ದವನ್ನು ಶಾಶ್ವತಗೊಳಿಸಿಬಿಡುತ್ತದೆ. ನನ್ನ ಅಭಿಪ್ರಾಯದಲ್ಲಿ ಇನ್ನೊಂದು ಮಾರ್ಗ ಮತ್ತು ಅವರಿಗೆ ರಕ್ಷಣೆಗಳನ್ನೊದಗಿಸುವ ಇನ್ನು ಉತ್ತಮ ವಿಧಾನವಿದೆ. ದೇಶದಲ್ಲಿ ಎಲ್ಲ ಹಿಂದುಳಿದ ಜನರು ರೈತರು ಇಲ್ಲವೇ ಕಾರ್ಮಿಕರು. ರಷ್ಯದಲ್ಲಿ ಅಂತಹವರ ಮತದಾನದ ಹಕ್ಕನ್ನು ರದ್ದುಪಡಿಸಲಾಯಿತು. ಏಕೆಂದರೆ ಅವರು ಕೈ ಕೆಲಸಮಾಡಲಿಲ್ಲ ಮತ್ತು ತಮ್ಮ ಕಾರ್ಮಿಕ ದುಡಿಮೆಯಿಂದ ಬದುಕಲಿಲ್ಲ. ಆದರೆ ತಮ್ಮ ಬಂಡವಾಳದಿಂದ ಬರುವ ಆದಾಯದ ಮೇಲೆ ಜೀವಿಸಿದರು. ನಾವು ಅವರಿಗೆ ನಮ್ಮ ದೇಶದಲ್ಲಿ ಇಂದು

ಮತದಾನದ ಹಕ್ಕು ತೆಗೆಯದಿರಬಹುದು. ನಾವು ಅವರಿಗೆ ಅವರ ಸಂಖ್ಯೆಗಳಿಗನುಗುಣವಾಗಿ ಹಕ್ಕುಗಳನ್ನು ಕೊಡಬಹುದು ಕೂಡ. ಆದರೆ ನಾವು ಕಾರ್ಮಿಕರಿಗೆ, ರೈತರಿಗೆ ಮತ್ತು ಕೂಲಿ ಗಳಿಸುವವರಿಗೆ ರಕ್ಷಣೆ ಒದಗಿಸಬೇಕು. ರಕ್ಷಣೆಗಳೊದಗಿಸಬೇಕಾದರೆ ಅವರು ರೈತರಾಗಿರಬೇಕು ಮತ್ತು ಕೂಲಿ ಗಳಿಸುವವರಾಗಿರಬೇಕು. ಹಾಗೆ ನೋಡಿದರೆ ಕೇವಲ ಅವರಿಗೆ ಮಾತ್ರ ಸೂಕ್ತವಾಗಿ ರಕ್ಷಣೆಗಳನ್ನು ಒದಗಿಸಬಹುದು.

ಇನ್ನೊಂದು ವಿಷಯವಿದೆ. ನಾನು ಹಿಂದೆ ಹೇಳಿದಂತೆ, ಇದು ಇನ್ನೊಂದು ಗಂಭೀರ ಸಮಸ್ಯೆ ಉದ್ಭವಿಸಲು ಕಾರಣವಾಗುತ್ತದೆ ಎಂದು ಆಕ್ಷೇಪಿಸಬಹುದು. ಅದೆಂದರೆ "ರೈತ" ಮತ್ತು "ಕಾರ್ಮಿಕ" ಎಂಬ ಶಬ್ದಗಳು ಸಂವಿಧಾನದಲ್ಲಿ ಶಾಶ್ವತಸ್ಥಾನ ಕಂಡುಕೊಳ್ಳುತ್ತವೆ. ಆದರೂ ಅದು ಯಾವುದೇ ರೀತಿಯಲ್ಲಿ ಯಾರಿಗೇ ಆಗಲಿ ಹಾನಿಕಾರಕವಲ್ಲ ಎಂದು ನಾನು ಭಾವಿಸುತ್ತೇನೆ. ಇಡೀ ದೇಶದ ಜನರಿಗೆ ರೈತರು ಮತ್ತು ಕಾರ್ಮಿಕರು ಎಂದು ಹಣೆಪಟ್ಟಿ ಹಚ್ಚುವುದು ಉತ್ತಮ. ಪ್ರತಿಯೊಬ್ಬರೂ ತಮ್ಮ ಅನ್ನವನ್ನು ಕೂಲಿಯಿಂದ ಗಳಿಸಿದಲ್ಲಿ ದೇಶಕ್ಕೆ ಉತ್ತಮ ವಿಷಯ ಮತ್ತು ದೇಶ ಇಂದು ಎದುರಿಸುತ್ತಿರುವ ಆಹಾರ ಮತ್ತು ಉಡುಪಿನ ಸಮಸ್ಯೆಗಳು ಸುಲಭವಾಗಿ ಬಗೆಹರಿಯುತ್ತವೆ.

ಇನ್ನೂ ಒಂದು ಅವಲೋಕನ ಮಾಡಲು ನಾನು ಇಚ್ಛಿಸುತ್ತೇನೆ. ಇದು ನಾನು ಒಬ್ಬ ರೈತನಾಗಿ ಮಾಡಬಹುದಾಗಿದೆ. ಅದು ಹಸುಗಳ ರಕ್ಷಣೆ ಕುರಿತದ್ದು. ಪಂಡಿತ್ ಠಾಕುರ್ ದಾಸ್ ಭಾರ್ಗವ ಮತ್ತು ನಾನು ಕಾಂಗ್ರೆಸ್ ಪಕ್ಷದಲ್ಲಿ ಗೋವುಗಳ ಹತ್ಯೆ ಕುರಿತು ಜಂಟಿಯಗಿ ಒಂದು ಪ್ರಸ್ತಾವವನ್ನು ಮಂಡಿಸಿದ್ದೆವು. ಆ ಸಮಯದಲ್ಲಿ ಅದು ಸರ್ವಾನುಮತದಿಂದ ಒಪ್ಪಿಗೆಯಾಯಿತು. ಆದರೆ ದುರದೃಷ್ಟವಶಾತ್ ನಮ್ಮ ಸಂವಿಧಾನದಲ್ಲಿ ಅದರ ನಮೂದು ಮಾಡಿಲ್ಲ. ಇದೇ ರೀತಿ ಹಿಂದಿ ಕುರಿತು ಪಕ್ಷವು ಒಂದು ನಿರ್ಧಾರಕ್ಕೆ ಬಂದಿತ್ತು. ಆದರೂ ಹಿಂದಿಯ ನಮೂದು ಕರಡಿನಲ್ಲಿ ಕಾಣದಾಗಿದೆ. ಗೋವಿನ ರಕ್ಷಣೆ ಕುರಿತಂತೆ ನಿರ್ಣಯದ ವಿಚಾರ ನಮೂದಾಗಿಲ್ಲ. ನಾನು ಒಟ್ಟಾರೆ ಆ ನಿರ್ಣಯವನ್ನು ಕಾರ್ಯರೂಪಕ್ಕೆ ತರಬೇಕು. ಇಲ್ಲವೇ ಅದನ್ನು ಕೆಳಗಿನಂತೆ ವಿಸ್ತರಿಸಬೇಕು ಎಂದು ವಿನಮ್ರತೆಯಿಂದ ನಿವೇದಿಸಿಕೊಳ್ಳುತ್ತೇನೆ.

"ರಾಷ್ಟ್ರೀಯರಿಗೆ ಸಾಕಷ್ಟು ಆಹಾರ, ನೀರು ಮತ್ತು ಉಡುಪು ಒದಗಿಸುವ ಸರ್ಕಾರದ ಆದ್ಯ ಕರ್ತವ್ಯ ನಿರ್ವಹಿಸುವಲ್ಲಿ ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ

(ಎ) ಸಾಧ್ಯವಾದಷ್ಟು ಬೇಗನೆ ನದಿಗಳನ್ನು ಬಳಸಿ ನೀರಾವರಿ ಮತ್ತು ಜಲವಿದ್ಯುದ್ಯೋಜನೆಗಳನ್ನು ಮತ್ತು ಅಣೆಕಟ್ಟು ನಿರ್ಮಾಣ ಕೈಗೆತ್ತಿಕೊಳ್ಳುವುದು ಹಾಗೂ ಆಹಾರ ಮತ್ತು ಮೇವು ಉತ್ಪಾದನೆ ಹೆಚ್ಚಿಸುವುದು.

(ಬಿ) ದನಗಳ ಉಪಯುಕ್ತ ತಳಿಗಳನ್ನು ಕಾಯ್ದು, ಯೋಜಿಸಿ ಮತ್ತು ಸುಧಾರಿಸುವುದು ಹಾಗೂ ಉಪಯುಕ್ತ ದನಗಳ, ವಿಶೇಷವಾಗಿ ಹಾಲು ಕರೆಯುವ ಮತ್ತು ಭಾರ ಎಳೆಯುವ ದರಗಳು ಮತ್ತು ಎಳೆಕರುಗಳ ಹತ್ಯೆ ನಿಷೇಧಿಸುವುದು."

ಮಾನ್ಯರೆ, ಆರ್ಥಿಕ ಕ್ರಮದ ವಿಚಾರವಾಗಿ ಒಂದು ಅಂಶವನ್ನು ಹೇಳಲು ಇಚ್ಛಿಸುತ್ತೇನೆ. ನನ್ನದೇನೂ ಆಕ್ಷೇಪಣೆ ಇಲ್ಲ. ಕೇಂದ್ರ ಬಹಳ ಬಲಿಷ್ಠ ಇರಬೇಕು. ಇನ್ನೂ ನನಗೆ ಸಂತೋಷವೆ. ಆದರೆ ಪ್ರಾಂತ್ಯಗಳ ಹಣಕಾಸುಗಳು ಒಂದು ದೃಢ ಆಧಾರದ ಮೇರೆಗೆ ಇರಬೇಕು ಎಂದು ಹೇಳುವುದು ನನ್ನ ಕರ್ತವ್ಯ. ಇಂದು ಸಾಮಾನ್ಯ ರೈತ ತನ್ನ ಬೆವರು ಮತ್ತು ರಕ್ತದಿಂದ ಸಂಪಾದಿಸುವ ಪ್ರತಿ ಆದಾಯದ ಒಂದು ಕಾಸಿಗೂ ತೆರಿಗೆ ಹಾಕದೆ ಬಿಟ್ಟಿಲ್ಲ. ಒಂದು ಬಿಘಾ ಜಮೀನಿನಲ್ಲಿ ಸಾಗುವಳಿ ಮಾಡಿದರೂ ಅವನು ಅದಕ್ಕೆ ತೆರಿಗೆ ಪಾವತಿಸಬೇಕು. ಇದಕ್ಕೆ ಹೋಲಿಸಿದರೆ ಭಾರತದ ಇತರ ಜನರ ಎರಡುಸಾವಿರ ರೂಪಾಯಿಗಳ ಆದಾಯಕ್ಕೂ ತೆರಿಗೆ ಇರುವುದಿಲ್ಲ. ಇದು ರೈತರಿಗೆ ಆಗಿರುವ ದೊಡ್ಡ ಅನ್ಯಾಯ. ಕೃಷಿ ಪ್ರಧಾನವಾಗಿರುವ ದೇಶದಲ್ಲಿ ಅವರದೇ ಜನಸಂಖ್ಯೆ ಹೆಚ್ಚು ಇದೆ. ದೇಶದಲ್ಲಿ ಈ ಅನ್ಯಾಯ ಮುಂದುವರಿದರೆ ಪರಿಣಾಮವೇನು ಎಂಬುದನ್ನು ಪರಿಗಣಿಸಬೇಕು. ಆದುದರಿಂದ ಪ್ರಾಂತೀಯ ಸರ್ಕಾರಗಳು ಆದಾಯ ತೆರಿಗೆಯ ಆಧಾರದ ಮೇಲೆ ಭೂಕಂದಾಯವನ್ನೂ

ವಿಧಿಸಬೇಕು ಎಂದು ನಾನು ಇಚ್ಛಿಸುತ್ತೇನೆ; ಈ ಉದ್ದೇಶಕ್ಕೆ ಅವರ ಹಣಕಾಸು ಸ್ಥಿತಿಯನ್ನು ಬಲಪಡಿಸಬೇಕು. ಪಂಜಾಬಿಯಾಗಿ ನಾನು ಇನ್ನೂ ಒಂದು ಅಂಶವನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಪಂಜಾಬ್ ಭಾರತದ ಸ್ವಾತಂತ್ರ್ಯದ ಪರಿಣಾಮ ವಿಭಜನೆಯಾಯಿತು. ಅದರ ಪರಿಣಾಮವಾಗಿ ಈ ಪ್ರಾಂತ್ಯದ ಇಡೀ ಆಡಳಿತ ಪಲ್ಲಟಗೊಂಡಿತು. ಅದನ್ನು ಪುನಃ ಇತರ ಪ್ರಾಂತ್ಯಗಳೊಂದಿಗೆ ಸಮವಾಗಿ ತರಲು ಕಡೇಪಕ್ಷ ಹತ್ತು ವರ್ಷಗಳು ಆವಶ್ಯಕ ಮತ್ತು ಹಣಕಾಸು ಸಂಬಂಧವಾಗಿ ಪೂರ್ವಪಂಜಾಬಿಗೆ ವಿಶೇಷ ರಿಯಾಯಿತಿ ತೋರಬೇಕಿದೆ.

**ಮಾನ್ಯ ಉಪಸಭಾಧ್ಯಕ್ಷರು** : ಎಲ್ಲರೂ ವಸ್ತುಪ್ರದರ್ಶನಕ್ಕೆ ಹೋಗಬೇಕಿರುವುದರಿಂದ, ಸದನವನ್ನು ಮುಂದೂಡಬೇಕೆಂದು ಹಲವರು ಗೌರವಾನ್ವಿತ ಸದಸ್ಯರಿಂದ ಸಲಹೆಗಳು ಬಂದಿವೆ. ಸದನದ ಅಭಿಪ್ರಾಯಗಳನ್ನು ನಾನು ತಿಳಿಯಬಯಸುತ್ತೇನೆ.

**ಹಲವು ಗೌರವಾನ್ವಿತ ಸದಸ್ಯರು** : ಆಗಲಿ, ಹಾಗೆ ಮಾಡಬಹುದು.

**ಮಾನ್ಯ ಉಪಸಭಾಧ್ಯಕ್ಷರು** : ಮಾತನಾಡ ಬಯಸುವ ಅರವತ್ತು ಮಹನೀಯರ ಹೆಸರುಗಳು ನನ್ನ ಬಳಿ ಇವೆ. ಮುಂದೂಡುವುದು ಎಂದರೆ ಮಾತನಾಡಲು ಕೆಲವೇ ಕೆಲ ಜನರಿಗೆ ಸಾಧ್ಯ. ಏಕೆಂದರೆ ಉಳಿದಿರುವುದು ಒಂದೇ ದಿನ. ಅವರು ಏನು ಬಯಸುತ್ತಾರೆಂಬುದು ಸದನಕ್ಕೆ ಬಿಟ್ಟ ವಿಚಾರ.

**ಒಬ್ಬ ಗೌರವಾನ್ವಿತ ಸದಸ್ಯರು** : ನಾವು ನಾಲ್ಕೂವರೆ ಗಂಟೆಗೆ ಮುಂದೂಡಬಹುದು.

**ಮಾನ್ಯ ಉಪಸಭಾಧ್ಯಕ್ಷರು** : ನಾವು ನಾಲ್ಕುಕಾಲು ಗಂಟೆವರೆಗೆ ನಡೆಸೋಣ.

**ಶ್ರೀ ಆರ್.ಆರ್. ದಿವಾಕರ** (ಬಾಂಬೆ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ನನಗೆ ಮೊದಲು ಮಾತನಾಡಿದ ಗೌರವಾನ್ವಿತ ಸದಸ್ಯರು ಸಾಕಷ್ಟು ಹಿನ್ನೆಲೆಯನ್ನು ಒದಗಿಸಿದ್ದಾರೆ. ಅದೇ ಹಿನ್ನೆಲೆಯಲ್ಲಿ ಸಾಗಬೇಕಾಗಿದ್ದು, ನಾನು ಸದನದ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನಮ್ಮ ದೇಶಕ್ಕೆ ಒಂದು ಹೊಸ ಸಂವಿಧಾನ ಕೊಡುವುದರತ್ತ ನಾವು ಇರುವುದರಿಂದ ನನ್ನ ದೃಷ್ಟಿಯಲ್ಲಿ ಅತಿ ಮುಖ್ಯ ಎಂದು ಕೆಲವು ವಿಷಯಗಳನ್ನು ಮುಂದಿಡಲು ನಾನು ಬಯಸುತ್ತೇನೆ. ನಮ್ಮ ಮುಂದೆ ಇರುವ ಕರಡು ಸಂವಿಧಾನ ನಿಜವಾಗಿ ಒಂದು ಸ್ಮರಣೀಯ ಕೆಲಸ ಎಂದು ಸ್ಪಷ್ಟಗೊಳಿಸಲು ನಾನು ಬಯಸುತ್ತೇನೆ ಮತ್ತು ನಾವೆಲ್ಲ ಕರಡು ರಚನಾ ಸಮಿತಿ ಮತ್ತು ಸದನದ ಮೂಲಕ ಸಾದರಪಡಿಸಿದ ಅದರ ಅಧ್ಯಕ್ಷರಿಗೆ ಅಭಿನಂದನೆಗಳನ್ನು ಈಗಾಗಲೇ ಸಲ್ಲಿಸಿದ್ದೇವೆ. ಅದೇ ಕಾಲಕ್ಕೆ ಸಂವಿಧಾನ ರಚನಾಸಭೆಯ ನಿರ್ಣಯಗಳನ್ನು ಕರಡು ರಚನಾಸಮಿತಿ ಸೇರಿಸಿದೆಯಲ್ಲದೆ ನನ್ನ ವಿನಮ್ರ ಅಭಿಪ್ರಾಯದಲ್ಲಿ ಅದು ಬರಿಯ ಕರಡು ರಚನೆಯ ವ್ಯಾಪ್ತಿಯನ್ನು ಮೀರಿ ಹೋಗಿದೆ ಎಂದು ಬೊಟ್ಟು ಮಾಡಿ ತೋರಿಸಬಯಸುತ್ತೇನೆ. ಅದು ನಿರ್ಣಯಗಳನ್ನು ಪರಾಮರ್ಶೆ ಮಾಡಿದೆ. ಕೆಲವು ನಿರ್ಣಯಗಳನ್ನು ಪರಿಷ್ಕರಿಸಿದೆ ಮತ್ತು ಹಲವಕ್ಕೆ ಸಾಧ್ಯವಿದ್ದಂತೆ ಹೊಸ ರೂಪ ಕೊಟ್ಟಿದೆ. ಸನ್ನಿವೇಶಗಳಡಿ ಅದು ಅನಿವಾರ್ಯವಿದ್ದಿರಬಹುದು. ಆದರೆ ಅದೇ ಸಮಯಕ್ಕೆ ನಾವು ಕರಡನ್ನು ಪರಿಗಣಿಸುವಾಗ ಮತ್ತು ನಮ್ಮ ತಿದ್ದುಪಡಿಗಳನ್ನು ಕೊಡುವಲ್ಲಿ ಆಲೋಚಿಸುತ್ತಿರುವಾಗ ಸದನದ ಸದಸ್ಯರು ಈ ಅಂಶದ ಬಗ್ಗೆ ಜಾಗರೂಕರಿರಬೇಕು.

ನಾನು ಮಾತನಾಡಬೇಕೆಂದಿರುವ ಎರಡನೆಯ ಅಂಶ ಕರಡಿನ ರಚನೆಯನ್ನು ತ್ವರಿತಗೊಳಿಸುವ ಬಗ್ಗೆ ಕೆಲವರ ಆತುರ. ಕರಡನ್ನು ಪರಿಶೀಲಿಸುವಲ್ಲಿ ಕರಡಿನ ಮೂಲಕ ಹೋಗುವಲ್ಲಿ ಹೆಚ್ಚು ಆತುರಪಡುವುದು ಲಾಭಕರ ಎಂದು ನಾನು ತಿಳಿದಿಲ್ಲ. ಸಾಕಷ್ಟು ಸಮಯ ಕೊಡಬೇಕು ಮತ್ತು ತಿದ್ದುಪಡಿಗಳು ದಮನಕ್ಕೊಳಗಾಗಬಾರದು ಮತ್ತು ಅವಕ್ಕೆ ಸಾಕಷ್ಟು ಸಮಯ ಕೊಡಬೇಕು. ಸ್ವತಂತ್ರ ಭಾರತ ಅಸ್ತಿತ್ವಕ್ಕೆ ಬಂದ ದಿನದಿಂದ ಒಂದು ವರ್ಷಕ್ಕೂ ಹೆಚ್ಚು ಮತ್ತು ಈ ವರ್ಷದ ದಟ್ಟ ಅನುಭವದಿಂದ ಹೇಳುತ್ತಿದ್ದೇನೆ. ಈ ಅನುಭವವೇ ತಾತ್ಕಾಲಿಕ ತಡೆಗೆ ಮತ್ತು ಕರಡಿನಲ್ಲಿ ಹಲವಾರು ಉಪಬಂಧಗಳನ್ನು ಬದಲಾಯಿಸುವ ಕುರಿತು ಆಲೋಚಿಸುವಂತೆ ಮಾಡಬೇಕು.

ವಯಸ್ಕರ ಮತದಾನದ ಪ್ರಶ್ನೆ ತೆಗೆದುಕೊಳ್ಳೋಣ. ನಾವು ಹಲವರು ನೇರ ವಯಸ್ಕರ ಮತದಾನಕ್ಕೆ ಉಪಕ್ರಮಿಸಿದರೆ, ಶಾಸನಸಭೆಗಳಲ್ಲಿ ಅಪೇಕ್ಷಿತ ಮಾದರಿಯ ಜನರನ್ನು ಹೊಂದಲಾದೀತೇ, ಈಗಾಗಲೇ ಆಲೋಚಿಸುತ್ತಿದ್ದೇವೆ. ಈಗಿರುವಂತೆ ವಯಸ್ಕರ ಮತದಾನ ಪದ್ಧತಿ ಇಟ್ಟುಕೊಳ್ಳಬೇಕಾದರೆ, ಮತದಾರರ ಸಮುದಾಯಕ್ಕೆ ಸಂಬಂಧಿಸಿದಂತೆ ನಮ್ಮ ಯೋಚನೆಗಳನ್ನು ಪರಿಗಣಿಸಿ ಒಟ್ಟಾರೆ ಅಭ್ಯರ್ಥಿಗಳ ವಿದ್ಯಾರ್ಹತೆ, ಶಾಸನಸಭೆಗಳಿಗೆ ಯಾರು ತಮ್ಮ ಜವಾಬ್ದಾರಿಗಳನ್ನು ಭುಜದ ಮೇಲೆ ಹೊರಲು ನಿಜವಾಗಿ ಸಮರ್ಥರು ಎಂದು ನೋಡಬೇಕು ಎಂದು ಸಲಹೆ ಮಾಡುವವರಲ್ಲಿ ನಾನೂ ಒಬ್ಬ. ಮತ ಇರುವ ಪ್ರತಿಯೊಬ್ಬ ಅಭ್ಯರ್ಥಿಯಾಗಲೂ ಅರ್ಹ ಎಂಬ ಪಾಶ್ಚಾತ್ಯ ಪ್ರಜಾಪ್ರಭುತ್ವ ವಿಧಾನ, ಒಂದು ಮೂಢನಂಬಿಕೆ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಪಾಶ್ಚಾತ್ಯ ದೇಶಗಳ ಈ ಸಂಪ್ರದಾಯ ಅನುಸರಿಸಲು ಪ್ರಜಾಪ್ರಭುತ್ವದ ಉದ್ದೇಶಗಳಿಗೆ ಅದು ಸಂಪೂರ್ಣ ಆವಶ್ಯಕ ಎಂದು ನಾನು ತಿಳಿಯುವುದಿಲ್ಲ. ನಾವು ಒಂದು ಗಣನೀಯ ಅಂಶ ಕುರಿತು ಚೆನ್ನಾಗಿ ಆಲೋಚಿಸಬಹುದು. ಅದೆಂದರೆ ಕೇವಲ ಒಬ್ಬ ಮಾಮೂಲಿ ಪ್ರತಿನಿಧಿಯಾಗಿರದೆ ಶಾಸನ ರಚಿಸಬಲ್ಲ ಒಬ್ಬ ಪ್ರತಿನಿಧಿಯಾಗಿ ಕೂಡಾ ನಿಶ್ಚಿತ ನಿಲುವನ್ನು ತಾಳಬಲ್ಲ ಒಬ್ಬ ಶಾಸಕನನ್ನು ನಾವು ಬಯಸುತ್ತೇವೆ. ನಾವು ರಾಷ್ಟ್ರೀಯತೆ, ಏಕಪ್ರಭುತ್ವ ಸರ್ಕಾರ, ಬಲಿಷ್ಠ ಕೇಂದ್ರ ಮೊದಲಾದ ಶಬ್ದಗಳಲ್ಲಿ ಮಾತನಾಡುವಲ್ಲಿ, ಈ ಎಲ್ಲ ಶಬ್ದಗಳು ನಾವು ನಮ್ಮ ಶಾಸನಸಭೆಗಳಲ್ಲಿ ಇಂತಹ ದೃಷ್ಟಿಕೋನವುಳ್ಳ ಶಾಸಕರನ್ನು ಹೊಂದದಿದ್ದರೆ ವ್ಯರ್ಥ ಮತ್ತು ಅರ್ಥರಹಿತ. ಹಾಗೆ ನೋಡಿದರೆ ಸಂವಿಧಾನವು ತನ್ನ ಬಲವನ್ನು ಯಾರು ಕೆಲಸಮಾಡುವರೋ ಆ ಜನರಿಂದ ಸೆಳೆದುಕೊಳ್ಳುತ್ತದೆ ಮತ್ತು ನಾವು ಶಾಸನಸಭೆಗಳಿಗೆ ಯಾರು ಇಡೀ ಸಂವಿಧಾನವನ್ನು ಅರ್ಥಮಾಡಿಕೊಳ್ಳಬಲ್ಲರೋ, ಅದರ ಸಾರವನ್ನು ಗ್ರಹಿಸಬಲ್ಲರೋ ಅಂಥವರನ್ನು ಕಳುಹಿಸಲು ಸಮರ್ಥರಿಲ್ಲದಿದ್ದರೆ, ತುಂಬ ಕಷ್ಟ ಎಂದು ನಾನು ತಿಳಿಯುತ್ತೇನೆ. ನಾನು ಇಂತಹ ಇನ್ನು ಹೆಚ್ಚು ಪರಿಶೀಲನಾರ್ಹ ಅಂಶಗಳಿದ್ದು ವರ್ಷದಲ್ಲಿ ನಮಗೆ ಅದರ ಅನುಭವ ದೊರೆತಿದೆ. ಆ ಅನುಭವ ನಮಗೆ ಸಕಾಲದಲ್ಲಿ ಪ್ರಯೋಜನಕಾರಿಯಾಗಬೇಕೆಂದು ಆಶಿಸುತ್ತೇನೆ.

ಈ ವೇದಿಕೆಯಿಂದ ಮತ್ತೆ ನೆನೆಪಿಗೆ ತರುವ ಇನ್ನೊಂದು ಮುಖ್ಯ ವಿಷಯ ಭಾಷಾವಾರು ಪ್ರಾಂತ್ಯಗಳು ಮತ್ತು ಭಾಷೆಯನ್ನು ಪ್ರಶ್ನೆ ಕುರಿತದ್ದು. ಭಾಷೆಗಳ ಸಮರ ದಿನದಿಂದ ದಿನಕ್ಕೆ ಹೆಚ್ಚಾಗಿ ಆಗುತ್ತಿದೆ. ಅದು ಹಲವಾರು ನಂಬಲಾಗದ ರೀತಿಯಲ್ಲಿ ಪ್ರಕಟಗೊಳ್ಳುತ್ತಿದೆ. ಆದರೆ ನಾವೆಲ್ಲ ಒಂದು ರಾಷ್ಟ್ರಭಾಷೆ ಇರಬೇಕೆಂದು ಒಪ್ಪಿಕೊಂಡಿರುವೆವು ಎಂದಾಗ, ವಿವರಗಳನ್ನು ಕುರಿತು ಇನ್ನಷ್ಟು ಜಗಳ ಹುಟ್ಟಿಕೊಂಡಿದೆ. ಅನಾವಶ್ಯಕವಾಗಿ ನಮ್ಮ ಸಂವಿಧಾನವೇ ಆ ಭಾಷೆಯಲ್ಲಿರಬೇಕು ಎಂದು ನಾನು ಆಲೋಚಿಸುವುದಿಲ್ಲ. ಹಿಂದಿಭಾಷೆಗೆ ಅಥವಾ ಹಿಂದೂಸ್ಥಾನಿ ಅಥವಾ ಬೇರೆ ಯಾವ ಭಾಷೆಯಾದರೂ ಅದಕ್ಕೆ ಗೌರವ ನೀಡಿ, ಕಾನೂನುಬದ್ಧ ಮತ್ತು ಸಾಂವಿಧಾನಿಕ ಕೆಲಸಗಳಲ್ಲಿ ಹಾಗೂ ಸಾಂವಿಧಾನಿಕ ವಿಧಾನಗಳಲ್ಲಿ ಮತ್ತು ವ್ಯಾಖ್ಯಾನಗಳಲ್ಲಿ ಅದರ ಮುಕ್ತ ಬಳಕೆಗೆ ಆವಶ್ಯವಾದ ಬಹ್ವರ್ಥಗಳನ್ನು ಇನ್ನೂ ಕಂಡುಕೊಂಡಿಲ್ಲ. ಆದುದರಿಂದ, ನಾವು ಆ ರೀತಿ ಮುನ್ನುಗ್ಗುವ ಮೊದಲು ತುಸು ಕಾಲ ಕಾಯಬೇಕು. ಇದು ಸಂಪೂರ್ಣ ಆವಶ್ಯಕ. ನಾವು ಸಂವಿಧಾನವನ್ನು ಇಂಗ್ಲಿಷ್‌ಭಾಷೆಯಲ್ಲಿ ಅಂಗೀಕರಿಸಬೇಕು ಮತ್ತು ನಾವು ಅದರ ಹಿಂದಿ ಭಾಷಾಂತರವನ್ನು ಹೊಂದಿರಬೇಕು. ಆದರೆ ಒಂದು ಅಧಿಕೃತ ಭಾಷಾಂತರಕ್ಕೆ ಸಂಬಂಧಿಸಿದಂತೆ ಮುಂದಿನ ಕೆಲವು ವರ್ಷಗಳವರೆಗೆ ಇಂಗ್ಲಿಷ್ ಆವೃತ್ತಿಯೊಂದೆ ಅಧಿಕೃತನಾಗಬೇಕು ಎಂದು ಆಶಿಸುತ್ತೇನೆ.

ಈಗ ಇಂಗ್ಲಿಷ್‌ಭಾಷೆಯ ಬಗ್ಗೆ ಹಳೆ ದ್ವೇಷ ಅಥವಾ ಅನಿಚ್ಛೆ ೧೯೪೭ರ ಆಗಸ್ಟ್ ೧೫ರೊಂದಿಗೆ ಕೊನೆಗಾಣಬೇಕು. ೧೯೪೭ರ ಆಗಸ್ಟ್ ೧೫ಕ್ಕೆ ಮೊದಲು ನಾವು ಇಂಗ್ಲಿಷ್‌ಭಾಷೆಯನ್ನು ಗುಲಾಮರಂತೆ ಉಪಯೋಗಿಸುತ್ತಿದ್ದೆವು ಆದುದರಿಂದ ಈಗಲೂ ಅಂತಹ ಜುಗುಪ್ಸೆಯನ್ನು ಕಾಣುತ್ತಿದ್ದೇವೆ. ಆದರೆ ಇಂದು, ಆ ಭಾಷೆಯನ್ನು ನಮ್ಮೊಂದು ಆಯ್ಕೆಯಾಗಿ, ಅದರ ಯೋಗ್ಯತೆಗಾಗಿ, ಜೊತೆಗೆ ಕಾರ್ಯತಃ ಸಂದರ್ಭಗಳ

ಜಟಿಲತೆಯಿಂದಾಗಿ ಹಾಗೂ ನಮ್ಮ ವೈವಿಧ್ಯಮಯ ಭಾಷೆಗಳ ನಡುವೆ ನಾವು ಅದನ್ನು ಬಳಸುತ್ತೇವೆ. ನಾವು ಅದನ್ನು ಕೆಲಕಾಲ ಅವಲಂಬಿಸುತ್ತೇವೆ; ಮತ್ತು ಅದೇ ಅತ್ಯುತ್ತಮ ಕಾರ್ಯವಿಧಾನ. ಅದು ಅತ್ಯಂತ ಸಾಮಾನ್ಯ ಕ್ರಮದತ್ತ ತಲುಪುವ ದೃಷ್ಟಿಯಿಂದಲೂ ಸ್ವಾಗತಾರ್ಹ. ಈ ಸಮಸ್ಯೆಯತ್ತ ನೋಡುವಲ್ಲಿ ಇದುವೆ ಮಹತ್ತಮ ಸಾಮಾನ್ಯ ಅಂಶ ಎಂದು ಕರೆಯಬಹುದು; ಅನಂತರ ನಾವು ಒಳ್ಳೆಯ ಹಾಗೂ ಸಾಮರಸ್ಯದಿಂದ ಕೂಡಿದ ತೀರ್ಮಾನಕ್ಕೆ ಬರುತ್ತೇವೆ.

ಈಗ ಭಾಷಾವಾರು ಪ್ರಾಂತ್ಯಗಳನ್ನು ಕುರಿತ ಪ್ರಶ್ನೆ ಆಯೋಗದ ಮುಂದೆ ಇದೆ. ಇದನ್ನು ನಮ್ಮ ಸಭೆಯ ಅಧ್ಯಕ್ಷರು ನೇಮಕಮಾಡಿರುವರು; ಅದರ ಬಗ್ಗೆ ಏನೆಂದು ಹೇಳಲು ಇದು ಸಕಾಲವಲ್ಲ. ನಿಜ ಹೇಳುವುದಾದರೆ, ಈ ವೇದಿಕೆಯಿಂದ ಯಾರೊಬ್ಬರೂ ಅದನ್ನು ಉಲ್ಲೇಖಿಸಿಲ್ಲ. ಆದರೆ ಅದನ್ನು ನಾನು ಉಲ್ಲೇಖಿಸಿರುವ ಕಾರಣ. ಈ ಪ್ರಶ್ನೆಯನ್ನು ಯಾವುದೇ ರೀತಿಯಲ್ಲಿ ಕೈ ಬಿಡಬಾರದು ಅಥವಾ ಮುಂದೂಡಬಾರದು. ಏಕೆಂದರೆ ಸಂವಿಧಾನ ರಚನಾಸಭೆಯು ದೇಶದ ಇಡೀ ಭವಿಷ್ಯವನ್ನು ಪರಿಗಣಿಸುತ್ತಿರುವುದರಿಂದ (ಹಾಗೂ ಪ್ರಾಂತ್ಯಗಳನ್ನು ಕೂಡ ಪರಿಗಣಿಸುತ್ತಿರುವುದರಿಂದ) ಮಾರ್ಗದಲ್ಲಿ ತೊಡಕುಗಳಿಲ್ಲ ಎಂಬ ಭಾವನೆಯಿಂದ ಅದನ್ನು ಬದಿಗೊತ್ತಿ ಏನೊಂದೂ ಉಪಯೋಗವಿಲ್ಲ. ತೊಡಕುಗಳಿದ್ದರೆ, ಒಳ್ಳೆಯದು. ನಾವೆಲ್ಲ ಆ ತೊಡಕುಗಳನ್ನು ನಿರ್ಮೂಲಮಾಡಲು ಇಲ್ಲಿದ್ದೇವೆ. ಒಂದು ರಾಷ್ಟ್ರವಾಗಿ ಹತ್ತಿಕ್ಕಲಾಗದ ಪಾರಾಗಲಾರದ ಕಷ್ಟಗಳು ಇವೆ ಎಂದು ನಾನು ತಿಳಿದಿಲ್ಲ. ದೊಡ್ಡ ದೊಡ್ಡ ಕಷ್ಟಗಳನ್ನೇ ಎದುರಿಸಿದ್ದೇವೆ. ಬಹುಶಃ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ತೊಡಕುಗಳನ್ನು ಎದುರಿಸಬೇಕಾಗಿದೆ ಅಂತಹ ಸಮಯದಲ್ಲಿ ರಾಷ್ಟ್ರದ ಪ್ರತಿಯೊಂದು ಅಂಗವೂ, ದೇಶದ ಪ್ರತಿ ಸಮೂಹವೂ, ಅದರ ಭವಿಷ್ಯ ಖಾತರಿಯಾಗಿದೆ, ಅದರ ಬೆಳವಣಿಗೆಯ ಖಾತರಿಯಾಗಿದೆ ಎಂದು ಭಾವಿಸುವುದು ಆವಶ್ಯಕ ಮತ್ತು ಭಾರತದ ಭವಿಷ್ಯ ಸಂವಿಧಾನದಲ್ಲಿದೆ ಅದರ ಅಸ್ತಿತ್ವವನ್ನು ದಮನ ಮಾಡುವ ಅಥವಾ ಅದನ್ನು ಉಪೇಕ್ಷಿಸುವ ಅಪಾಯ ಯಾವುದೂ ಇಲ್ಲ ಎಂದೂ ಭಾವಿಸುವುದು ಆವಶ್ಯಕ.

ಮಾನ್ಯರೆ, ಮತ್ತೊಮ್ಮೆ ಸಂವಿಧಾನದ ಬಗೆಗೆ ನಾವು ಆತುರಪಡಬಾರದೆಂದು ಕೋರುತ್ತೇನೆ. ಅದು ಕೆಲವು ಹೆಚ್ಚಿನ ದಿನಗಳನ್ನು ಇಲ್ಲವೆ ಕೆಲವು ಕಡಿಮೆ ದಿನಗಳನ್ನು ತೆಗೆದುಕೊಳ್ಳಬಹುದು. ಇಡೀ ವರ್ಷ ನಾವು ಹೊಂದಿದ ಅನುಭವದ ಪರಿಗಣನೆಯನ್ನು ಪೂರಾ ತೆಗೆದುಕೊಳ್ಳಬೇಕೆಂದು ಮತ್ತು ಆ ಅನುಭವವನ್ನು ನಮ್ಮ ಮುಂದೆ ಇರುವ ಕರಡು ಸಂವಿಧಾನದ ಉಪಬಂಧಗಳ ರಚನೆಯಲ್ಲಿ ಸದುಪಯೋಗಪಡಿಸಬೇಕೆಂದು ಕೋರುತ್ತೇನೆ.

ಈ ಕೆಲವು ಟೀಕೆಗಳೊಂದಿಗೆ ನಾನು ಕರಡನ್ನು ಮೆಚ್ಚುತ್ತೇನೆ. ಮತ್ತೊಮ್ಮೆ ಕರಡು ರಚನಾಸಮಿತಿಯನ್ನು ಮತ್ತು ಅದರ ಸಮರ್ಥ ಅಧ್ಯಕ್ಷರನ್ನು ಹಾಗೂ ಅದನ್ನು ಈ ಸದನಕ್ಕೆ ಮಂಡಿಸಿರುವ ರೀತಿಗೆ ಅಭಿನಂದಿಸುತ್ತೇನೆ.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ** (ಸಿಕ್ಕಿಮ್ ಮತ್ತು ಕೂಚ್ ಬಿಹಾರ್) : ಮಾನ್ಯ ಉಪಸಭಾಧ್ಯಕ್ಷರೆ, ಸದನವು ತನ್ನ ಮುಂದೆ ಇರುವ ಕರಡು ಕುರಿತಂತೆ ಕೆಲವು ತುಂಬ ಸಾರವತ್ತಾದ ಮತ್ತು ಉಪಯುಕ್ತ ಟೀಕೆಗಳನ್ನು ಕಳೆದ ಎರಡು ದಿನಗಳಿಂದ ಕೇಳಿದೆ. ಅದನ್ನು ಪುನರುಚ್ಚರಿಸುವುದು ಅಥವಾ ಈಗಾಗಲೇ ಮಾಡಲಾಗಿರುವ ಸಲಹೆಗಳನ್ನು ಸಂಗ್ರಹರೂಪದಲ್ಲಿ ಹೇಳುವುದು ನನ್ನ ಉದ್ದೇಶವಲ್ಲ. ನಾನು ಕೇವಲ ಒಂದು ಸಾಮಾನ್ಯ ಟೀಕೆ ಮಾಡಲು ಮತ್ತು ಒಂದು ಮನವಿ ಮಾಡಲು ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ.

ಕರಡು ಜನರನ್ನು ಹೆಚ್ಚು ಜಗಳಗಂಟಿಗರನ್ನಾಗಿ, ಮಾಡಿ ಅವರು ನ್ಯಾಯಾಲಯಗಳಿಗೆ ಮೊರೆಹೋಗುವುದು, ಕಡಿಮೆ ನಿಷ್ಠೆ, ಸತ್ಯ ಹಾಗೂ ಅಹಿಂಸೆಯ ಆಚರಣೆಯಲ್ಲಿ ಲೋಪ ಇಂತಹವುಗಳಲ್ಲಿ ಬಗ್ಗೆ ನನ್ನದೊಂದಿಷ್ಟು ಸಾಮಾನ್ಯ ಟೀಕೆ ಇದೆ. ಮಾನ್ಯರೆ, ಕರಡು ವಾಸ್ತವದಲ್ಲಿ ವಕೀಲರ ಸ್ವರ್ಗ. ಅದು ದಾವೆ ಹಾಕಲು ವ್ಯಾಪಕ ದಾರಿಗಳನ್ನು ತೆರೆಯುತ್ತದೆ ಮತ್ತು ನಮ್ಮ ಸಮರ್ಥ ಹಾಗೂ ಚತುರ ವಕೀಲರಿಗೆ ಸಾಕಷ್ಟು ಕೆಲಸ ಕೊಡುತ್ತದೆ. ಇದು ಒಟ್ಟಾರೆ ರಾಷ್ಟ್ರಕ್ಕೆ ನೆರವಾಗುವುದೇ ಎಂಬುದು ತುಂಬ ಅನುಮಾನ.

ಕರಡಿನ ಹಲವು ಉಪಬಂಧಗಳು ಕೆಲವು ಭ್ರಮಾತ್ಮಕ ಅಥವಾ ರಿಯಾಯಿತಿಗಳನ್ನು ಒದಗಿಸುತ್ತವೆ. ಅವುಗಳಲ್ಲಿ ಕೆಲವು ನನ್ನ ಅಭಿಪ್ರಾಯದಲ್ಲಿ ಹಾನಿಕಾರಕ ಕೂಡ. ಏಕೆ ಈ ಕುಂದು? ಈ ಕರಡು ತಯಾರಿಕೆಗೆ ಬಳಸಿರುವ ಕಚ್ಚಾವಸ್ತುವೆಲ್ಲ ವಿದೇಶಿ, ಕಲ್ಪನೆಗಳು ವಿದೇಶಿ, ಉಡುಪು ವಿದೇಶಿ, ಈ ಅಟನುಕೂಲಗಳೊಂದಿಗೆ ಸಮಿತಿಯು ಮಾಡಿರುವುದಕ್ಕಿಂತ ಹೆಚ್ಚು ಉತ್ತಮವಾದುದನ್ನು ಮಾಡಲು ಸಾಧ್ಯವಿರಲಿಲ್ಲ ಎಂಬುದು ನನಗೆ ಆತಂಕವಾಗಿದೆ. ಈ ಹಂತದಲ್ಲಿ ಈ ದೋಷಗಳನ್ನು ತೆಗೆದುಹಾಕಲು ಸಾಧ್ಯವೇ ಎಂದು ಹೇಳಲು ನಾನು ಸಮರ್ಥನಲ್ಲ. ನನ್ನದೊಂದು ಆಗ್ರಹಪೂರ್ವಕ ಮನವಿ ಇದೆ. ಕರಡನ್ನು ಸದನವು ಖಂಡದಿಂದ ಖಂಡಕ್ಕೆ ಪರೀಕ್ಷಿಸಿದಾಗ ಎಲ್ಲ ಅನಾವಶ್ಯಕ ಉಪಬಂಧಗಳನ್ನು ತೆಗೆದುಹಾಕಲು ಪ್ರಯತ್ನಮಾಡಬೇಕು ಮತ್ತು ಭವಿಷ್ಯದಲ್ಲಿ ಪ್ರಭುತ್ವದ ಸಂಸತ್ತಿನಿಂದ ಶಾಸನಕ್ಕೆ ಹೆಚ್ಚು ಅನುಕೂಲಕರವಾದ ಉಪಬಂಧಗಳನ್ನು ಇಟ್ಟುಕೊಳ್ಳಬೇಕು.

ಸದನಕ್ಕೆ ನಾನು ಮಾಡಲಿರುವ ಮನವಿ ಇಂದು ಮತ್ತು ನಿನ್ನೆ ಹಲವು ಭಾಷಣಕಾರರು ಮಾತನಾಡಿದ ವಿಷಯಕ್ಕೆ ಸಂಬಂಧಿಸಿದಂತಿದೆ. ಅದು ಅಲ್ಪಸಂಖ್ಯಾತರಿಗೆ ಮುಸ್ಲಿಮರು, ಸಿಖ್ಖರು, ಅನುಸೂಚಿತ ಜಾತಿಗಳು ಮತ್ತು ಇತರರಿಗೆ ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿಯ ಸಂಬಂಧವಿದೆ. ನನ್ನ ಮಿತ್ರ ಶ್ರೀ ಕರೀಮುದ್ದೀನ್ ನಿನ್ನೆ ಮುಸ್ಲಿಮರಿಗೆ ಸ್ಥಾನಗಳ ಮೀಸಲಾತಿ ವಿರೋಧಿಸಿದಾಗ ತುಂಬ ಆರೋಗ್ಯಕರ ಸಂವಾದ ನಡೆಯಿತು. ನಾನು ಪ್ರತಿನಿಧಿಸಿರುವ ರಾಜ್ಯದಲ್ಲಿ, ಪ್ರತ್ಯೇಕ ಮತದಾರರ ಸಮುದಾಯಕ್ಕೆ ತಿರಸ್ಕಾರ ಮತ್ತು ಕಳೆದ ೨೫ ಅಥವಾ ೩೦ ವರ್ಷಗಳಲ್ಲಿ ಮುಸ್ಲಿಮರಿಗೆ ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿ ಕೊಡಲು ತಿರಸ್ಕಾರ, ಈ ಕ್ರಮಗಳಿಂದ ನನ್ನ ರಾಜ್ಯದಲ್ಲಿ ಹೆಚ್ಚು ಲಾಭಕರ ಫಲಿತಾಂಶ ದೊರೆಯಿತು. ಫಲಿತಾಂಶವೆಂದರೆ ಹಿಂದೂಗಳು ಮತ್ತು ಮುಸ್ಲಿಮರು ಯಾವಾಗಲೂ ಗೆಳೆಯರಂತೆ ಇದ್ದರು. ಮತ್ತು ೧೯೪೬, ೧೯೪೭ರಲ್ಲಿನ ತೊಂದರೆಗಳ ನಡುವೆಯೂ ಹೆಚ್ಚು ಗೆಳೆತನದಿಂದ ಇದ್ದರು. ಈ ವರ್ಷ ಕೂಡ ಒಬ್ಬರೊಬ್ಬರ ತಲೆ ತೆಗೆಯದೆ ಹೆಚ್ಚು ಗೆಳೆಯರಾಗಿ ಇದ್ದರು. ಅವರು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಸಹಕರಿಸಿದರು. ಮೀಸಲಾತಿ ಪ್ರತ್ಯೇಕತೆಯನ್ನು ಪ್ರೋತ್ಸಾಹಿಸುತ್ತದೆ. ನಾವು ಹೊಂದಿರುವ ಕನಸುಗಳು, ಅಂದರೆ ನಿಜವಾಗಿ ಒಂದು ಜಾತ್ಯತೀತ ರಾಷ್ಟ್ರ ರೂಪಿಸುವುದು ಇತ್ಯಾದಿಯನ್ನು ವಾಸ್ತವೀಕರಿಸಲು ಸ್ವಲ್ಪ ಸಮಯ ಮುಂದೂಡುವುದು ಲೇಸು. ಎಲ್ಲಿಯವರೆಗೆ ನಮ್ಮ ಸಮುದಾಯ ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿ ಕೋರುವುದೋ ಅಲ್ಲಿಯವರೆಗೆ ಜಾತ್ಯತೀತ ರಾಷ್ಟ್ರ ನನ್ನ ಅಭಿಪ್ರಾಯದಲ್ಲಿ ಒಂದು ದೂರದ ಕನಸಾಗಿ ಉಳಿಯುತ್ತದೆ. ಆದುದರಿಂದ ನನ್ನ ಎಲ್ಲ ಅಲ್ಪಸಂಖ್ಯಾತ ಗೆಳೆಯರಿಗೆ ತುಂಬ ಶ್ರದ್ಧಾಪೂರ್ವಕ ಮನವಿ ಮಾಡುತ್ತೇನೆ. ಮೀಸಲಾತಿಯನ್ನು ಹಕ್ಕನ್ನು ಸ್ವಯಂ ಕೈ ಬಿಡಬೇಕು. ಈ ಸಂವಿಧಾನವು ಒಂದು ನಿಜವಾದ ಪ್ರಜಾಪ್ರಭುತ್ವ ಶಕ್ತಿಯಾಗಿ ಬಲಗೊಳ್ಳಬೇಕು. ಯಾವುದೇ ದೋಷಗಳಿಲ್ಲದೆ ಜಾರಿಗೊಳ್ಳಬೇಕು. ಸಿಖ್ಖರಲ್ಲಿ ನನ್ನ ಗೆಳೆಯರೊಬ್ಬರು ಮನವಿಯೊಂದನ್ನು ಕೊಟ್ಟಿರುವುದು ಮೀಸಲಾತಿ ವಿರುದ್ಧ ಎಂದು ನಂಬಿದ್ದೇನೆ. ಅದೊಂದು ಆರೋಗ್ಯಕರ ಚಿಹ್ನೆ. ಸದ್ಯದಲ್ಲಿ ಅನುಸೂಚಿತ ಜಾತಿ ಜನ ಏನು ಹೇಳುತ್ತಾರೆಂಬುದನ್ನು ನಾನು ಇನ್ನೂ ಕೇಳಬೇಕಿದೆ. ವೈಯಕ್ತಿಕವಾಗಿ ನಾನು ಯಾವಾಗಲೂ ಅನುಸೂಚಿತ ಜಾತಿ ಎಂಬ ಹೆಸರನ್ನು ಯಾವುದೇ ವ್ಯಕ್ತಿಗೆ ಕೊಡುವುದು ಕಳಂಕ ಎಂದು ಭಾವಿಸುತ್ತೇನೆ.

(ಈ ಹಂತದಲ್ಲಿ ಸದಸ್ಯರ ಸಮಯ ಮೀರಿತೆಂದು ಸೂಚಿಸುವ ಗಂಟೆ ಬಾರಿಸಿತು)

ಮಾನ್ಯರೆ, ನಾನು ನಿಮ್ಮ ಕರೆಗೆ ಬಾಗುತ್ತೇನೆ. ನಾನು ಏನು ಹೇಳಬೇಕೆಂದಿದ್ದೇನೋ ಅದನ್ನೆಲ್ಲ ಸರಿಸುಮಾರು ಹೇಳಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಸದನವನ್ನು ೧೯೪೪೮ರ ನವೆಂಬರ್ ೮, ಸೋಮವಾರ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

ಬಳಿಕ ಸಭೆಯನ್ನು ೧೯೪೪೮ ನವೆಂಬರ್ ೮ರ ಸೋಮವಾರ ಬೆಳಗ್ಗೆ ಹತ್ತು ಗಂಟೆಗೆ ಮುಂದೂಡಲಾಯಿತು.

*[ಹಿಂದುಸ್ಥಾನಿ ಭಾಷಣದ ಇಂಗ್ಲಿಷ್ ಅನುವಾದ]*